ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 45 ನವಂಬರ್ 3-9, 1997 ಬೆಲೆ ರೂ. 2.00



ಲಾಲ್ ಹರ್ದಾಯಲ್

ಕನಸು ನನಸಾಗದ ಕರ್ನಾಟಕ ರಾಜ್ಯೋತ್ಸವ

ಎನ್.ಕೆ.ಉಪಾಧ್ಯಾಯ

ಭಾರತ ದೇಶ ಸ್ವಾತಂತ್ರ್ಯದ ಸ್ವರ್ಣಮಹೋತ್ಸವವನ್ನು ಆಚರಿಸುತ್ತಿರುವಾಗಲೇ ನವಕರ್ನಾಟಕ ರಾಜ್ಯದ ನಲ್ವತ್ತೊಂದರ ಉದಯೋತ್ಸವವನ್ನು ಆಚರಿಸುತ್ತಿದ್ದೇವೆ. ಆಂಗ್ಲರ ಗುಲಾಮಗಿರಿಯ ವಿರುದ್ಧ ದೇಶದ ಸ್ವಾತಂತ್ರ್ಯ ಚಳುವಳಿ ನಡೆಸುತ್ತಿರುವಾಗ ರೈತರು, ಕಾರ್ಮಿಕರು, ವಿದ್ಯಾರ್ಥಿ ಯುವಜನತೆ, ಚಿಕ್ಕ ಬಂಡವಾಳ, ದೇಶೀ ಕೈಗಾರಿಕೋದ್ಯಮಿಗಳು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುವಂತೆ ಆಕರ್ಷಿಸುವ ಸಲುವಾಗಿ ಈ ವರ್ಗಗಳ ಜನರಿಗೆಲ್ಲ ಅಂದಿನ ಕಾಂಗ್ರೆಸ್ ಮುಖಂಡರು ನಾನಾ ವಿಧದ ಆಸೆ ಆಕಾಂಕ್ಷೆಗಳನ್ನು ಪೂರೈಸುವ ಆಶ್ವಾಸನೆ ನೀಡಿದ್ದರು. ಜಮೀನ್ದಾರಿ ರದ್ದತಿ, ಪ್ರಗತಿಪರ ಭೂ ಸುಧಾರಣೆ, ದೇಶೀ ಕೈಗಾರಿಕೆಗಳಿಗೆ, ಕಾರ್ಮಿಕರಿಗೆ ರಕ್ಷಣೆ, ಪುಕ್ಕಟೆ ಶಿಕ್ಷಣ, ಎಲ್ಲರ ತಲೆ ಮೇಲೆ ಸೂರು, ಉತ್ತಮ ಆರೋಗ್ಯ ಸೇವೆ, ನಿರುದ್ಯೋಗ ಪರಿಹಾರ ಮುಂತಾದ ಆಶ್ವಾಸನೆಗಳು ಸಾರ್ವಜನಿಕರೆಲ್ಲಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಿತ್ತು.

ನಾವು ಸ್ವಾತಂತ್ರ್ಯಗಳಿಸಿ ಐವತ್ತು ವರ್ಷಗಳಾದರೂ ಕೂಡ, ಅಂದು ಹೋರಾಟ ನಡೆಯುತ್ತಿರುವಾಗ ಕಾಂಗ್ರೆಸ್‌ನ ಮುಖಂಡರು ಜನತೆಗಿತ್ತ ಆಶ್ವಾಸನೆಗಳೆಲ್ಲ ಕನಸಾಗಿಯೇ ಉಳಿದಿರುವುದನ್ನು ಕಾಣಬಹುದು. ಅಷ್ಟೇ ಅಲ್ಲ ನಾವು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯಕ್ಕೇನೇ ಅಪಾಯ ಉಂಟುಮಾಡುವ ಆರ್ಥಿಕ-ಕೈಗಾರಿಕಾ ನೀತಿಯನ್ನು ಹಿಂದಿನ ಕಾಂಗ್ರೆ ಸರಕಾರ ಈಗಿನ ಸಂಯುಕ್ತ ರಂಗ ಸರಕಾರ ಅನುಸರಿಸುತ್ತಿರುವುದು ಕಣ್ಣ ಮುಂದಿದೆ.

ಜನರ ಐಕ್ಯತೆಗೆ ಮಾರಕವಾಗುವ ರೀತಿಯಲ್ಲಿ ಬ್ರಿಟಿಶರು ಹಲವಾರು ಭಾಷೆಗಳನ್ನೊಳಗೊಂಡ ಪ್ರಾಂತಗಳನ್ನು ರಚಿಸಿದ್ದರು. ಮಾತೃಭಾಷೆಯಲ್ಲಿ ಆಡಳಿತ ನಡೆಸಲು, ಶಿಕ್ಷಣ ಒದಗಿಸಲು ಕಲೆ-ಸಂಸ್ಕೃತಿಗಳ ವಿಕಾಸಕ್ಕೆ ಅದರಿಂದ ಆತಂಕ ಉಂಟಾಗುತ್ತಿತ್ತು. ಇದನ್ನರಿತ ಅಂದಿನ ಕಾಂಗ್ರೆಸ್ ಮುಖಂಡರೆಲ್ಲ ಸ್ವಾತಂತ್ರ್ಯ ಸಿಕ್ಕ ಕೂಡಲೇ ಭಾಷಾವಾರು ಪ್ರಾಂತ ರಚನೆ ಮಾಡುವ ಆಶ್ವಾಸನೆ ನೀಡಿದ್ದರು. ಅಧಿಕಾರ ಸಿಕ್ಕನಂತರ ಇತರ ಆಶ್ವಾಸನೆಗಳ ಜೊತೆಯಲ್ಲಿ ಭಾಷಾವಾರು ಪ್ರಾಂತ ರಚನೆಯನ್ನು ಮರೆಯಲಾಯಿತು. 1947 ರಲ್ಲಿ ಸ್ವಾತಂತ್ರ್ಯ ಸಿಕ್ಕನಂತರ ಆಳುವ ಕಾಂಗ್ರೆಸ್ ಮುಖಂಡತ್ವ ಸುಳ್ಳು ನೆಪಮುಂದೊಡ್ಡಿ ಭಾಷಾವಾರು ಪ್ರಾಂತ ರಚನೆಯನ್ನು ಮುಂದೂಡುತ್ತಿದ್ದಾಗ ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಗಳು ನಿರ್ಣಯಗಳ ಮೂಲಕ ಕೇಂದ್ರ ಸರಕಾರದ ಮೇಲೆ ಒತ್ತಾಯ ತರುತ್ತಿದ್ದಾಗ, ಕಮ್ಯುನಿಸ್ಟ್ ಪಾರ್ಟಿ, ಪ್ರಜಾ ಸೋಶಲಿಸ್ಟ್ ಪಾರ್ಟಿ, ಪುರೋಗಾಮಿ ಪಕ್ಷ ಹಾಗೆಯೇ ಕಾಂಗ್ರೆಸ್ ಸೇರಿ ಬಂದ್, ರೈಲ್‌ರೋಕೋ, ಸತ್ಯಾಗ್ರಹ, ಜೈಲುವಾಸಗಳ ಮೂಲಕ ಐಕ್ಯ ಹೋರಾಟ ನಡೆಸಿ ಭಾಷಾವಾರು ಪ್ರಾಂತ ರಚನೆಯನ್ನು ಸಾಧಿಸಬೇಕಾಯಿತು.ಆಂಧ್ರದ ಪೊಟ್ಟಿ ರಾಮುಲು 40 ದಿವಸ ಉಪವಾಸ ಕೈಗೊಂಡು ಜೀವಾರ್ಪಣೆ ಮಾಡಬೇಕಾಯಿತು. 1.11.1956 ರಂದು ಮೈಸೂರು ಪ್ರಾಂತದ ಹೆಸರಲ್ಲಿ ಕನ್ನಡ ನಾಡು ರಚನೆಯಾಯಿತು. 1972 ರಲ್ಲಿ ಕರ್ನಾಟಕ ಪ್ರಾಂತವೆಂಬ ಹೆಸರು ಪಡೆಯಿತು. ಐವತ್ತು ವರ್ಷಗಳಲ್ಲಿ ದೇಶವನ್ನಾಳಿದ ರಾಜಕೀಯ ಪಕ್ಷಗಳು ಯಾವ ರೀತಿಯಲ್ಲಿ ತಾವಿತ್ತ ಆಶ್ವಾಸನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ವಿಫಲಗೊಂಡಿದ್ದವೋ ಅದೇ ರೀತಿಯಲ್ಲಿ 41 ವರ್ಷಗಳಿಂದ ರಾಜ್ಯವನ್ನಾಳುತ್ತಿರುವವರು ನಾವೆಲ್ಲಾ ಕರ್ನಾಟಕ ಪ್ರತ್ಯೇಕ ರಾಜ್ಯವಾದರೆ ಎಂಥ ನಾಡನ್ನು ಕಟ್ಟಬಹುದೆಂಬ ಕನಸು ಕಂಡಿದ್ದೆವೋ ಅವುಗಳನ್ನೆಲ್ಲ ನನಸಾಗಿಸುವುದರಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಆದ್ದರಿಂದ ಕರ್ನಾಟಕ ರಾಜ್ಯೋತ್ಸವ ಕನ್ನಡಿಗರ ಉತ್ಸವವಾಗಿ ಮೂಡಿಬರದೆ ಬರೇ ಸರಕಾರ ಪ್ರೇರಿತ ಉತ್ಸವವಾಗಿ ಆಚರಿಸಲ್ಪಡುತ್ತಿರುವುದನ್ನು ನೋಡಬಹುದಾಗಿದೆ.

ರಾಜ್ಯದ ಒಂದು ಮೂರರಷ್ಟು ಅಂದರೆ 128 ಕ್ಕಿಂತಲೂ ಹೆಚ್ಚು ತಾಲೂಕುಗಳಲ್ಲಿ ಭೀಕರ ಬರಗಾಲದ ದವಡೆಯಲ್ಲಿ ಸಿಕ್ಕಿಕೊಂಡಿವೆಂದು ಸರಕಾರವೇ ಹೇಳುತ್ತಿದೆ. ಮಳೆಯ ಅಭಾವ, ಅಕಾಲಿಕ ಮಳೆ ಇದಕ್ಕೆ ಕಾರಣ. ಸರಕಾರ ರಾಜ್ಯದಲ್ಲಿ ಹರಿಯುತ್ತಿರುವ ಕಾವೇರಿ, ಕೃಷ್ಣೆ, ಘಟಪ್ರಭಾ, ಮಲಪ್ರಭಾ, ಭೀಮಾ, ನೇತ್ರಾವತಿ ನದಿಗಳ ನೀರನ್ನು ಸರಿಯಾಗಿ ಬಳಸಿಕೊಳ್ಳುವಂತೆ ಕೈಗೆತ್ತಿಕೊಂಡಿರುವ ನೀರಾವರಿ ಯೋಜನೆಗಳನ್ನು ಸಕಾಲದಲ್ಲೇ ಪೂರ್ಣಗೊಳಿಸುತ್ತಿದ್ದರೆ, ಹಲವಾರು ನಗರ ಮತ್ತು ಹಳ್ಳಿಗಳ ಜನರು ಕುಡಿಯುವ ನೀರಿಗಾಗಿ ಚಡಪಡಿಸುವ ಅವಶ್ಯಕತೆಯಿರಲಿಲ್ಲ.

ಯಾವುದೇ ರಾಜ್ಯದ ಕೈಗಾರಿಕೋದ್ಯಮ, ಕೃಷಿ ಹಾಗೆಯೇ ಸಾರ್ವಜನಿಕರಿಗೆ ವಿದ್ಯುತ್ ಅತ್ಯವಶ್ಯ. ಕರ್ನಾಟಕ ಏಕೀಕರಣ ಆಗುವ ಮುಂಚೆ ಮೈಸೂರು ಸಂಸ್ಥಾನ ವಿದ್ಯುತ್ ಉತ್ಪಾದನೆಯಲ್ಲಿ ಪ್ರಥಮ ಸ್ಥಾನದಲ್ಲಿತ್ತು. ನೀರಾವರಿಯಂತೆ, ವಿದ್ಯುತ್ ಉತ್ಪಾದನೆಗೆ ಸಾಕಷ್ಟು ಅವಕಾಶಗಳಿದ್ದರೂ ಸರಕಾರ ಈ ರಂಗಕ್ಕೆ ಅವಶ್ಯಕ ಆದ್ಯತೆ ಹಾಗೆಯೇ ಗಮನ ನೀಡದೇ, ನೀರಾವರಿ, ಕೃಷಿ, ಕೈಗಾರಿಕೆ ಮತ್ತು ಸಾರ್ವಜನಿಕರು ಅಪಾರ ತೊಂದರೆ, ಸಂಕಷ್ಟಗಳನ್ನೆಲ್ಲಾ ಎದುರಿಸುವಂತೆ ಮಾಡಿದೆ. ಶಿಕ್ಷಣ ಕ್ಷೇತ್ರವನ್ನು ನಿರ್ಲಕ್ಷಿಸಿ, ಮಕ್ಕಳೆಲ್ಲಾ ಖಾಸಗೀ ಶಿಕ್ಷಣ ಸಂಸ್ಥೆಗಳಿಗೂ, ಡೊನೇಶನ್ ಹಾವಳಿಗೂ ತುತ್ತಾಗುವಂತೆ ಮಾಡಿದೆ. ಅಸಮರ್ಪಕ ಆಡಳಿತ, ಭ್ರಷ್ಟಾಚಾರಗಳಿಂದಾಗಿ ಸರಕಾರದ ಖಾಸಗೀಕರಣ ನೀತಿಯಿಂದಾಗಿ ಕೈಗಾರಿಕೆಗಳೆಲ್ಲಾ ನಾಶವಾಗುತ್ತಿವೆ. ಗುತ್ತೇದಾರಿಗಳ ಕೈ ಸೇರುತ್ತಿವೆ. ಇತರ ರಾಜಕೀಯ ಪಕ್ಷಗಳ ಮುಖಂಡರೆಲ್ಲ ಭ್ರಷ್ಟಾಚಾರದ ಕಡಿವಾಣದಲ್ಲಿ ಸಿಕ್ಕಿಕೊಂಡು ದೇಶದ ಹೆಸರನ್ನೇ ಕೆಡಿಸುತ್ತಿರುವಾಗ,'ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎಂಬ ನಾಣ್ಣುಡಿಯಂತೆ ಕರ್ನಾಟಕ ರಾಜ್ಯದಲ್ಲಿ ಕೂಡ ಬೈದಿಗಳಿಗೆ ಸಲ್ಲತಕ್ಕ ಆಹಾರ, ಮಕ್ಕಳು, ಮುದುಕಿಯರ ಬಾಯಿಗೆ ಬೀಳತಕ್ಕ ಹಾಲು ಹಾಗೆಯೇ ಸರಕಾರದ ಎಲ್ಲಾ ಕ್ಷೇತ್ರಗಳು ಇಂದು ಭ್ರಷ್ಟಾಚಾರದ ಆಗರಗಳಾಗಿ ಕೆಟ್ಟ ನಾಥ ಹೊರಹೊಮ್ಮಿ ಈ ವಿಷಯದಲ್ಲಿ ನಾವೇನೂ ಕೇಂದ್ರ ಸರಕಾರಕ್ಕೆ ಕಡಿಮೆಯೇನಲ್ಲೆಂಬುದನ್ನು ತೋರಿಸಿ ಕೊಡುತ್ತಿವೆ.

ಕಳೆದ ನಲ್ವತ್ತು ವರ್ಷಗಳಲ್ಲಿ ರೈತರಿಗೆ ಭೂಮಿಯ ಹಕ್ಕು ನೀಡುವ, ಪ್ರಗತಿ ಪರ ಭೂಸುಧಾರಣೆ ಜಾರಿಯಲ್ಲಿ ತರುವ, ಕೃಷಿ ಕಾರ್ಮಿಕರಿಗೆ ಸರಕಾರಿ ಪಡಭೂಮಿಯಾಗಲೀ, ಕನಿಷ್ಟ ವೇತನವಾಗಲೀ ದಕ್ಕುವಂತೆ ಮಾಡಲಿಲ್ಲ, ಮನೆಯಿಲ್ಲದವರಿಗೆ ಸೂರು ಸಿಗಲಿಲ್ಲ, ಆರೋಗ್ಯ ರಕ್ಷಣೆಯಿಲ್ಲ, ಉತ್ತಮ ಶಿಕ್ಷಣವಿಲ್ಲ, ಮಹಿಳೆಯರು ದಲಿತರ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ಕಾರ್ಮಿಕರಿಗೆ ನ್ಯಾಯ ಸಿಗುತ್ತಿಲ್ಲ, ನಿರುದ್ಯೋಗಿಗಳಿಗೆ ನೌಕರಿ ಅವಕಾಶ ಇಲ್ಲ, ಪರಿಹಾರವೂ ಇಲ್ಲ, ಕೈಗಾರಿಕೆಗಳಿಗೆ ವಿದ್ಯುತ್, ಕಚ್ಚಾ ಮಾಲು, ಮಾರ್ಕೆಟ್‌ಗಳಿಲ್ಲ, ರೈತರಿಗೆ ನೀರಿಲ್ಲ, ವಿದ್ಯುತ್ ಇಲ್ಲ, ಇಂತ ಪರಿಸ್ಥಿತಿಯಲ್ಲಿ ನಾವಿಂದು ಕರ್ನಾಟಕ ರಾಜ್ಯೋತ್ಸವ ಆಚರಿಸುತ್ತಿದ್ದೇವೆ. ಈ ಉತ್ಸವವನ್ನು ಜನೋತ್ಸವವನ್ನಾಗಿ ಮಾರ್ಪಡಿಸುವತ್ತ ಪ್ರಯತ್ನಿಸೋಣ.

ಜೆ.ಹೆಚ್.ಪಟೇಲರು ಕಮ್ಯುನಿಸ್ಟ್ ಕಾರ್ಮಿಕ ಚಳುವಳಿಯ ಮೇಲೆ ಏಕೆ ಹರಿಹಾಯ್ದಿದ್ದಾರೆ ?

ನಮ್ಮ ಮುಖ್ಯಮಂತ್ರಿ ಜೆ.ಎಚ್.ಪಟೇಲರು ತಮ್ಮ ಈಗ ಕುಖ್ಯಾತವಾಗಿರುವ ಉದ್ಧಟತನದ ಶೈಲಿಯಲ್ಲಿ ಕಮ್ಯುನಿಸ್ಟ್ ಕಾರ್ಮಿಕ ನಾಯಕರ ಮೊಂಡುತನದಿಂದ ಹಲವಾರು ಕಾರ್ಮಿಕರು ಬೀದಿಪಾಲಾಗಿದ್ದಾರೆ ಎಂದಿದ್ದಾರೆ. ಸಿಐಟಿಯು ಮುಖಂಡ ಸೂರಿಯವರನ್ನು ಮತ್ತು 1974 ರಲ್ಲಿ ರೈಲ್ವೇ ಮುಷ್ಕರಕ್ಕೆ ಸಂಬಂಧಿಸಿದಂತೆ ಜಾರ್ಜ್‌ಫರ್ನಾಂಡೀಸ್‌ರನ್ನು ವೈಯಕ್ತಿಕವಾಗಿ ದೂಷಿಸಿದ್ದಾರೆ. ಮಾಜಿ ಸೋಶಲಿಸ್ಟರಾದ ಪಟೇಲರು ಜನತಾಗಳದ ಕಾರ್ಮಿಕ ವಿಭಾಗವನ್ನು ಉದ್ಘಾಟಿಸುತ್ತಾ ಈ ಅಣಿಮುತ್ತು ಉದುರಿಸಿದ್ದಾರೆ. ಕಾಂ|| ಸಿ.ನಂಜುಂಡಪ್ಪ ಪಟೇಲರ ಅಣಿಮುತ್ತುಗಳಿಗೆ ಪ್ರತಿಕ್ರಿಯಿಸುತ್ತಾ ಬಂಡವಾಳಶಾಹಿ ಸಮಾಜದಲ್ಲಿ ಕಾರ್ಮಿಕ ವರ್ಗದ ಚಳುವಳಿಯ ಅಗತ್ಯ, ಉದ್ದೇಶಗಳ ಬಗ್ಗೆ ಪಟೇಲರಂತ ಬಂಡವಾಳಶಾಹಿ ತುತ್ತೂರಿಗಳಿಗೆ ನೆನಪಿಸಿದ್ದಾರೆ.

ಬೆಂಗಳೂರಿನಲ್ಲಿ ಅಕ್ಟೋಬರ್ 26 ರಂದು ಪ್ರದೇಶ ಜನತಾದಳದ ಪುನರ್ ರಚಿತ ಕಾರ್ಮಿಕ ವಿಭಾಗದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಾ ಮುಖ್ಯ ಮಂತ್ರಿ ಜೆ.ಎಚ್.ಪಟೇಲರು 'ವಿರೋಧ ಪಕ್ಷದಲ್ಲಿದ್ದು ಕಾರ್ಮಿಕ ಸಂಘಟನೆಯ ಚಟುವಟಿಕೆಗಳನ್ನು ನಡೆಸುವುದು ಸುಲಭ, ಆದರೆ ಆಡಳಿತ ಪಕ್ಷದ ಕಾರ್ಮಿಕ ಸಂಘಟನೆಗಳಲ್ಲಿ ಹೆಚ್ಚಿನ ಜವಾಬ್ದಾರಿ ಜತೆಗೆ, ಇತಿಮಿತಿಗಳೂ ಇರುತ್ತವೆ. ಕಮ್ಯುನಿಸ್ಟ್ ಪಕ್ಷಗಳಿಗೆ ಸೇರಿದ ಕೆಲವು ಕಾರ್ಮಿಕರ ಮೊಂಡುತನದಿಂದಾಗಿ ಹಲವಾರು ಕಾರ್ಖಾನೆಗಳು ಬಾಗಿಲು ಮುಚ್ಚಿ ಕಾರ್ಮಿಕರು ಬೀದಿಪಾಲಾಗಿದ್ದಾರೆ" ಎಂದಿರುವುದೇ ಅಲ್ಲದೆ ಸಿಐಟಿಯು ಮುಖಂಡ ಎಸ್. ಸೂರ್ಯನಾರಾಯಣ ರಾವ್ ಹೆಸರನ್ನು,1974 ರ ರೈಲ್ವೆ ಮುಷ್ಕರಕ್ಕೆ ಸಂಬಂಧಿಸಿದಂತೆ ಜಾರ್ಜ್ ಫರ್ನಾಂಡೀಸ್‌ರ ಹೆಸರನ್ನು ಎತ್ತಿ ದೂಷಿಸಿದ್ದಾರೆ.

ಅವರ ಬಡಬಡಿಕೆಯ ಕುರಿತು ದೇಶದ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿಚಾರ ಮಾಡುವ ಅವಶ್ಯಕತೆ ಇದೆ. ಅದಕ್ಕೂ ಮೊದಲು ಕಾರ್ಮಿಕ ಚಳುವಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕುರಿತು ವಿಚಾರ ಮಾಡಬೇಕಾಗಿದೆ.


ಕಾರ್ಮಿಕರು ತಮ್ಮ ಸ್ವಂತ ಖುಷಿಗಾಗಿ ಮುಷ್ಕರಗಳನ್ನು ಮಾಡುವುದಿಲ್ಲ. ಯಾವ ಕಾರ್ಮಿಕ ಸಂಘವೂ ತನ್ನ ಸ್ವಂತ ಖುಷಿಗಾಗಿ ಮುಷ್ಕರಕ್ಕೆ ಕರೆಕೊಡುವುದಿಲ್ಲ. ಕಾರ್ಮಿಕರ ಬೇಡಿಕೆಗಳನ್ನು ಬಂಡವಾಳಗಾರರು ಈಡೇರಿಸದೆ ಹಠಮಾರಿತನ ಮಾಡುವಾಗ, ನೇರ ಮಾತುಕತೆ ಮುರಿದು ಬಿದ್ದು, ಪಂಚಾತಿಕೆ ಸಂಧಾನಗಳನ್ನು ಮಾಡಬೇಕಾದ ಸರ್ಕಾರದ ಕಾರ್ಮಿಕ ಇಲಾಖೆ ನಿಷ್ಕ್ರಿಯವಾದಾಗ, ಇಲ್ಲವೇ ಇಲಾಖೆಯ ಅಧಿಕಾರಿಗಳ ಸ್ಥಾನಗಳೇ ಖಾಲಿ ಇರುವಾಗ ಬೇರೆ ದಾರಿ ಕಾಣದೆ ಕಾರ್ಮಿಕ ಸಂಘಗಳು ಕಾರ್ಮಿಕರನ್ನು ಮುಷ್ಕರಕ್ಕೆ ಇಳಿಸಬೇಕಾಗುವುದು, ಕಾರ್ಮಿಕರು ಮುಷ್ಕರ ಮಾಡಬೇಕಾಗುವುದು. ಬಂಡವಾಳಗಾರರ ನಡುವಿನ ಪೈಪೋಟಿಯಿಂದ, ಕಚ್ಚಾವಸ್ತುಗಳ ಅಭಾವದಿಂದ, ಉತ್ಪಾದನೆಯಾದ ಸರಕುಗಳಿಗೆ ಮಾರುಕಟ್ಟೆ ದೊರೆಯದೆ, ಅವು ಬಿಕರಿಯಾಗದೆ, ಪಾಲುದಾರಿಕೆ ಇರುವಾಗ ಪಾಲುದಾರರ ನಡುವಣ ಒಳಜಗಳಗಳಿಂದ ಕಾರ್ಖಾನೆಗಳು ಮುಚ್ಚುವುದು ಸಾಮಾನ್ಯವೇ ಹೊರತು, ಕಾರ್ಮಿಕರ ಮುಷ್ಕರಗಳಿಂದ ಅಲ್ಲ. ಆದರೆ ಆಳುವ ವರ್ಗಗಳ ರಾಜಕೀಯ ಪಕ್ಷಗಳ ಮುಖಂಡರು, ಮಂತ್ರಿಗಳು ಕಾರ್ಖಾನೆಗಳು ಮುಚ್ಚುವುದಕ್ಕೆ ಕಾರ್ಮಿಕರನ್ನು ದೂರುತ್ತಾರೆ. ಅವರು ಮಾಲೀಕರ ಹಠಮಾರಿತನವನ್ನು ಮರೆಮಾಚುತ್ತಾರೆ. ಕಾರ್ಮಿಕರ ದೃಢತೆಯನ್ನು ಮೊಂಡುತನವೆಂದು ದೂಷಿಸುತ್ತಾರೆ. ಜೆ.ಎಚ್. ಪಟೇಲರು ಮುಖ್ಯಮಂತ್ರಿಯ ಸ್ಥಾನದಲ್ಲಿರುವುದರಿಂದ ಕಾರ್ಮಿಕ ಇಲಾಖೆಯಿಂದ ಮತ್ತು ರಿಸರ್ವ್ ಬ್ಯಾಂಕಿನಿಂದ ಅಂಕಿಸಂಖ್ಯೆಗಳನ್ನು ಪಡೆದುಕೊಂಡು ಮೇಲಿನ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಾಂಬರಿಸಬಹುದು.

1974 ರ ಮೇ ತಿಂಗಳಲ್ಲಿ ನಡೆದ ರೈಲ್ವೆ ಕಾರ್ಮಿಕರ ಐಕ್ಯ ಮುಷ್ಕರವು ಕಾರ್ಮಿಕ ವರ್ಗದ ಉಜ್ವಲ ಹೋರಾಟವಾಗಿ ಜಾಗತಿಕ ದಾಖಲೆಯನ್ನು ಸ್ಥಾಪಿಸಿದೆ. ರೈಲ್ವೆ ಕಾರ್ಮಿಕರ ಬೇಡಿಕೆಗಳು ಈಡೇರದೆ ಕೆಲಸದ ಗಂಟೆಗಳ ನಿಗದಿಗಾಗಿ 1973 ರಲ್ಲಿ ಲೋಕೋ ಸಿಬ್ಬಂದಿ ಮತ್ತು ರೈಲ್ವೆ ಮಂಡಳಿಯ ನಡುವೆ ಆದ ಒಪ್ಪಂದವು ಕಾರ್ಯಗತವಾಗದೆ ರೈಲ್ವೆ ಕಾರ್ಮಿಕರ ಅತೃಪ್ತಿಯು ತುಂಬಿ ಉಕ್ಕುತ್ತಿದ್ದಿತು. ಅದು ಹೊರಬಂದು ಹೋರಾಟದ ರೂಪದಲ್ಲಿ ಹರಿಯಲು ಜಾರ್ಜ್ ಫರ್ನಾಂಡಿಸ್ ಕಾರಣರಾದರಷ್ಟೆ. ಅದಕ್ಕಾಗಿ ರೈಲ್ವೆ ಮುಷ್ಕರವನ್ನಾಗಲೀ, ಜಾರ್ಜ್ ಫರ್ನಾಂಡಿಸ್ ಅವರನ್ನಾಗಲಿ ದೂಷಿಸುವುದು ಸರಿಯಲ್ಲ.

ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳಿಗಾಗಿ ಹೋರಾಟ ಮಾಡಲು ಸಿದ್ಧರಾದರೆ, ಆ ಹೋರಾಟದಿಂದ ಬಂಡವಾಳಿಗರಿಗೆ ಉತ್ಪಾದನೆಯು ನಷ್ಟವಾಗುತ್ತದೆ ಎಂದು ಕಂಡು ಬಂದರೆ ಆಗ ಬಂಡವಾಳಗಾರರು ತಮ್ಮ ಬೇಡಿಕೆಗಳನ್ನು ಈಡೇರಿಸುವ ಕುರಿತು ಮಾತುಕತೆ ನಡೆಸಲು ಗಮನ ಕೊಡುತ್ತಾರೆ ಎಂಬ ಪಾಠವನ್ನು ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸ ಕಲಿಸುತ್ತದೆ.


ಎಂದರೆ ತಮ್ಮ ಜೀವನದ ಪರಿಸ್ಥಿತಿಯನ್ನು, ಕೆಲಸದ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಕಾರ್ಮಿಕರಿಗೆ ಒಗ್ಗಟ್ಟು ಬಹಳ ಮುಖ್ಯ. ಆ ಒಗ್ಗಟ್ಟನ್ನು ಒಡೆಯುವ ಕೆಲಸವನ್ನು ಆಳುವ ವರ್ಗಗಳು ಸತತವಾಗಿ ಮಾಡುತ್ತಾ ಬಂದಿದ್ದಾರೆ. ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಒಂದೇ ಕಾರ್ಮಿಕ ಸಂಘಟನೆ ಇತ್ತು. ಅದು ಎಐಟಿಯುಸಿ(ಈ ದಿವಸದ ಎಐಟಿಯುಸಿ ಅಲ್ಲ) ಎಐಟಿಯುಸಿ ವರ್ಗ ಹೋರಾಟದ ಹಾದಿಯಲ್ಲಿ ಮುಂದೆ ಹೋಗುತ್ತಿದ್ದಿತು. ಅದರಲ್ಲಿ ಕೆಲಸ ಮಾಡುವವರು ಯಾವ ರಾಜಕೀಯ ಪಕ್ಷದವರೇ ಆಗಿರಲಿ ಕಾರ್ಮಿಕ ವರ್ಗದ ಹಿತರಕ್ಷಣೆಯೇ ಎಐಟಿಯುಸಿಯ ಮುಖ್ಯ ಉದ್ದೇಶವಾಗಿದ್ದಿತು. ಬ್ರಿಟಿಶ್ ವಸಾಹತುಶಾಹಿ ಆಡಳಿತವು ಹೋಗಿ ಸ್ವಾತಂತ್ರ್ಯ ಬರುತ್ತದೆ ಎಂದರೆ ನಮ್ಮ ದೇಶದ ಆಳುವ ವರ್ಗಗಳ ಕೈಗೆ ಅಧಿಕಾರವು ಬರುವುದು ಎನ್ನುವಾಗಲೇ ಅಧಿಕಾರ ಹಸ್ತಾಂತರವಾಗುವ ಮೂರು ತಿಂಗಳ ಮೊದಲೇ 1947ರ ಮೇ 3-4 ರಂದು ಕಾಂಗ್ರೆಸ್ ಪಕ್ಷವು ನವದೆಹಲಿಯಲ್ಲಿ ಒಂದು ಅಖಿಲ ಭಾರತ ಸಮಾವೇಶವನ್ನು ನಡೆಸಿ ಕಾರ್ಮಿಕ ವರ್ಗದ ಐಕ್ಯತೆ

ಪುಟ 7 ನೋಡಿ



ಕೃಪೆ: ಕನ್ನಡಪ್ರಭ

ಅಕ್ಟೋಬರ್ ಕ್ರಾಂತಿಯ 80ನೇ ವಾರ್ಷಿಕೋತ್ಸವದ ಹೊತ್ತಿಗೆ 70ನೇ ವಾರ್ಷಿಕೋತ್ಸವದ ಸಮಯಕ್ಕೆ ಹೋಲಿಸಿದರೆ, ಸಮಾಜವಾದಿ ದೇಶಗಳ ಸಂಖ್ಯೆ ಕಡಿಮೆಯಾಗಿರುವುದೇನೋ ನಿಜ. ಆದರೆ ಇಡೀ ವಿಶ್ವ ಸಮಾಜವಾದೀ ಶಕ್ತಿಗಳ ತೂಕ ಹೆಚ್ಚಿದೆ. ಸಮಾಜವಾದ ಈಗ ಮುಗಿದ ಕಥೆ ಎಂದು ಡಂಗುರ ಸಾರುವ ಸಾಮ್ರಾಜ್ಯವಾದಿ ತುತ್ತೂರಿಗಳಿಗೆ, ಉತ್ತರಿಸುತ್ತಾ ಕಾ|| ಇ.ಎಂ.ಎಸ್. ವಿಶ್ವಸಮಾಜವಾದಿ ಚಳುವಳಿಯ ಪ್ರಸ್ತುತ ಮಟ್ಟದ ಬಗ್ಗೆ ವಿಶ್ಲೇಷಿಸಿದ್ದಾರೆ.



ಅಕ್ಟೋಬರ್ ಕ್ರಾಂತಿಯ 80 ನೇ ವಾರ್ಷಿಕೋತ್ಸವದಂದು ವಿಶ್ವ ಸಮಾಜವಾದ

- ಇ.ಎಂ.ಎಸ್.

ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ ವರ್ಗಸಮಾಜದಿಂದ ವರ್ಗರಹಿತ ಸಮಾಜದತ್ತ ಮಾನವಕುಲದ ಪರಿವರ್ತನೆಯ ಆರಂಭ ಬಿಂದು. ಈ ವರ್ಷ ನವೆಂಬರ್ 7 ರಂದು ಏಷ್ಯಾವ್ಯಾ ಸೇರಿದಂತೆ ವಿಶ್ವಾದ್ಯಂತ ಕಾರ್ಮಿಕ ವರ್ಗ ಈ ಕ್ರಾಂತಿಯ 80 ನೇ ವಾರ್ಷಿಕೋತ್ಸವವನ್ನು ಆಚರಿಸಲಿದೆ.

ಆ ಕ್ರಾಂತಿಯಿಂದ ಎದ್ದು ಬಂದ ಶ್ರಮಜೀವಿ ವರ್ಗದ ಸೋವಿಯೆತ್ ಪ್ರಭುತ್ವ ಈಗಿಲ್ಲ, ನಿಜ. ಅದೇ ಈಗ ವಿಶ್ವ ಸಮಾಜವಾದ ಸೋವಿಯೆತ್ ಒಕ್ಕೂಟ ಹಾಗೂ ಪೂರ್ವ ಯೂರೋಪಿನ ಸಮಾಜವಾದಿ ದೇಶಗಳು ಇದ್ದಾಗಿನ ಸಮಯಕ್ಕಿಂತಲೂ ಹೆಚ್ಚು ಬಲಶಾಲಿಯಾಗಿದೆ ಎಂಬುದು ಅಷ್ಟೇ ವಾಸ್ತವ ಸಂಗತಿ. ಈಗಿರುವ ಸಮಾಜವಾದದ ಐದು ದೇಶಗಳ- ಚೀನಾ, ವಿಯೆಟ್ನಾಂ, ಕೊರಿಯಾ, ಲಾವೋಸ್ ಮತ್ತು ಕ್ಯೂಬಾದ ಜನಸಂಖ್ಯೆ ಹಿಂದಿನ ಸೋವಿಯತ್ ಒಕ್ಕೂಟ ಹಾಗೂ ಪೂರ್ವ ಯೋರೋಪಿನ ದೇಶಗಳು ಸಮಾಜವಾದಿ ಜಗತ್ತಿನ ಭಾಗವಾಗಿದ್ದದ್ದುದಕ್ಕಿಂತ ಹೆಚ್ಚಿದೆ. ಆರ್ಥಿಕ ಬೆಳವಣಿಗೆಯಲ್ಲೂ ಚೀನಾ ಮತ್ತು ವಿಯೆಟ್ನಾಂ ಇಂದು ಕೆಲವು ಬಂಡವಾಳಶಾಹಿ ದೇಶಗಳಿಗಿಂತಲೂ ಮುಂದಿವೆ. ಉಳಿದ ಮೂರು ದೇಶಗಳು ಕೊರಿಯಾ, ಕ್ಯೂಬಾ ಮತ್ತು ಲಾವೋಸ್‌ಗೆ ನಿರ್ದಿಷ್ಟ ರಾಜಕೀಯ ಪರಿಸ್ಥಿತಿಗಳಿಂದಾಗಿ ಅವರನ್ನು ಸಮಗಟ್ಟಲು ಆಗಿಲ್ಲ. ಹೀಗೆ ಇಂದಿನ ಸಮಾಜವಾದೀ ಜಗತ್ತಿನ ತೂಕ ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯೂರೋಪಿಯನ್ ರಾಷ್ಟ್ರಗಳು ಈ ಜಗತ್ತಿನ ಭಾಗವಾಗಿದ್ದಾಗ ಇದ್ದುದಕ್ಕಿಂತಲೂ ಹೆಚ್ಚು.

ಎಡ ಶಕ್ತಿಗಳ ತೂಕ ಹೆಚ್ಚುತ್ತಿದೆ

ಇಷ್ಟೇ ಅಲ್ಲ, ಇನ್ನೂ ಇತರ ಹಲವಾರು ದೇಶಗಳಲ್ಲಿ ಕಾರ್ಮಿಕವರ್ಗದ ಪಕ್ಷಗಳು ಸರಕಾರಗಳಲ್ಲಿ ಭಾಗಿಗಳಾಗಿದ್ದಾರೆ ಅಥವಾ ನೇತೃತ್ವ ನೀಡುತ್ತಿವೆ. ಗಯಾನಾ, ದಕ್ಷಿಣ ಆಫ್ರಿಕ, ನೇಪಾಳ, ಇತ್ಯಾದಿ ವಿಭಿನ್ನ ರೀತಿಯ ದೇಶಗಳು ಈ ಪಟ್ಟಿಯಲ್ಲಿ ಬರುತ್ತವೆ. ನಮ್ಮ ದೇಶದಲ್ಲೂ ಮೂರು ರಾಜ್ಯ ಸರಕಾರಗಳು ಕಮ್ಯುನಿಸ್ಟರ ನೇತೃತ್ವದಲ್ಲಿ ಇವೆ. ಕೇಂದ್ರ ಸರಕಾರವನ್ನು ನಡೆಸುವ ಸಂಯುಕ್ತರಂಗದಲ್ಲಿ ಎರಡು ಕಮ್ಯುನಿಸ್ಟ್ ಪಕ್ಷಗಳು ಹಾಗೂ ಇನ್ನೆರಡು ಎಡ ಪಕ್ಷಗಳು ಇವೆ.

ಬಂಡವಾಳಶಾಹಿ ದೇಶಗಳಲ್ಲಿ ಎಡಶಕ್ತಿಗಳ ತೂಕ ನಿರಂತರವಾಗಿ ಹೆಚ್ಚುತ್ತಿದೆ. ಬೃಹತ್ ಇಟಲಿ, ಫ್ರಾನ್ಸ್‌ಗಳಂತಹ ದೇಶಗಳಲ್ಲಿ ಬಲ-ಪ್ರತಿಗಾಮಿ ಹತೋಟಿಯ ಸರಕಾರಗಳ ಸವನದಲ್ಲಿ ಹೆಚ್ಚು ತೀವ್ರಗಾಮಿಯಾದ ಸರಕಾರಗಳು ಬಂದಿವೆ. ಇಟಲಿಯ ಸರಕಾರದಲ್ಲಿ ಕಮ್ಯುನಿಸ್ಟರು ಭಾಗವಹಿಸದಿರಲು ಕಾರಣ ಆ ಸರಕಾರದ ನೇತೃತ್ವ ಗುತ್ತೇದಾರಿಗಳ ವಿರುದ್ಧ ಹೋರಾಟದಲ್ಲಿ ಸದಾ ಒಂದು ನಿಲುವು ತಳೆಯಲಾರದವರ ಕೈಯಲ್ಲಿದೆ. (ಈ ಲೇಖನ ಬರೆದ ನಂತರ ಕಮ್ಯುನಿಸ್ಟರು ಈ ಸರಕಾರಕ್ಕೆ ನೀಡಿದ್ದ ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡಿರುತ್ತಾರೆ-ಸಂ.). ಫ್ರಾನ್ಸಿನಲ್ಲಿ ಸೋಷಲಿಸ್ಟ್-ಕಮ್ಯುನಿಸ್ಟ್ ಮಿತ್ರಕೂಟ ಸರಕಾರವಿದೆ. ಹೀಗೆ ಬಂಡವಾಳಶಾಹಿ ದೇಶಗಳಲ್ಲಿ ಇಂದು ಕಮ್ಯುನಿಸ್ಟರ ತೂಕ ಸೋವಿಯೆತ್ ಒಕ್ಕೂಟ ಹಾಗೂ ಪೂರ್ವ ಯೂರೋಪಿನಲ್ಲಿ ಪ್ರತಿಕ್ರಾಂತಿ ನಡೆಯುವ ಮೊದಲಿದ್ದುದಕ್ಕಿಂತ ಹೆಚ್ಚಿದೆ.

ಮೂಲಭೂತ ಬದಲಾವಣೆಯ ಅರಿವು

ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಮತ್ತಿತರ ಬಂಡವಾಳಶಾಹಿ ದೇಶಗಳಲ್ಲಿ ಬೂರ್ಜ್ವಾ ವ್ಯವಸ್ಥೆಯ ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ಬಿಕ್ಕಟ್ಟು ಹೆಚ್ಚೆಚ್ಚು ಜನಗಳನ್ನು ಅತ್ಯಂತ ಪ್ರತಿಗಾಮಿ ವಿಭಾಗಗಳ ವಿರುದ್ಧ ಹೋರಾಟಕ್ಕಿಳಿಸುತ್ತಿದೆ. ಈ ವ್ಯವಸ್ಥೆ ಗುತ್ತೇದಾರಿಗಳನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತಾ ಜನರನ್ನು ಹೆಚ್ಚೆಚ್ಚು ದರಿದ್ರವರನ್ನಾಗಿಸುತ್ತಿರುವುದರಿಂದ ಇದರಲ್ಲಿ ಮೂಲಭೂತ ಬದಲಾವಣೆಯನ್ನು ಮಾಡಬೇಕಾದ ಅಗತ್ಯವನ್ನು ಜನ ಹೆಚ್ಚೆಚ್ಚಾಗಿ ಕಂಡುಕೊಳ್ಳಲಾರಂಭಿಸಿದ್ದಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ವರ್ಗ ಸಂಘರ್ಷ ಹೆಚ್ಚೆಚ್ಚು ತೀವ್ರಗೊಳ್ಳುತ್ತಿದೆ.

ಇನ್ನೊಂದೆಡೆ ಹಿಂದಿನ ಸಮಾಜವಾದಿ ದೇಶಗಳಲ್ಲಿ ಹಿಂದಿನ ವ್ಯವಸ್ಥೆಯ ಸಕಾರಾತ್ಮಕ ಅಂಶಗಳ ಬಗ್ಗೆ ಜನಗಳಲ್ಲಿ ಹೆಚ್ಚೆಚ್ಚು ನೆನಪಾಗುತ್ತದೆ. ಏಕೆಂದರೆ ನಂತರ ನಡೆದ ಪ್ರತಿಕ್ರಾಂತಿ ಅವರನ್ನು ಬಡತನ, ನಿರುದ್ಯೋಗ, ಅಪರಾಧಗಳ, ಭ್ರಷ್ಟಾಚಾರದ ಆಳ್ವಿಕೆಯಡಿ ದೂಕಿದೆ. ಈ ದೇಶಗಳಲ್ಲಿ ಹಲವೆಡೆ ಹಿಂದಿನ ಕಮ್ಯುನಿಸ್ಟರು ಚುನಾಯಿತರಾಗುತ್ತಿರುವುದನ್ನು, ಕೆಲವೆಡೆ ಸರಕಾರ ರಚಿಸಲು ಮತಪಡೆದಿರುವುದನ್ನು ಕಾಣುತ್ತಿದ್ದೇವೆ.

ಹೀಗೆ ಒಟ್ಟಾರೆ ಚಿತ್ರ ವಿಶ್ವ ಸಮಾಜವಾದಕ್ಕೆ ಹೆಚ್ಚೆಚ್ಚು ಅನುಕೂಲಕರವಾಗುತ್ತಿದೆ. ಆದರೂ ಇಂದಿನ ಜಗತ್ತಿನಲ್ಲಿ ಪ್ರಾಬಲ್ಯ ಮೆರೆಸುತ್ತಿರುವುದು ಸಾಮ್ರಾಜ್ಯಶಾಹಿಯೇ ಎಂಬ ವಾಸ್ತವತೆಗೆ ಯಾರೂ ಕಣ್ಣು ಮುಚ್ಚಿ ಕೂರಲು ಸಾಧ್ಯವಿಲ್ಲ. ತನ್ನದೇ ನೇತೃತ್ವದ ಏಕ ಧ್ರುವೀಯ ಜಗತ್ತೊಂದನ್ನು ಹೇರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ದುರಾಸೆ ವಿಶ್ವಸಂಸ್ಥೆ, ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ನಿಧಿ (ಐ.ಎಂ.ಎಫ್), ವಿಶ್ವ ವ್ಯಾಪಾರ ಸಂಸ್ಥೆ ಇತ್ಯಾದಿಗಳ ಪ್ರಾಬಲ್ಯದ ಸಂಸ್ಥೆಗಳ ಮೂಲಕ ಭಾಗಶಃ ಈಡೇರುತ್ತಿದೆ. ವಿಶ್ವಾದ್ಯಂತ್ಯ ಈ ಸಂಸ್ಥೆಗಳನ್ನು ಅಮೇರಿಕನ್ ಪ್ರಾಬಲ್ಯದ ಸಾಧನಗಳಾಗಿ ಪರಿವರ್ತಿಸಲಾಗುತ್ತಿದೆ. ಅಲ್ಲಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಒಡ್ಡಿರುವ ಅಪಾಯದ ನೇರ ಪ್ರಮಾಣವನ್ನು ಅರಿಯದಿದ್ದರೆ ಅದು ಇಡೀ ವಿಶ್ವದ ಪುರೋಗಾಮಿ ವಿಭಾಗಗಳಿಗೆ ಆತ್ಮಹತ್ಯಾಕಾರಿಯಾಗಬಹುದು.

ಪ್ರತಿಸವಾಲು

ಆದರೆ ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿಯ ಈ ಆಕ್ರಾಮಕ ಪ್ರಯತ್ನಗಳಿಗೆ ತೀವ್ರಗಾಮಿ ಪ್ರಜಾಸತ್ತಾತ್ಮಕ ರಾಷ್ಟ್ರೀಯ ವಿಮೋಚನಾ ಚಳುವಳಿಗಳಲ್ಲಿ ಹಾಗೂ ಸಮಾಜವಾದಿ ಚಳುವಳಿಗಳ ಒಂದು ಕೂಟ ಪ್ರತಿ ಸವಾಲು ಆಗುತ್ತಿದೆ. ಸಾಮ್ರಾಜ್ಯಶಾಹಿ ರಾಷ್ಟ್ರೀಯ ವಿಮೋಚನಾ ಆಂದೋಲನಗಳು ಹಾಗೂ ಸಮಾಜವಾದೀ ಆಂದೋಲನಗಳ ವಿರುದ್ಧ ಒಂದು ದುಷ್ಟ ಧಾಳಿ ನಡೆದಿದೆ. ಈ ಆಂದೋಲನಗಳೂ ಅಷ್ಟೇ ಶಕ್ತಿ ಹಾಕಿ ಈ ಧಾಳಿಗಳನ್ನು ಎದುರಿಸುತ್ತಿವೆ.

ಹಿಂದಿನ ಸೋವಿಯೆತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಪ್ರತಿಕ್ರಾಂತಿಯ ನಂತರದ ವರ್ಷಗಳಲ್ಲಿ ವಿಶ್ವ ಸಮಾಜವಾದ ಪಡೆದ ಕೆಲವು ವಿಜಯಗಳು ನಿಜಕ್ಕೂ ಸಂತೋಷ ಉಂಟು ಮಾಡುವಂತಹದ್ದು. ಚೀನಾ ಆರ್ಥಿಕ ಪ್ರಗತಿಯ ಪಥದಲ್ಲಿ ಮಾತ್ರವೇ ಅಲ್ಲ, ಹಾಂಗ್‌ಕಾಂಗ್‌ನ್ನು ಅಲ್ಲಿಯ ಬಂಡವಾಳಶಾಹಿ ಪದ್ಧತಿಯನ್ನು ಮುಂದುವರಿಸಿಕೊಂಡೇ ವಿಲೀನಗೊಳಿಸಿಕೊಳ್ಳುವ, ಮಕಾವೋ(ಹಾಂಗ್‌ಕಾಂಗ್‌ನ ಬಳಿಯಿರುವ ಪೋರ್ಚುಗೀಸರ ವಸಾಹತು) ವನ್ನು ಅದೇ ರೀತಿ ಮುಂದೆ ವಿಲೀನಗೊಳಿಸಿಕೊಳ್ಳುವ ಮಹತ್ವಪೂರ್ಣ ರಾಜಕೀಯ ಸವಾಲುಗಳನ್ನು ಸಾಧಿಸಿದೆ. ಒಂದೇ ಒಂದು ಗುಂಡು ಹಾರದೆ ಈ ಸಾಧನೆಯಾಗಿದೆ ಎಂಬುದು ನಿಜಕ್ಕೂ ಗಮನಾರ್ಹ. "ಒಂದು ದೇಶ, ಎರಡು ವ್ಯವಸ್ಥೆಗಳು" ಎಂಬ ನೀತಿಯನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ.

ಅಷ್ಟೇ ಅಲ್ಲ, ಇಷ್ಟೇ ಮಹತ್ವಪೂರ್ಣವಾದ ಬೆಳವಣಿಗೆಗಳನ್ನು ಇತ್ತೀಚೆಗೆ ಕಾಂಬೋಡಿಯಾದಲ್ಲಿ ಕಾಣುತ್ತಿದ್ದೇವೆ. ಕಾಂಬೋಡಿಯಾದ ಕಮ್ಯುನಿಸ್ಟರ ವಿರುದ್ಧ ಒಂದು ಕ್ಷಿಪ್ರಕ್ರಾಂತಿ ನಡೆಸುವ ರಾಜಕುಮಾರ್ ರಣರಿಧ್‌ನ ಪ್ರಯತ್ನವನ್ನು ಸೋಲಿಸಲಾಗಿದೆ. ರಾಷ್ಟ್ರೀಯ ಐಕ್ಯತೆಯ ಮೂಲಭೂತ ನೀತಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿದ್ದರಿಂದ ಅಲ್ಲಿಯ ಕಮ್ಯುನಿಸ್ಟ್ ಪಕ್ಷಕ್ಕೆ "ರಾಷ್ಟ್ರೀಯ ಸಮಿಶ್ರ ರಂಗವನ್ನು ರಾಜಕುಮಾರ ರಣರಿಧ್ ತನ್ನ ಪಕ್ಷದ ಹಾಗೂ ತನ್ನ ಸೇನೆಯ ಪ್ರಾಬಲ್ಯದ ಸಾಧನವಾಗಿ ಪರಿವರ್ತಿಸುವ ಪ್ರಯತ್ನಗಳನ್ನು ವಿಫಲಗೊಳಿಸಲು ಸಾಧ್ಯವಾಯಿತು.

ಕ್ಯೂಬಾ, ಲಾವೋಸ್, ಕೊರಿಯಾದಂತಹ ಸಮಾಜವಾದಿ ದೇಶಗಳು ಕಷ್ಟಕರ ರಾಜಕೀಯ ಸಮಸ್ಯೆಗಳನ್ನು ಎದುರಿಸುತ್ತಲೇ ಪ್ರಜಾಪ್ರಭುತ್ವವಾದಿ ಜಗತ್ತಿನ ಸಾರ್ವಜನಿಕ-ಅಭಿಪ್ರಾಯವನ್ನು ತಮ್ಮ ಪರವಾಗಿಸಿಕೊಳ್ಳಲು ಸಫಲರಾಗಿದ್ದಾರೆ. ಕ್ಯೂಬಾದ ವಿರುದ್ಧ ಅಮೇರಿಕಾದ ನಿರ್ಬಂಧದ ಧೋರಣೆಯನ್ನು ವಿಶ್ವಸಂಸ್ಥೆಯಲ್ಲಿ ಅತ್ಯಂತ ಭಾರೀ ಬಹುಮತದಿಂದ ನಿರಾಕರಿಸಿದ್ದು ಇದಕ್ಕೊಂದು ಜ್ವಲಂತ ಉದಾಹರಣೆ.

ಸ್ವಲ್ಪದರಲ್ಲಿ ಹೇಳುವುದಾದರೆ ವಿಶ್ವಬಂಡವಾಳಶಾಹಿ ಮತ್ತು ವಿಶ್ವ ಸಮಾಜವಾದದ ನಡುವಿನ ಹೋರಾಟ ಮುಂದುವರಿಯುತ್ತಿದೆಯಷ್ಟೇ ಅಲ್ಲ, ಅದೂ ಹೆಚ್ಚೆಚ್ಚಾಗಿ ಸಮಾಜವಾದೀ ಜಗತ್ತಿನ ಪರವಾಗಿ ತಿರುಗುತ್ತಿದೆ. ಆದ್ದರಿಂದ 1991 ರಲ್ಲಿ ನಡೆದ ಪ್ರತಿಕ್ರಾಂತಿಯ ಅರ್ಥ ಬಂಡವಾಳಶಾಹಿಯ ಸಂಪೂರ್ಣ ವಿಜಯ ಎಂಬ ವಿಶ್ವಬಂಡವಾಳಶಾಹಿ ಸಿದ್ಧಾಂತಿಗಳ ಹಾಗೂ ರಾಜಕಾರಣಗಳ ವಿಶ್ಲೇಷಣೆ ಸುಳ್ಳಾಗಿದೆ. ವಾಸ್ತವವಾಗಿ ಈ ಎರಡೂ ವ್ಯವಸ್ಥೆಗಳ ಬೃಹತ್ ಸಂಘರ್ಷದಲ್ಲಿ ಕೈ ಮೇಲಾಗುತ್ತಿರುವುದು ವಿಶ್ವ ಸಮಾಜವಾದದ್ದೇ ಹೊರತು ವಿಶ್ವಬಂಡವಾಳಶಾಹಿಯದ್ದಲ್ಲ.

ಏಕೆ ಈ ಪ್ರತಿಕ್ರಾಂತಿ?

ಆದರೂ, ಒಂದು ಮೂಲಭೂತ ಪ್ರಶ್ನೆ ಉಳಿದೇ ಉಳಿಯುತ್ತದೆ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನ ಜನತಾ ಪ್ರಜಾಪ್ರಭುತ್ವ ದೇಶಗಳಲ್ಲಿ ಪ್ರತಿಕ್ರಾಂತಿ ಏಕೆ ನಡೆಯಿತು? ಈ ಪ್ರಶ್ನೆಯನ್ನು ಸಿ.ಪಿ.ಐ(ಎಂ) ನ "ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ನಿರ್ಣಯ" ದಲ್ಲಿ ಎತ್ತಲಾಗಿತ್ತು. ಆದರೆ, ಸಂಪೂರ್ಣವಾಗಿ ಉತ್ತರಿಸಲಿಲ್ಲ. ಇದಕ್ಕೆ ಇನ್ನಷ್ಟು ಆಳವಾದ ಅಧ್ಯಯನ ಬೇಕು ಎಂದಿತ್ತು.

ನನ್ನ ಅಭಿಪ್ರಾಯದಲ್ಲಿ ಈ ಅಧ್ಯಯನವನ್ನು ವಸ್ತುನಿಷ್ಠ ಚಾರಿತ್ರಿಕ ಕಾರಣಗಳಿಂದಾಗಿ ಏಕೈಕ ದೇಶದಲ್ಲಿ ಸಮಾಜವಾದಿ ಕ್ರಾಂತಿಯನ್ನು ಆರಂಭಿಸುವುದು ಸಾಧ್ಯ. ಆದರೆ ಪೂರ್ಣಗೊಳಿಸಲು ಸಾಧ್ಯವಿಲ್ಲ ಎಂಬ ಲೆನಿನ್‌ವಾದೀ ತಿಳುವಳಿಕೆಯಿಂದ ಆರಂಭಿಸಬೇಕು. ಕಮ್ಯುನಿಸ್ಟ್ ಸಮಾಜದ ಸಮಾಜವಾದೀ ರಚನೆ ಪೂರ್ಣಗೊಳ್ಳಬೇಕಾದರೆ ಪ್ರಧಾನ ಬಂಡವಾಳ ಶಾಹಿ ದೇಶಗಳಲ್ಲಿ ಶ್ರಮಜೀವಿ ವರ್ಗದ ಕ್ರಾಂತಿಗಳು ಅಗತ್ಯ.

ನಿರ್ದಿಷ್ಟವಾಗಿ ಸೋವಿಯತ್ ರಷ್ಯಾದ ಬಗ್ಗೆ ಹೇಳುತ್ತಾ ಲೆನಿನ್ ಈ ದೇಶದಲ್ಲಿನ ಕಾರ್ಮಿಕ ವರ್ಗದ ಅಧಿಕಾರ ಬಂಡವಾಳ ಶಾಹಿ ದೇಶಗಳಿಗಿಂತ ಬಹಳಷ್ಟು ಮುಂದುವರೆದಿದ್ದರೂ ಸೋವಿಯತ್ ರಷ್ಯಾ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿದೆ ಎಂದಿದ್ದರು. ಈ ಹಿಂದುಳಿಯುವಿಕೆಯನ್ನು ನಿವಾರಿಸಿಕೊಳ್ಳಲು ಲೆನಿನ್ "ಹೊಸ ಆರ್ಥಿಕ ಧೋರಣೆ" ಯನ್ನು ರೂಪಿಸಿದ್ದರು. ಆರ್ಥಿಕವನ್ನು ಬೆಳೆಸುವುದು ಹೇಗೆ ಎಂಬುದನ್ನು ಬಂಡವಾಳ ಶಾಹಿಯಿಂದ ಕಲಿಯುತ್ತಾ ಸೋವಿಯತ್ ರಷ್ಯಾದಲ್ಲಿ ಅಧಿಕಾರದಲ್ಲಿರುವ ಕಾರ್ಮಿಕ ವರ್ಗ ತನ್ನ ಸಾಮಾಜಿಕ-ಸಾಂಸ್ಕೃತಿಕ ಮತ್ತು ಆರ್ಥಿಕ ಹಿಂದುಳಿಕೆಯನ್ನು ನಿವಾರಿಸಿಕೊಳ್ಳಬೇಕು ಎಂದು ಅವರು ಹೇಳಿದರು. ಆರ್ಥಿಕ ಬೆಳವಣಿಗೆ ಕುರಿತಂತೆ ಇಂತಹ ಒಂದು ನಿಲುವು ಬಂಡವಾಳಶಾಹಿಯನ್ನು ಉತ್ಪತ್ತಿಸಬಹುದು. ಆದರೆ ಲೆನಿನ್‌ರವರೇ ಹೇಳಿದಂತೆ ಪ್ರಭುತ್ವದ ಅಧಿಕಾರವನ್ನು ಕಾರ್ಮಿಕ ವರ್ಗ ಚಲಾಯಿಸುವುದರಿಂದ ಹೊಡ ಆರ್ಥಿಕ ಧೋರಣೆಯು ರಶ್ಯಾ ಸಮಾಜವಾದದ ರಕ್ಷ್ಯವಾಗಿ ಬೆಳೆಸಲು ಸಾಧ್ಯ.

ಬಿಕ್ಕಟ್ಟಿನ ಮೂಲ

ಈ ಲೆನಿನ್‌ವಾದೀ ಕಣ್ಣೋಟವನ್ನು ಅವರ ನಂತರ ಬಂದವರು, ಎಲ್ಲಕ್ಕೂ ಮುಖ್ಯವಾಗಿ ಸ್ಟಾಲಿನ್ ಆಚರಣೆಗೆ ತರದೆ ಕೈ ಬಿಟ್ಟದ್ದೇ ನನ್ನ ಅಭಿಪ್ರಾಯದಲ್ಲಿ ಬಿಕ್ಕಟ್ಟಿಗೆ ಮೂಲ ಕಾರಣ. ಸಾಮೂಹಿಕ ಕೃಷಿಯನ್ನು ಕಟ್ಟುವಲ್ಲಿನ ಪ್ರಕ್ರಿಯೆಯಲ್ಲಿ ಗಳಿಸಿದ ವಿಜಯದಿಂದಾಗದಿ ಸಮಾಜವಾದಿ ರಚನೆಯ ಕೆಲಸ ಸುಮಾರಾಗಿ ಪೂರ್ಣಗೊಂಡಿದೆ ಎಂಬ ತೀರ್ಮಾನಕ್ಕೆ ಬರಲಾಯಿತು. ಸಮಾಜವಾದೀ ರಚನೆಯನ್ನು ಒಂಟಿದೇಶದಲ್ಲಿ ಆರಂಭಿಸಲು ಸಾಧ್ಯವೆಂದು ಲೆನಿನ್ ಹೇಳಿದಂತೆ. ಒಂದೇ ದೇಶ ಒಂಟಿಯಾಗಿ ಅದನ್ನು ಪೂರ್ಣಗೊಳಿಸಲು, ಕಮ್ಯುನಿಸ್ಟ್ ರಚನೆಯನ್ನೂ ಆರಂಭಿಸಲು ಸಾಧ್ಯ ಎಂಬ ವಿಚಾರವನ್ನು ಬೆಳೆಸಲಾಯಿತು.

ಈ ವಿಚಾರವನ್ನು ಸ್ಟಾಲಿನ್ 18ನೇ ಮಹಾಧಿವೇಶನದ ಕೇಂದ್ರ ಸಮಿತಿ ವರದಿಯಲ್ಲಿ ತಾತ್ವಿಕವಾಗಿ ನಿರೂಪಿಸಿದರು. ಚೀಣಾದಲ್ಲೂ ಸಾಂಸ್ಕೃತಿಕ ಕ್ರಾಂತಿಯ ರಾಜಕೀಯ ಮೂಲತಃ ಚೀಣಾ ಮಾತ್ರವೇ ಏಕಾಂಗಿಯಾಗಿಯೇ ಸಮಾವಾದವನ್ನು ಪೂರ್ಣಗೊಳಿಸಿ ಕಮ್ಯುನಿಸಂನ್ನು ಆರಂಭಿಸುವುದು ಸಾಧ್ಯ ಎಂಬ ವಿಚಾರದ ಮೇಲೆ ನಿಂತಿತ್ತು. ಸಮಾಜವಾದೀ ರಚನೆಯ ಬಗ್ಗೆ ಸ್ಟಾಲಿನ್ ಮತ್ತು ಮಾವೋ ತಳೆದ ಎಡ-ಪಂಥವಾದಿ ನಿಲುವಿನಿಂದಾಗಿ ಅವರ ಉತ್ತರಾಧಿಗಳು ಇನ್ನೊಂದು ಅಲೆಗೆ ಹೋಗಿ ಸಮಾಜವಾದಿ ಆರ್ಥಿಕದ ಹಾಗೂ ಕಾರ್ಮಿಕ ವರ್ಗದ ಪ್ರಭುತ್ವಾಧಿಕಾರದ ಮಾರ್ಕ್ಸ್‌ವಾದಿ ಲೆನಿನ್‌ವಾದೀ ಪರಿಕಲ್ಪನೆಯನ್ನೇ ಕೈ ಬಿಟ್ಟರು. ಇದು ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿಯನ್ ಜನತಾ ಗಣತಂತ್ರಗಳಲ್ಲಿ ಪ್ರತಿಕ್ರಾಂತಿಯ ಸೈದ್ಧಾಂತಿಕ ಮೂಲ.

ಜಾಗರೂಕತೆ ಅಗತ್ಯ

ಚೀಣಾದಲ್ಲಿ ಸೋವಿಯತ್ ಒಕ್ಕೂಟದಲ್ಲಾದಂತೆ ಆಗಲಿಲ್ಲ. ಚೀಣಾದ ಪಕ್ಷ ಮಾವೋವಾದಿ ಎಡ-ಪಂಥವಾದವನ್ನು ಸರಿಪಡಿಸಲು ಸಮರ್ಥವಾಯಿತು. ಹೀಗೆ ಸರಿಪಡಿಸಿದ್ದು ಬಲಪಂಥೀಯ ಪರಿಷ್ಕರಣವಾದಿಂದಲ್ಲ. ಚೀಣಾದ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸರಿಯಾಗಿ ಅನ್ವಯಿಸುವ ಮೂಲಕ. ಡೆಂಗ್ ಕ್ಸಿಯಾವೋ ಪಿಂಗ್‌ರ ಹೊರ ಜಗತ್ತಿಗೆ ತೆರೆಯುವ ಹೊಸ ಆರ್ಥಿಕ ಧೋರಣೆ ವಾಸ್ತವವಾಗಿ ಲೆನಿನ್ನರ ನೀತಿಯ ಈಗಿನ ಆವೃತ್ತಿಯೇ ಆಗಿದೆ. ಚೀಣಾದ ಪರಿಸ್ಥಿತಿಗಳಿಗೆ ಆ ನೀತಿಯನ್ನು ಅನ್ವಯ ಇದು. ಆದ್ದರಿಂದಲೇ ಡೆಂಗ್ ರ ಚೀಣಾ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪ್ ಕುಸಿಯುವಂತೆ ಪ್ರತಿಕ್ರಾಂತಿಯನ್ನೆದುರಿಸಬೇಕಾಗಿ ಬರಲಿಲ್ಲ.

ಇದರರ್ಥ ಚೀಣೀ ಸಂಗಾತಿಗಳು ತಪ್ಪುಗಳನ್ನು ಮಾಡುವುದಿಲ್ಲ ಎಂದಲ್ಲ. ಆದರೆ ತಪ್ಪುಗಳನ್ನು ಮಾಡಿದಾಗ ತೀವ್ರ ಆಂತರಿಕ ಚರ್ಚೆಗಳ ಪ್ರಕ್ರಿಯೆಯ ಮೂಲಕ ಅದನ್ನು ತಿದ್ದಿಕೊಳ್ಳುತ್ತಾರೆ. ನಿಜ ಸಂಗತಿಯೆಂದರೆ ಚೀಣಾ ಕಮ್ಯುನಿಸ್ಟ್ ಪಕ್ಷ ಡೆಂಗ್ ದಾರಿಯನ್ನು ಮುಂದುವರಿಸುವಾಗ ಬಲಪಂಥೀಯ ಮತ್ತು ಎಡಪಂಥೀಯ ಮಾರ್ಗಚ್ಯುತಿಗಳ ಅಪಾಯ ಇದೆ. ಅವುಗಳ ವಿರುದ್ಧ ಪಕ್ಷ ಜಾಗರೂಕವಾಗಿರಬೇಕು ಎಂದು ಸ್ಪಷ್ಟವಾಗಿ ಸಾರಿದೆ. ಸೋವಿಯತ್ ಒಕ್ಕೂಟದಲ್ಲಿ ಲೆನಿನ್ ನಂತರದ ದಿನಗಳಲ್ಲಿ ಇಂತಹ ಜಾಗ್ರರೂಕತೆಯ ಅಭಾವವೇ ಕೊನೆಗೆ ಸೋವಿಯತ್ ಒಕ್ಕೂಟ ಹಾಗೂ ಪೂರ್ವಯುರೋಪಿನ ಸಮಾಜವಾದಿ ದೇಶಗಳನ್ನು ಕಿತ್ತುಕೊಂಡು ಹೋದ ಪ್ರತಿಕ್ರಾಂತಿಯ ಮೂಲಭೂತ ಕಾರಣ.

ನವ ಕರ್ನಾಟಕ ಪ್ರಕಾಶನದ ಬೃಹತ್ ಯೋಜನೆ
ನಾಲ್ಕು ಸಂಪುಟಗಳ 'ಜ್ಞಾನ ವಿಜ್ಞಾನ ಕೋಶ'

ನವ ಕರ್ನಾಟಕ ಪ್ರಕಾಶನ ಸಂಸ್ಥೆ ಪ್ರಕಟಿಸಲಿರುವ 'ನವ ಕರ್ನಾಟಕ ಜ್ಞಾನ-ವಿಜ್ಞಾನ ಕೋಶ'ದ ಮಾಹಿತಿ ಪತ್ರದ ಬಿಡುಗಡೆ ಸಮಾರಂಭ ತಾ. 28-09-97 ರ ಭಾನುವಾರ ನಗರದ ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ನಡೆಯಿತು. ಪ್ರಧಾನ ಸಂಪಾದಕರಾದ ಪ್ರೊ. ಎಂ.ಎ.ಸೇತುರಾವ್, ಶ್ರೀ ಕೆ.ಎಲ್.ಗೋಪಾಲಕೃಷ್ಣರಾವ್, ಸಲಹಾ ಮಂಡಳಿಯ ಸದಸ್ಯರಾದ ಪ್ರೊ.ಜೆ.ಆರ್.ಲಕ್ಷ್ಮಣರಾವ್, ಪ್ರೊ.ಅಡ್ಯನಡ್ಕ ಕೃಷ್ಣಭಟ್, ಶ್ರೀ ಕೊಳ್ಳೇಗಾಲ ಶರ್ಮ ಹಾಗೂ ಡಾ. ಕೆ.ವಿ. ವೆಂಕಟರಾಮು ಮತ್ತು ವಿಜ್ಞಾನ ಕೋಶದ ಲೇಖಕ ಬಳಗದ ಸದಸ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಪ್ರೊ.ಜೆ.ಆರ್.ಲಕ್ಷ್ಮಣರಾವ್ ಬಹುವರ್ಣದ ಮಾಹಿತಿ ಪತ್ರವನ್ನು ಬಿಡುಗಡೆ ಮಾಡಿದರು.

ಡೆಮಿ 1/4 ಆಕಾರದ ಸುಮಾರು 680 ಪುಟಗಳ ಬಹುವರ್ಣಗಳ ನಾಲ್ಕು ಸಂಪುಟಗಳ ಈ ಕೃತಿ 1998 ರ ಮಾರ್ಚ್ ವೇಳೆಗೆ ಬೆಳಕು ಕಾಣಲಿದೆ ಎಂಬ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಎಂ.ಎ. ಸೇತುರಾವ್, ಸಂಪುಟಗಳಲ್ಲಿ ಸುಮಾರು ಇಪ್ಪತ್ತೈದು ವಿವಿಧ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಒಂದು ಸಾವಿರಕ್ಕೂ ಹೆಚ್ಚು ಕಿರುಲೇಖನಗಳಿರುವುದಾಗಿಯೂ ಪ್ರತಿಯೊಂದು ಲೇಖನಕ್ಕೂ ರೇಖಾಚಿತ್ರ ಮತ್ತು ವರ್ಣಚಿತ್ರಗಳಿದ್ದು, ಈ ಸಂಪುಟಗಳು ನಮ್ಮ ವಿದ್ಯಾರ್ಥಿಗಳಿಗೂ ವಿಜ್ಞಾನ ವಿಷಯಗಳಲ್ಲಿ ಆಸಕ್ತರಾಗಿರುವ ಓದುಗರಿಗೂ ಆಕರ ಗ್ರಂಥವಾಗಲಿವೆ ಎಂದರು. ಪತ್ರಕರ್ತರ ಅನೇಕ ಪ್ರಶ್ನೆಗಳಿಗೆ ಪ್ರಧಾನ ಸಂಪಾದಕರು ಹಾಗೂ ಸಲಹಾ ಮಂಡಳಿಯ ಸದಸ್ಯರು ಉತ್ತರಿಸಿದರು.

ಸಂಪಾದಕ ಮಂಡಳಿಯ ಕಾರ್ಯದರ್ಶಿಯಾದ ಶ್ರೀ. ಆರ್.ಎಸ್.ರಾಜಾರಾಮ್ ಇಂಥ ಬೃಹತ್ ಯೋಜನೆಯನ್ನು ಹಮ್ಮಿಕ್ಕೊಳ್ಳಬೇಕಾದ ಸಂದರ್ಭವನ್ನು, ಇಂಥ ಕೃತಿ ಇಂದು ಓದುಗರಿಗೆ ಅತ್ಯಗತ್ಯ ಎಂಬುದನ್ನು ವಿವರಿಸಿದರಲ್ಲದೆ, ಕನ್ನಡದಲ್ಲಿ ಇನ್ನಷ್ಟು ತುರ್ತಾಗಿ ಆಗಬೇಕಾಗಿರುವ 'ವಿಜ್ಞಾನ ಪದವಿವರಣ ಕೋಶ'ದ ಕಾರ್ಯ ಕಳೆದ ಐದು ವರ್ಷಗಳಿಂದ ನಡೆಯುತ್ತಿದ್ದು, ಸುಮಾರು 700 ಪುಟಗಳ ಈ ಕೃತಿಯನ್ನು ಮುಂದಿನ ವರ್ಷವೇ ಪ್ರಕಟಿಸಲಾಗುವುದು ಎಂದರು. ಸುಮಾರು 17 ವರ್ಷಗಳ ಹಿಂದೆ ನವಕರ್ನಾಟಕ ಪ್ರಕಟಿಸಿದ 'ವಿಶ್ವ ಕಥಾ ಕೋಶ'ದ ಅನುಭವಗಳನ್ನು ಸ್ಮರಿಸಿಕೊಳ್ಳುತ್ತ, ಕನ್ನಡದಲ್ಲಿ ಪ್ರಥಮವಾದ ಇಂಥ ಅತ್ಯುತ್ತಮ ವಿಜ್ಞಾನ ಆಕರ ಕೋಶವನ್ನು ಓದುಗರು ಸ್ವಾಗತಿಸುವರು ಎಂಬ ತಮ್ಮ ಆಶಯ ವ್ಯಕ್ತಪಡಿಸಿದರು. ಜೊತೆಗೆ, ರೂ. 1800 ಬೆಲೆಯ ಈ ಸಂಪುಟಗಳನ್ನು ಖರೀದಿಸುವವರಿಗೆ ಶೇ. 25 ರಷ್ಟು ಪ್ರಕಟಣಾಪೂರ್ವ ರಿಯಾಯಿತಿ ನೀಡುವುದಾಗಿಯು ಹೀಗೆ ರೂ. 450 ವಿಶೇಷ ರಿಯಾಯಿತಿ ದೊರಕುವುದೆಂದು ಹೇಳಿದರು. ಒಮ್ಮೆಲೇ ಪೂರ್ತಿ ಹಣ ಕೊಡಲು ಸಾಧ್ಯವಿಲ್ಲದವರಿಗಾಗಿ ಕೆನರಾ ಬ್ಯಾಂಕ್ ಮತ್ತು ಸಿಂಡಿಕೇಟ್ ಬ್ಯಾಂಕ್‌ಗಳು ಸಾಲ ನೀಡಲು ಮುಂದೆ ಬಂದಿರುವುದಾಗಿಯೂ, ಕರ್ನಾಟಕದ ಎಲ್ಲ ಕಡೆ ಅಲ್ಲದೆ ದಿಲ್ಲಿ, ಮುಂಬೈ, ಚೆನ್ನೈ, ಕಾಸರಗೋಡು-ಮುಂತಾದ ಕಡೆಗಳಲ್ಲಿರುವ ಕನ್ನಡಿಗರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಶಾಖಾ ಸಮ್ಮೇಳನಗಳು

ಸಿಪಿಐ(ಎಂ) ಸಮ್ಮೇಳನಗಳು

ಕೂಳ್ಯ

ಮಂಗಳೂರು: ಸಿಪಿಐ(ಎಂ) ಸಮ್ಮೇಳನವು ಸೋಮೇಶ್ವರ ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಭಾರೀ ಪ್ರಮಾಣದ ಅವ್ಯವಹಾರ ನಡೆದಿದೆ. ಇದನ್ನು ರಾಜ್ಯ ಸರಕಾರ ಹಾಗೂ ಜಿಲ್ಲಾಧಿಕಾರಿಗಳು ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರನ್ನು ಕಾನೂನು ಕ್ರಮಕ್ಕೆ ಗುರಿಪಡಿಸಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಸೆ.20 ರಂದು ಕಾಂ॥ ಪದ್ಮನಾಭ ಮಂಜೇಶ್ವರ ಅಧ್ಯಕ್ಷತೆಯಲ್ಲಿ ಸೇರಿದ ಸಮ್ಮೇಳನವು ಸರಕಾರಿ ಸ್ಥಳದಲ್ಲಿ ಗುಡಿಸಲು ಕಟ್ಟಿದವರಿಗೆ ಹಕ್ಕುಪತ್ರ ಕೊಡಬೇಕು, ರೈಲ್ವೆ ಸಂತ್ರಸ್ತರಿಗೆ ಶೀಘ್ರ ಪರಿಹಾರ ಕೊಡಬೇಕು, ಸೋಮೇಶ್ವರ ಪಂಚಾಯತಿಗೆ ತುರ್ತು ಚುನಾವಣೆ ನಡೆಸಬೇಕೆಂದೂ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಸಮ್ಮೇಳನವು ಅಗಲಿದ ಸಂಗಾತಿ ರಾಮದಾಸ್ ಪ್ರಭುವಿಗೆ ಸಂತಾಪ ಸೂಚಿಸಿತು.

ನಾಗೇಶ ಗಟ್ಟಿ ಅವರನ್ನು ಕಾರ್ಯದರ್ಶಿಯನ್ನಾಗಿ ಸಮ್ಮೇಳನವು ಅವಿರೋಧವಾಗಿ ಆಯ್ಕೆಮಾಡಿತು.

ಪಕ್ಷದ ವಲಯ ಸಮಿತಿ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಮಾತನಾಡಿ, ಗ್ರಾಮದ ಸಮಸ್ಯೆಗಳನ್ನು ಪರಿಹರಿಸಲು ಸಂಘಟಿತ ರೂಪದ ಹೋರಾಟದಿಂದ ಸಾಧ್ಯ ಎಂದು ಹೇಳಿದರಲ್ಲದೆ ಈ ಪ್ರದೇಶದಲ್ಲಿ ಬಹಳಷ್ಟು ಕೆಲಸಗಳನ್ನು ಹೋರಾಟದ ಮೂಲಕ ಮಾಡಿದ ನಿದರ್ಶನಗಳನ್ನು ತಿಳಿಸಿದರು.

ನೆಲಮಾಕನ ಹಳ್ಳಿ

ಮಳವಳ್ಳಿ: ಕಾಳಕೆಂಪನದೊಡ್ಡಿ ಗ್ರಾಮದಲ್ಲಿ ಎನ್.ಎಂ.ಹಳ್ಳಿ ಸಿಪಿಐ(ಎಂ) ಶಾಖಾ ಸಮ್ಮೇಳನ ಅಕ್ಟೋಬರ್ 10 ರಂದು ನಡೆಯಿತು. ಶಾಖಾ ಕಾರ್ಯದರ್ಶಿ ನಾರಾಯಣರವರು ಧ್ವಜಾರೋಹಣ ಮಾಡಿದರು. ತಾಲ್ಲೂಕು ಕಾರ್ಯದರ್ಶಿ ಜಿ.ರಾಮಕೃಷ್ಣ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಕುರಿತು ಸುದೀರ್ಘವಾಗಿ ಚರ್ಚಿಸಿ ಹಲವು ನಿರ್ಣಯಗಳನ್ನು ತೆಗೆದುಕೊಂಡಿತು.

- ನೆಲಮಾಕನ ಹಳ್ಳಿ ಗ್ರಾಮದ ಮೇಜರ್ ವಾಟರ್ ಟ್ಯಾಂಕ್ ಪುನರ್ ಕಾಮಗಾರಿ ಮಾಡಿ ನೀರೊದಗಿಸಬೇಕು.
- ಎನ್.ಎಂ.ಹಳ್ಳಿ ಗ್ರಾಮದಲ್ಲಿ ಸರ್ಕಾರಿ ಹಿರಿಯ ಮಾಧ್ಯಮಿಕ ಪಾಠ ಶಾಲೆಯ ಆವರಣದಲ್ಲಿ ದೊಡ್ಡ ಗುಂಡಿಯನ್ನು ತಕ್ಷಣ ಮುಚ್ಚಿ ವಿದ್ಯಾರ್ಥಿಗಳಿಗೆ ಆಟವಾಡಲು ಅವಕಾಶ ಕಲ್ಪಿಸಬೇಕು.
- ಕಾಳಕೆಂಪನದೊಡ್ಡಿಗೆ ಬಸ್ ಮತ್ತು ಉತ್ತಮ ರಸ್ತೆಗಳನ್ನು ಕಲ್ಪಿಸಬೇಕು.
- ಹೆಬ್ಬಾಳು ಕಾಲುವೆಯಿಂದ ಏತ ನೀರಾವರಿ ಮಾಡಿ ಹೊಂಬೆಗೌಡನ ದೊಡ್ಡಿ, ನೆಲ್ಲೂರು, ಕಾಳಕೆಂಪನದೊಡ್ಡಿ ಪ್ರದೇಶಕ್ಕೆ ನೀರೊದಗಿಸಬೇಕು.
- 20 ಮತ್ತು 13ನೇ ನಾಲಾ ತೂಬಿನ ಹತ್ತಿರ ಹೊಸ ಸೇತುವೆ ನಿರ್ಮಿಸಬೇಕು.
- ಕೆ.ಕೆ. ದೊಡ್ಡಿಯಲ್ಲಿರುವ ಟ್ರಾನ್ಸ್‌ಫಾರಂನ್ನು ಬದಲಾಯಿಸಬೇಕು.

ಸಮ್ಮೇಳನವು ಹೊಸ ಕಾರ್ಯದರ್ಶಿಯನ್ನಾಗಿ ಎನ್. ಎಲ್.ಭರತ್ ರಾಜ್ ರವರನ್ನು ಆಯ್ಕೆ ಮಾಡಿತು.

ಅಂಬಲಗಿ ಗ್ರಾಮ

ಆಳಂದ ತಾಲೂಕಿನ ಕೆರಿ ಅಂಬಲಗಿ ಗ್ರಾಮದ ಶಾಖಾ ಸಮ್ಮೇಳನವು ಅಕ್ಟೋಬರ್ 19 ರಂದು ನಡೆಯಿತು. ಶಾಖಾ ಸಮ್ಮೇಳನ ದಂಗವಾಗಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ಪಂಚಾಯತಿ ಸದಸ್ಯರು, ಜಿಲ್ಲಾ ಸಮಿತಿ ಸದಸ್ಯರೂ ಆದ ಕಾಂ॥ ಮೇಘರಾಜ ಕಠಾರೆ ಮತ್ತು ಕಾಂ॥ ಶಿವ ಶರಣಪ್ಪ ಬುದ್ಧಿವಂತ ಅವರು ಮಾತನಾಡಿ ದರು. ಸಭೆಯ ಅಧ್ಯಕ್ಷತೆಯನ್ನು ಹಾಜಿ ಸಾಹೇಬ ಜಮಾದಾರ ವಹಿಸಿದ್ದರು.

ಯಳವಂತಗಿ(ಬಿ)

ಅಕ್ಟೋಬರ್ 16 ರಂದು ಗುಲಬರ್ಗಾ ತಾಲೂಕಿನ ಯಳವಂತಗಿ ಗ್ರಾಮದ ಶಾಖಾ ಸಮ್ಮೇಳನ ಜರುಗಿತು. ಸಮ್ಮೇಳನದಂಗವಾಗಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ॥ ವಿರೂಪಾಕ್ಷ ತಡಕಲ್ ಮಾತನಾಡುತ್ತಾ ಜನಪ್ರತಿನಿಧಿಗಳ ಕಾರ್ಯವೈಖರಿ ಬಗ್ಗೆ ಟೀಕಿಸುತ್ತಾ ಸಂಯುಕ್ತ ರಂಗ ಸರ್ಕಾರ ರಚಿಸುವಲ್ಲಿ ಸಿಪಿಐ(ಎಂ) ಮಹತ್ವದ ಪಾತ್ರ ವಹಿಸಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಸಂಯುಕ್ತ ರಂಗ ಸರ್ಕಾರ ಜನವಿರೋಧಿ ನಿಲುವುಗಳನ್ನು ತಾಳುತ್ತಿರುವುದಕ್ಕೆ ಜನತೆ ಎಚ್ಚೆತ್ತು ಪ್ರತಿಭಟಿಸುವುದು ಅನಿವಾರ್ಯವಾಗಿದೆಯೆಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಾ॥ ಮಹದೇವಪ್ಪ ಜೇವಣಗಿ ವಹಿಸಿದ್ದರು. ಸ್ವಾಗತ ವಿಠಲ ಬಾಲಖೇಡ ಮಾಡಿದರೆ ವಂದನಾರ್ಪಣೆಯನ್ನು ಬಸವರಾಜ ಮುಗಳಿ ನೆರವೇರಿಸಿದರು. ಸಮ್ಮೇಳನದ ಪ್ರಾರಂಭದಲ್ಲಿ ಗ್ರಾಮದ ಹಿರಿಯರಾದ ಪಾಟೀಪಟೇಲ ಬಿರಾದಾರ ಇವರು ಧ್ವಜಾರೋಹಣ ನೆರವೇರಿಸಿದರು. ಶಾಖಾ ಕಾರ್ಯದರ್ಶಿಯನ್ನಾಗಿ ಕಾಂ॥ ನಾಗಪ್ಪ ಬಿರಾದಾರ ಇವರನ್ನು ಆಯ್ಕೆ ಮಾಡಲಾಯಿತು.

ಅವರಾದ (ಬಿ)

ಇತ್ತೀಚೆಗೆ ಗುಲಬರ್ಗಾ ತಾಲೂಕಿನ ಅವರಾದ(ಬಿ) ಗ್ರಾಮದ ಶಾಖಾ ಸಮ್ಮೇಳನ ಜರುಗಿತು. ಸಮ್ಮೇಳನದಂಗವಾಗಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ॥ ಮಾರುತಿ ಮಾನಪಡೆಯವರು ಮಾತನಾಡುತ್ತಾ, ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಸಿಪಿಐ(ಎಂ) ಬಹುಮುಖ್ಯ ಪಾತ್ರ ವಹಿಸುತ್ತಿದೆ. ದೇಶ ಇಂದು ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಹಿಂದಿನ ಕಾಂಗ್ರೆಸ್ ಸರ್ಕಾರದ ನೀತಿಗಳನ್ನೇ ಸಂಯುಕ್ತ ರಂಗ ಸರ್ಕಾರ ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ಕಟುವಾಗಿ ಟೀಕಿಸಿದರು. ಸಂಯುಕ್ತ ರಂಗದ ಜನವಿರೋಧಿ ನಿಲುವುಗಳಿಂದಾಗಿ ಬೆಲೆಏರಿಕೆ, ಹಣದುಬ್ಬರ ಅತಿಯಾಗಿರುವುದರಿಂದ ಸಾಮಾನ್ಯ ಜನತೆ ಅತ್ಯಂತ ಕಷ್ಟದ ಜೀವನ ಸಾಗಿಸುವಂತಾಗಿದೆ ಎಂದು ತಿಳಿಸಿದರು. ಅದಕ್ಕಾಗಿ ಜನತೆ ಹೋರಾಟಕ್ಕೆ ಇಳಿಯಬೇಕೆಂದು ಕರೆ ಕೊಟ್ಟರು. ಇನ್ನೊಬ್ಬ ಅತಿಥಿಗಳಾಗಿದ್ದ ನ್ಯಾಯವಾದಿ ಕಾಂ॥ ಸುಭಾಸ ಚಂದ್ರ ಬಾಣೆ ಮಾತನಾಡುತ್ತಾ ಗ್ರಾಮೀಣ ಮಟ್ಟದಲ್ಲಿ ಜನಸಮೂಹ ರಾಜಕೀಯದಿಂದ ದೂರವುಳಿಯುತ್ತಿರುವುದಕ್ಕೆ ವಿಷಾದಿಸಿದ ಅವರು ಬದುಕಿಗೂ ರಾಜಕೀಯಕ್ಕೂ ನಿಕಟ ಸಂಬಂಧವಿದೆಯೆಂದು ಹೇಳಿದರು.

ಸಭೆಯಲ್ಲಿ ಶಿವಕುಮಾರ ನ್ಯಾಯವಾದಿಗಳು ಮತ್ತು ಕಾಂ॥ ವಿರೂಪಾಕ್ಷ ತಡಕಲ್ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾ॥ ಸದಾಶಿವ ಹೊಡಲ್ ವಹಿಸಿದ್ದರು. ನಂತರದಲ್ಲಿ ಕಾಂ॥ ಸೂರ್ಯಕಾಂತ ಆರ್.ತಗನೂರ ಅವರನ್ನು ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು.

ಮಹಿಳೆ ಮೇಲೆ ಹಲ್ಲೆ: ದುಷ್ಕರ್ಮಿಗಳ ಬಂಧನಕ್ಕೆ ಒತ್ತಾಯ

ರಾಜ್ಯ ಅಂಗನವಾಡಿ ನೌಕರರ ಸಂಘದ ಉಪಾಧ್ಯಕ್ಷರ ಮತ್ತು ಚಿಂಚೋಳಿ ತಾಲೂಕು ಜೆ.ಎಂ.ಎಸ್. ಕಾರ್ಯದರ್ಶಿಯಾದ ಕಾ॥ ಸೌಭಾಗ್ಯಮ್ಮ ಅವರ ಮನೆಗೆ ನುಗ್ಗಿ ಅವರ ಮೇಲೆ ಹಲ್ಲೆ ನಡೆಸಿ ಸೀರೆ ಎಳೆದಾಡಿ ಸಾರ್ವಜನಿಕವಾಗಿ ಅಪಮಾನಕ್ಕೆ ಗುರಿಪಡಿಸಿ, ಕಿವಿಯಲ್ಲಿನ ಓಲೆಗಳನ್ನು ಕಿತ್ತುಕೊಂಡು ಅವಾಚ್ಯ ಶಬ್ದಗಳಿಂದ ಬೈಯ್ದು ಕೆಲವು ದುಷ್ಕರ್ಮಿಗಳನ್ನು ತಕ್ಷಣವೇ ಬಂಧಿಸಿ ಶಿಕ್ಷೆಗೆ ಗುರಿಪಡಿಸಬೇಕೆಂದು ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆ, ಅಂಗನವಾಡಿ ನೌಕರರ ಸಂಘ, ಪ್ರಾಂತರೈತ ಸಂಘ ಮತ್ತು ಗ್ರಾಮ ಪಂಚಾಯತ್ ನೌಕರರ ಸಂಘದ 300 ಕ್ಕೂ ಹೆಚ್ಚು ಕಾರ್ಯಕರ್ತರು ಅ.22 ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ಚಿಂಚೋಳಿ ತಹಶೀಲ್ದಾರರಿಗೆ ಮನವಿ ಪತ್ರ ಅರ್ಪಿಸಿದರು. ನಂತರ ಸಾಂಕೇತಿಕ ಧರಣಿ ನಡೆಸಿದರು. ಘಟನೆ ನಡೆದ ದಿನ ಹಲ್ಲೆಗೊಳಗಾದ ಕಾಂ॥ ಸೌಭಾಗ್ಯಮ್ಮ ಪೋಲೀಸರಿಗೆ ದೂರು ಕೊಡಲು ಹೋದಾಗ ಪೋಲೀಸರು ದೂರು ಸ್ವೀಕರಿಸದೇ ದುಷ್ಕರ್ಮಿಗಳನ್ನು ರಕ್ಷಿಸಲು ಮುಂದಾಗಿರುವುದನ್ನು ಖಂಡಿಸಿದ ಅವರು ತಕ್ಷಣ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು. ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಜೆಎಂಎಸ್ ರಾಜ್ಯ ಕಾರ್ಯದರ್ಶಿ ಕಾಂ॥ ಕೆ.ನೀಲಾ, ಪಾರ್ವತಿ ಬಸಂತಪೂರ, ಪ್ರಾಂತ ರೈತ ಸಂಘದ ಬೀಮಶೆಟ್ಟಿ ಎಂಪಳ್ಳಿ, ಅಂಗನವಾಡಿ ನೌಕರರ ಸಂಘದ ಅನ್ನಪೂರ್ಣ ಕೊಳ್ಳೂರ ಹಾಗೂ ಗ್ರಾಮ ಪಂಚಾಯತ್ ನೌಕರರ ಸಂಘದ ಗುಂಡಪ್ಪ ಕಮಲಾಕರ ವಹಿಸಿದ್ದರು.

ಅದೇ ದಿನ ಘಟನೆ ನಡೆದ ಸ್ಥಳವಾದ ಕರಕಮುಕಳಿ ಗ್ರಾಮದಲ್ಲಿ ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ನೀಲಾ.ಕೆ, ಗಂಗಮ್ಮ ಬಿರಾದಾರ, ಭೀಮಶೆಟ್ಟಿ ಮತ್ತಿತರರು ಮಾತನಾಡಿ ಈ ಘಟನೆಯನ್ನು ಖಂಡಿಸಿದರು.

ಕೆರೆಗೆ ಒತ್ತಾಯಿಸಿ ರೈತರ ಧರಣಿ

ಬೆಂಗಳೂರು: ಜಿಲ್ಲೆಯ ಮಾಗಡಿ ತಾಲ್ಲೂಕಿನ ತಹಶೀಲ್ದಾರರ ಕಛೇರಿಯ ಮುಂದೆ ಅಕ್ಟೋಬರ್ 24 ರಂದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಅಜ್ಜನ ಹಳ್ಳಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ನೂರಾರು ರೈತರು ಕೆರೆ, ವೈದ್ಯಕೀಯ ಸೌಲಭ್ಯಕ್ಕೆ ಒತ್ತಾಯಿಸಿ ಧರಣಿ ನಡೆಸಿದರು.

ತಾಲ್ಲೂಕಿನ ಅಜ್ಜನ ಹಳ್ಳಿ ಗ್ರಾಮಕ್ಕೆ ಸೇರಿದ 15 ಹಳ್ಳಿಗಳ 400 ಏಕರೆ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಕೆರೆಯ ಕಾಮಗಾರಿ ಕೆಲಸ 1992-93 ರಲ್ಲಿ ನಿಂತು ಹೋಗಿದೆ. ರೈತರಿಗೆ ತುಂಬಾ ಅನಾನುಕೂಲವಾಗಿದೆ. ಆದ್ದರಿಂದ ಇದನ್ನು ಶೀಘ್ರವಾಗಿ ಪ್ರಾರಂಭಿಸಬೇಕು, ಈ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಇಲ್ಲದಿರುವುದರಿಂದ ಆಸ್ಪತ್ರೆ ಕಟ್ಟಿಸಿಕೊಡಬೇಕು ಎಂದು ಈ ಹಳ್ಳಿಗಳ ನೂರಾರು ರೈತರು ಮೆರವಣಿಗೆ ನಡೆಸಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ರೈತ ಸಂಘದ ಪಿ.ಜಗನ್ನಾಥ್, ಸಿಐಟಿಯು ಮುಖಂಡರಾದ ಜಿ.ರಾಮಯ್ಯ, ಪಿ.ಕೆ.ಸುಬ್ರಮಣಿ, ಶ್ಯಾಮಣ್ಣ ರೆಡ್ಡಿ, ವೆಂಕಟಾಚಲಂ, ಡಿವೈಎಫ್ಐನ ಗೋಪಾಲಕೃಷ್ಣ ಮುಂತಾದವರು ಮಾತನಾಡಿದರು.

ರೈತ ಮುಖಂಡ ಎಂ.ಎಸ್.ನಾರಾಯಣ ನಿಧನ

ಮಂಗಳೂರು: ಕರ್ನಾಟಕ ಪ್ರಾಂತ ರೈತ ಸಂಘದ ಮಂಗಳೂರು ತಾಲ್ಲೂಕು ಮಳಲಿ ಪ್ರದೇಶ ರೈತ ಸಂಘದ ಮುಖಂಡರೂ, ರೈತ ಕೃಷಿ ಕೂಲಿಕಾರರ ಹೋರಾಟಗಾರರು ಆದ ಸಂಗಾತಿ ಕಾಂ॥ ಎಂ.ಎಸ್.ನಾರಾಯಣರವರು ಅಕ್ಟೋಬರ್ 3 ರಂದು ಮಳಲಿಯ ಸಂಕೇತ ನಿವಾಸದಲ್ಲಿ ನಿಧನರಾದರು.

ಗೇಣಿ ಪದ್ಧತಿ ರದ್ಧತಿಗಾಗಿ, ಭೂಮಾಲಕರಿಂದ ಬಡ ರೈತರಿಗೆ ಕೊಡುವ ಕಿರುಕುಳ ದೌರ್ಜನ್ಯದ ವಿರುದ್ಧ ಹಾಗೂ ಕರ್ನಾಟಕದಲ್ಲಿ ಭೂ ಸುಧಾರಣಾ ಕಾನೂನು ಜಾರಿಯಾಗಬೇಕೆಂಬ ಹೋರಾಟಗಳಲ್ಲಿ ಸಂಗಾತಿ ಎಂ.ಎಸ್.ನಾರಾಯಣರವರು ನೇತೃತ್ವ ನೀಡಿದ್ದರು.

ಎಂ.ಎಸ್.ನಾರಾಯಣರವರ ನಿಧನ, ಮಂಗಳೂರು ತಾಲ್ಲೂಕು ರೈತ ಸಂಘಕ್ಕೆ ತುಂಬಲಾರದ ನಷ್ಟ ಹಾಗೂ ಒಬ್ಬ ದಕ್ಷ, ಪ್ರಾಮಾಣಿಕ ನಾಯಕನನ್ನು ರೈತ ಸಂಘ ಕಳೆಕೊಂಡಿತು ಎಂದು ಮಂಗಳೂರು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್ ಅತೀವ ದುಃಖ ವ್ಯಕ್ತಪಡಿಸಿದ್ದಾರೆ.

ಎಸ್.ಎಫ್.ಐ ಧರಣಿ

ರಾಜ್ಯದಲ್ಲಿನ ಸರ್ಕಾರಿ ಹಾಗೂ ಅನುದಾನಿತ ಕಾಲೇಜುಗಳಲ್ಲಿ ಖಾಲಿ ಇರುವ 3150 ಉಪನ್ಯಾಸಕ ಹುದ್ದೆಗಳನ್ನು ಭರ್ತಿಮಾಡಬೇಕು, ಎಸ್ಎಫ್ಐ ಕಾರ್ಯಕರ್ತರ ಮೇಲೆ ಹೂಡಿದ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಗುಲಬರ್ಗಾ ಎಸ್ಎಫ್ಐ ಜಿಲ್ಲಾ ಸಮಿತಿ ಅಕ್ಟೋಬರ್ 21 ರಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಿತು.

ಇದೇ ಸಂದರ್ಭದಲ್ಲಿ ಗೌರಿಬಿದನೂರು ಉಪನ್ಯಾಸಕರಾದ ಗಂಗಾಧರ ಮೂರ್ತಿಯವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಮತ್ತು ಚಿಂಚೋಳಿ ತಾಲೂಕಿನ ಚಂದನಕೇರಾ ವಸತಿ ನಿಲಯದ ವಿದ್ಯಾರ್ಥಿಗಳು ಭಿಕ್ಷೆ ಬೇಡಿ ಊಟ ಮಾಡಿದ್ದು, ಇದಕ್ಕೆ ಕಾರಣಕರ್ತರಾದ ಮೇಲ್ವಿಚಾರಕರು ಮತ್ತು ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹಾಗೂ ಚಿಂಚೋಳಿ ತಾಲೂಕಿನ ಜೆಎಂಎಸ್ ಮತ್ತು ಅಂಗನವಾಡಿ ನೌಕರರ ಮುಖಂಡರಾದ ಕಾಂ॥ ಸೌಭಾಗ್ಯಮ್ಮ ಇವರ ಮೇಲೆ ಹಲ್ಲೆ ನಡೆಸಿದ ದುಷ್ಕರ್ಮಿಗಳನ್ನು ಬಂಧಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಎಸ್ಎಫ್ಐ ಒತ್ತಾಯಿಸಿದೆ.

ಧರಣಿಯನ್ನುದ್ದೇಶಿಸಿ ಕಾಂ॥ ಅಪ್ಪಯ್ಯ ಹಿರೇಮಠ, ಕಾಂ॥ ಜೈಲಾಲ್ ತೋಟದಮನಿ, ಕಾಂ॥ ಚಂದ್ರಶೇಖರ್ ಮೇಟಿ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ನಾಯಕಿ ಕಾಂ॥ ಅಮೀನಾ ಬೇಗಂ ಧರಣಿಗೆ ಬೆಂಬಲಿಸಿ ಮಾತನಾಡಿದರು.

ಕನಿಷ್ಟ ಕೂಲಿ ಜಾರಿಗೆ ಒತ್ತಾಯಿಸಿ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆ

ರಾಮದುರ್ಗ: ಕರ್ನಾಟಕ ರಾಜ್ಯ ಸರಕಾರವು ಬೀಡಿ ಕಾರ್ಮಿಕರ ಕನಿಷ್ಟ ಕೂಲಿಯನ್ನು 01.11-96 ರಿಂದ ಅನ್ವಯವಾಗುವಂತೆ ಪರಿಷ್ಕರಿಸಿ ಪ್ರಕಟಣೆ ಹೊರಡಿಸಿತ್ತು. ಪ್ರತಿ ಸಾವಿರ ಬೀಡಿ ಸುತ್ತಲು ರೂ. 36.85 ಜೊತೆಗೆ 1513 ರಂತೆ ಗ್ರಾಹಕ ಬೆಲೆ ಸೂಚ್ಯಂಕದ ಹೆಚ್ಚಳದ ಪ್ರತಿ ಪಾಯಿಂಟಿಗೆ 3 ಪೈಸೆ ತುಟ್ಟಿಭತ್ಯೆ ನಿಗದಿಪಡಿಸಿದೆ. ಈ ಪ್ರಕಟಣೆಯಂತೆ ಪ್ರತಿಸಾವಿರ ಬೀಡಿ ಸುತ್ತಲು ರೂ. 46.54 ದೊರೆಯಬೇಕು.

ಈ ಪ್ರಕಟಣೆ ಬಂದು ಸುಮಾರು ಒಂದು ವರ್ಷವಾಗಿದ್ದರೂ ರಾಮದುರ್ಗದ 'ಪಿಸ್ತೂಲ ಬೀಡಿ' ಆಡಳಿತ ವರ್ಗವು ಹಿಂದಿನದರ ಅಂದರೆ ರೂ. 34.13 ಮಾತ್ರ ಕೊಡುತ್ತಿದೆ. ಪರಿಷ್ಕೃತ ಕೂಲಿ ಕೊಡುವಂತೆ ಮಾನ್ಯ ಡೆಪ್ಯೂಟಿ ಲೇಬರ್ ಕಮಿಷನರ್‌ರು ಮತ್ತು ಕಾರ್ಮಿಕ ಅಧಿಕಾರಿಗಳು ಲಿಖಿತ ಸೂಚನೆ ನೀಡಿದ್ದರೂ ಮಾನ್ಯ ಮಾಡಿಲ್ಲ.

ಮಾಲೀಕರ ನೀತಿಯನ್ನು ವಿರೋಧಿಸಿ ರಾಮದುರ್ಗದ ಪಿಸ್ತೂಲ ಬೀಡಿ ಕಾರ್ಮಿಕರು ಅಕ್ಟೋಬರ್ 13 ರಿಂದ ಕಾರ್ಖಾನೆಯ ಎದುರು ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ಅಕ್ಟೋಬರ್ 21 ರಂದು ಬೀಡಿ ಕಾರ್ಮಿಕರು ಬೃಹತ್ ಮೆರವಣಿಗೆ ಹೊರಡಿಸಿ ಕನಿಷ್ಟ ಕೂಲಿ ಪರಿಷ್ಕರಿಸದ ಆಡಳಿತ ವರ್ಗದ ಮೇಲೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಬೃಹತ್ ಮೆರವಣಿಗೆ ನಡೆಸಿ ಸರಕಾರಕ್ಕೆ ತಹಶೀಲ್ದಾರ ಮೂಲಕ ಮನವಿ ಸಲ್ಲಿಸಿದರು.

ಬೀಡಿ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಗೈಬು ಜೈನೆಖಾನ್ ಈ ಸಂದರ್ಭದಲ್ಲಿ ಮಾತನಾಡಿ ಕೂಡಲೇ ಸಮಸ್ಯೆ ಬಗೆ ಹರಿಯದಿದ್ದರೆ ಚಳುವಳಿಯನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿದ್ದಾರೆ.

ಮೆರವಣಿಗೆಯ ನೇತೃತ್ವವನ್ನು ಬಾಬು ಭಜಂತ್ರಿ ಮತ್ತು ಷಡೆಪ್ಪ ಶಾನವಾಡ ಮುಂತಾದವರು ವಹಿಸಿದ್ದರು.

ಸಿಪಿಐ(ಎಂ) ದ.ಕ. ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) ನ 16ನೇ ರಾಜ್ಯ ಸಮ್ಮೇಳನದ ಮೊದಲು ನಡೆಯುವ ವಿವಿಧ ಜಿಲ್ಲಾ ಸಮ್ಮೇಳನಗಳ ದಿನಾಂಕಗಳನ್ನು ಪ್ರಕಟಿಸಲಾಗಿತ್ತು. ಅದರಲ್ಲಿ ದ.ಕ.ಜಿಲ್ಲಾ ಸಮ್ಮೇಳನದ ದಿನಾಂಕಗಳಲ್ಲಿ ತುಸು ಬದಲಾವಣೆಯಾಗಿದೆ ಎಂದು ತಿಳಿಸಲಾಗಿತ್ತು. ಕಣ್ತಪ್ಪಿನಿಂದಾಗಿ ಆ ದಿನಾಂಕಗಳು ನವಂಬರ್ 14, 15, 16 ರಂದು ನಡೆಯಲಿದೆ ಎಂದು ಹೇಳಲಾಗಿತ್ತು. ಆದರೆ ಅದನ್ನು ಡಿಸೆಂಬರ್ 14, 15, 16 ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

1909ರಲ್ಲಿ ಭಾರತ ಸರಕಾರ ಶಾಸನವನ್ನು (ಇದನ್ನು ಮೋರ್ಲೆ-ಮಿಂಟೋ ಸುಧಾರಣೆಯೆನ್ನುತ್ತಾರೆ) ತಂದು ಭಾರತದ ರಾಷ್ಟ್ರೀಯ ಆಂದೋಲನದ ಮೇಲೆ ಧಾಳಿ ನಡೆಸಿದರು. ಇದರ ಪ್ರಕಾರ 1% ಕ್ಕೂ ಕಮ್ಮಿ ಭಾರತೀಯರಿಗೆ ಮತದಾನದ ಹಕ್ಕು ಕೊಡಲಾಯಿತು. ಈ 1% ಮಂದಿ ಆರಿಸಿದ ಪ್ರತಿನಿಧಿಗಳಿಗೂ ಕೇಂದ್ರೀಯ ಶಾಸನಸಭೆಯಲ್ಲಾಗಲೀ, ಪ್ರಾಂತೀಯ ಶಾಸನ ಸಭೆಗಳಿಗಾಗಲಿ ಬರುವುದಕ್ಕೆ ಅವಕಾಶವಿರಲಿಲ್ಲ. ಅಲ್ಲದೆ ಕೋಮು ಆಧಾರದ ಪ್ರತಿನಿಧಿ ವ್ಯವಸ್ಥೆಯನ್ನು ತರಲಾಯಿತು. ಕಾಂಗ್ರೆಸ್ಸಿನ ಮಂದಗಾಮಿ ಮುಖಂಡರು ಒಟ್ಟಾರೆಯಾಗಿ ಈ 'ಸುಧಾರಣೆ 'ಗಳನ್ನು ಬೆಂಬಲಿಸಿ ಬ್ರಿಟಿಷರ ಆಟಕ್ಕೆ ಬಲಿಯಾದರು. ಮುಸ್ಲಿಂ ಲೀಗ್ ಕೂಡಾ ಇದನ್ನು ಸ್ವಾಗತಿಸಿತು. ಆದರೆ ಉಗ್ರಗಾಮಿ ಮುಖಂಡ ಬಿಪಿನ್ ಚಂದ್ರ ಪಾಲ್ 'ಈ ಮೋರ್ಲೆಯ ಒಗ್ಗರಣೆ ಪಲ್ಯಕ್ಕೆ ಭಾರತ ತನ್ನ ಆತ್ಮವನ್ನು ಮಾರಿಕೊಳ್ಳುವುದಿಲ್ಲ' ಎಂದು ಗುಡುಗಿದರು.




ದಿಲ್ಲಿ ಪಿತೂರಿಯ ಮೊಕದ್ದಮೆಯ ಹುತಾತ್ಮರು. ಮಾಸ್ಟರ್ ಅಮರ್ ಚಂದ್, ಅಬೋಗ್ ಬೆಹಾರಿ, ಬಾಲಮುಕುಂದ್ ಮತ್ತು ಬಸಂತ ಬಿಸ್ವಾಸ್‌ನ ಸ್ಮಾರಕ


1911 ರ ನಂತರ ಬ್ರಿಟಿಶ್ ಭಾರತದ ರಾಜಧಾನಿಯನ್ನು ಕಲ್ಕತ್ತೆಯಿಂದ ದಿಲ್ಲಿಗೆ ವರ್ಗಾಯಿಸಲಾಯಿತು. ಡಿಸೆಂಬರ್ 23,1912 ರಂದು ಹೊಸ ರಾಜಧಾನಿಯನ್ನು ವಿಧ್ಯುಕ್ತವಾಗಿ ಉದ್ಘಾಟಿಸಲಾಯಿತು. ಅಂದಿನ ವೈಸ್‌ರಾಯ್ ಲಾರ್ಡ್‌ಹಾರ್ಡಿಂಡ್ 'ದರ್ಬಾರ್' ನಡೆಸಲು ಆನೆಯ ಮೇಲೆ ಕೂತು ದಿಲ್ಲಿ ಪ್ರವೇಶಿಸುತ್ತಿದ್ದಂತೆ ಚಾಂದಿನಿ ಚೌಕ್‌ನಲ್ಲಿ ಒಂದು ಬಾಂಬ್ ಎಸೆಯಲಾಯಿತು. ವೈಸರಾಯ್ ತೀವ್ರವಾಗಿ ಗಾಯಗೊಂಡ, ಮಾವುತ ಸತ್ತ. ಈ ಪಿತೂರಿಯ ಹಿಂದಿದ್ದ ನಿಜವಾದ ಮುಖಂಡ ಬಂಗಾಲದ 'ಅನುಶೀಲನ ಸಮಿತಿ'ಯ ಪ್ರಖ್ಯಾತ ಕ್ರಾಂತಿಕಾರಿ ರಾಶ್ ಬಿಹಾರಿ ಬೋಸ್ ಈ ಘಟನೆಗೆ ಸಂಬಂಧಪಟ್ಟಂತೆ 44 ವರ್ಷದ ಮಾಸ್ಟರ್ ಅಮಿರ್ ಚಂದ್, 24 ವರ್ಷದ ಅಬೋದ್ ಬಿಹಾರಿ ಹಾಗೂ ಬಾಲಮುಕುಂದ್ ಮತ್ತು ಬಸಂತ ಬಿಸ್ವಾಸ್‌ರನ್ನು ಗಲ್ಲಿಗೇರಿಸಲಾಯಿತು.

21 ಏಪ್ರಿಲ್, 1913, ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒರೆಗಾನ್ ಪ್ರಾಂತ್ಯದ ಅಂಟೋರಿಯಾ ಪಟ್ಟಣದಲ್ಲಿ ವಿದೇಶಗಳಲ್ಲಿದ್ದ ಭಾರತೀಯ ಕ್ರಾಂತಿಕಾರರ ಒಂದು ಸಭೆ ನಡೆಯಿತು. ಇದರಲ್ಲಿ ಹೆಚ್ಚಿನವರು ಸಿಖ್ಖರು. ಒಂದು ಕ್ರಾಂತಿಕಾರಿ ಪಕ್ಷವನ್ನು ರಚಿಸಲು ಹಾಗೂ ಒಂದು ವಾರಪತ್ರಿಕೆಯನ್ನು ತರಲು ನಿರ್ಧರಿಸಲಾಯಿತು. ಪತ್ರಿಕೆಯ ಹೆಸರು "ಹಿಂದುಸ್ತಾನ್ ಗದರ್" (ಗದರ್ ಅಂದರೆ ಹಿಂದಿ ಭಾಷೆಯಲ್ಲಿ ಬಂಡಾಯ ಎಂದರ್ಥ) ಈ ಪತ್ರಿಕೆ ಮೊದಲು 'ಅಮೆರಿಕನ್ ಶಾಂತ ಸಾಗರ ತಟದ ಹಿಂದಿ ಸಂಘ' ಎಂದು ಹೆಸರಿಡಲಾಯಿತು.



ನವೆಂಬರ್ 1,1913 ರಲ್ಲಿ ಸ್ಯಾನ್ ಫ್ರಾನ್ಸಿಸ್ಕೋ ನಗರದಲ್ಲಿ ಭಾರತದಿಂದ ಜೀವನೋಪಾಯಕ್ಕಾಗಿ ವಲಸೆ ಬಂದ ಭಾರತೀಯರು ತಾವು ಅನುಭವಿಸಿದ ಜನಾಂಗೀಯ ಪಕ್ಷಪಾತ ಇತ್ಯಾದಿಗಳನ್ನು ಎದುರಿಸಿ ಹೋರಾಡಲು, ಭಾರತದ ಸ್ವಾತಂತ್ರ್ಯದ ಬೇಡಿಕೆಗೆ ದನಿಗೂಡಿಸಲು ನಿರ್ಧರಿಸಿದರು. ಅಮೇರಿಕಾಕ್ಕೆ ವ್ಯಾಸಂಗಕ್ಕೆ ಬಂದ ವಿದ್ಯಾರ್ಥಿಗಳೂ ಇದಕ್ಕೆ ನೆರವಾದರು. ಗದರ್ ಪಾರ್ಟಿ ಜನ್ಮತಾಳಿತು. ಸೋಹನ್ ಸಿಂಗ್ ಭಾಕ್ನಾ ಇದರ ಮೊದಲ ಅಧ್ಯಕ್ಷರು. ಉಚ್ಚ ಅಧ್ಯಯನಕ್ಕೆಂದು ಬಂದಿದ್ದ ಲಾಲಾ ಹರ್ದಯಾಲ್ ಪ್ರಧಾನ ಕಾರ್ಯದರ್ಶಿ. ಪಂಜಾಬಿ ಹಾಗೂ ಉರ್ದುವಿನಲ್ಲಿ ಪ್ರಕಟವಾಗುತ್ತಿದ್ದ ಮಾಸಪತ್ರಿಕೆ ಆಗಾಗ ಮರಾಠಿ ಭಾಷೆಯಲ್ಲೂ ಪ್ರಕಟವಾಗುತ್ತಿತ್ತು. ಬಂಗಾಳಿ, ಇಂಗ್ಲಿಷ್‌ಗಳಲ್ಲೂ ಕರಪತ್ರಗಳನ್ನೂ ಪ್ರಕಟಿಸಲಾಗುತ್ತಿತ್ತು. "ಜುಗಾಂತರಿ ಆಶ್ರಮ್" ಎಂಬ ಹೆಸರಿನ ಮನೆ ಈ ಪಕ್ಷದ ಮುಖ್ಯ ಕಛೇರಿಯಾಯಿತು. ಇದರ ಸದಸ್ಯರಲ್ಲಿ ಬಹುಪಾಲು ಸಿಖ್ಖರಾಗಿದ್ದರೂ ಹಿಂದುಗಳು ಮುಸಲ್ಮಾನರೂ ಸದಸ್ಯರಾಗಿದ್ದರು. ಪಿಂಗ್ಲೆ, ಡಾ.ಖಂಕೋಜೆ ಇವರಲ್ಲಿ ಪ್ರಮುಖರು. ಆದರೆ ಗದರ್ ಪಾರ್ಟಿಯ ಬಹುಪಾಲು ಸದಸ್ಯರು ಸಣ್ಣ ರೈತರಾಗಿದ್ದು ಜೀವನೋಪಾಯಕ್ಕಾಗಿ ಕಾರ್ಮಿಕರಾದವರು. ಕೆಲವು ಬುದ್ಧಿಜೀವಿಗಳೂ ಇದ್ದರು. ಕೆಲವೇ ವಾರಗಳಲ್ಲಿ ಬ್ರೆಜಿಲ್, ಅರ್ಜೆಂಟೈನಾ, ಮೆಕ್ಸಿಕೋ, ಪನಾಮಾ, ಜಪಾನ್, ಸಿಂಗಪುರ, ಮಲಾಯಾ, ಶಾಂಘಾಯ್‌ಗಳಲ್ಲಿದ್ದ ವಲಸೆಗಾರ ಭಾರತೀಯರ ನಡುವೆ ಇದರ ಶಾಖೆಗಳು ಹುಟ್ಟಿಕೊಂಡವು. ಇದು 1857ರ ಬಂಡಾಯದಿಂದ ಸ್ಫೂರ್ತಿ ಪಡೆದ, ಆದರೆ ಅದರ ನ್ಯೂನತೆಗಳ, ಮಿತಿಗಳ ಪೂರ್ಣ ಅರಿವಿದ್ದ, ಜಾತ್ಯಾತೀತ ಕಣ್ಣೋಟದ ಪ್ರಥಮ ಭಾರತೀಯ ಕ್ರಾಂತಿಕಾರಿ ಸಂಘಟನೆಯಾಗಿತ್ತು.





ಈ ಸಂಘಟನೆಗೆ ದೊರೆತ ಬೆಂಬಲದಿಂದ ಭೀತರಾದ ಅಧಿಕಾರಿಗಳು ವಲಸೆಯನ್ನು ಕಠಿಣಗೊಳಿಸಿದರು. ಪಶ್ಚಿಮದ ಕಡೆಗೆ ಹಡಗುಗಳು ಭಾರತೀಯ ಪ್ರಯಾಣಿಕರಿಗೆ ಆಹಾರ, ನೀರು ಒದಗಿಸಬಾರದು ಎಂದು ಆದೇಶ ಹೊರಡಿಸಿದರು. ಈ ಹಿನ್ನೆಲೆಯಲ್ಲಿ ಪ್ರಖ್ಯಾತ ಕೊಮಗಾಟಾ ಎಂಬ ಘಟನೆ ನಡೆಯಿತು.

ಇದೊಂದು ಜಪಾನೀ ಹಡಗಿನ ಹೆಸರು. 400 ಭಾರತೀಯ ಪ್ರಯಾಣಿಕರು ಇದರಲ್ಲಿ ಪ್ರಯಾಣ ಮೂಡುತ್ತಿದ್ದರು. ಬಾಬಾ ಗುರಿಕಲ್ ಸಿಂಗ್ ಇದರ ಮುಖಂಡರು. 1914ರ ಮಧ್ಯಭಾಗದಲ್ಲಿ ಹಡಗು ಕೆನಡಾದ ಬಂದರು ವ್ಯಾಕುವರ್ ತಲುಪಿತು. ಇದರಲ್ಲಿ ಹೆಚ್ಚಿನವರು ಕೆನಡಾ, ಅಮೇರಿಕಾಗಳಲ್ಲಿ ಕೆಲಸ ಹುಡುಕಿಕೊಂಡು ಹೊರಟವರು. ಈ ದೇಶಗಳಲ್ಲಿ ಜನಾಂಗ ಭೇದ ನೀತಿ ಆಗ ಪ್ರಬಲವಾಗಿತ್ತು. ಕೆನಡಾದ ಸರಕಾರ ಪ್ರಯಾಣಿಕರಿಗೆ ಇಳಿಯಲು ಅನುಮತಿ ಕೊಡಲಿಲ್ಲ. ಹಡಗಿನಲ್ಲಿಯೂ ಆಹಾರ, ನೀರಿನ ಕೊರತೆ ವಿಪರೀತವಾಯಿತು. ಒಂದು ತಿಂಗಳ ನಂತರ ಹಡಗು ಮತ್ತೆ ಭಾರತದ ಕಡೆಗೆ ಹೊರಟಿತು.

ಸೆಪ್ಟೆಂಬರ್ 29, 1914 ರಂದು ಹಡಗು ಕಲ್ಕತ್ತೆಯ ಬಳಿಯ ಬಜ್ ಬಜ್ ಬಂದರನ್ನು ತಲುಪಿತು. ಇವರೆಲ್ಲಾ ಗದರ್ ಪಾರ್ಟಿಗೆ ಸಂಬಂಧಪಟ್ಟವರೆಂದು ಬ್ರಿಟಿಶ್ ಪೋಲೀಸರು ಅವರನ್ನೆಲ್ಲಾ ಬಂಧಿಸಲು ಮುಂದಾದರು. ತಿಕ್ಕಾಟ ನಡೆಯಿತು - ಇಪ್ಪತ್ತು ಜನ ಸತ್ತರು. ಇವರಲ್ಲಿ ಒಬ್ಬ ಬ್ರಿಟಿಶ್ ಅಧಿಕಾರಿಯೂ ಇದ್ದ. ಬಾಬಾ ಗುರುದಿತ್ ಸಿಂಗ್

ಪುಟ 5 ನೋಡಿ

ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ಎಂತಹ ವಿಶಿಷ್ಟಪಾತ್ರವನ್ನು ವಹಿಸಿದರು ಎಂಬುದನ್ನು ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈ ಬಾರಿ ಶ್ರೀಮಂತ ಕುಟುಂಬದಲ್ಲಿ ಖ್ಯಾತ ವೈದ್ಯನ ಮಗನಾಗಿ ಹುಟ್ಟಿ, ಮಾರ್ಕ್ಸ್‌ವಾದದತ್ತ ಆಕರ್ಷಿತರಾಗಿ, ಬ್ರಿಟಿಶ್ ಕಮ್ಯುನಿಸ್ಟ್ ಕಮ್ಯುನಿಸ್ಟ್ ಪಕ್ಷದ ಸದಸ್ಯನಾಗಿ ಭಾರತಕ್ಕೆ ಮರಳಿ ಕಮ್ಯುನಿಸ್ಟ್ ಚಳುವಳಿಗೆ ಧುಮುಕಿ ಇಂದು ಚುನಾಯಿತ ಕಮ್ಯುನಿಸ್ಟ್ ಸರ್ಕಾರದ ಮುಖ್ಯಸ್ಥನಾಗಿ ವಿಶ್ವವಿಕ್ರಮ ಸಾಧಿಸಿರುವ ಕಾಂ|| ಜ್ಯೋತಿಬಸುರವರ ಅನುಭವ ಕಥನ.

ಜ್ಯೋತಿ ಬಸು ಸ್ವಾತಂತ್ರ್ಯ ಸಂಗ್ರಾಮದಿಂದ ಕಮ್ಯೂನಿಸಂ ಮಡಿಲಿಗೆ...



ನಾನು ಒಂದು ಶ್ರೀಮಂತ ಕುಟುಂಬದಲ್ಲಿ ಹುಟ್ಟಿದೆ ಅನೇಕ ವರ್ಷ ಅಮೆರಿಕದಲ್ಲಿದ್ದ ನನ್ನ ತಂದೆ ಖ್ಯಾತ ವೈದ್ಯರಾಗಿದ್ದರು. ನಾನು ಕಲ್ಕತ್ತದ ಮಿಷನರಿ ಶಾಲೆಗಳಲ್ಲಿ ಓದಿದೆ. ಅಲ್ಲಿನ ಬಹುತೇಕ ವಿದ್ಯಾರ್ಥಿಗಳು ಇಂಗ್ಲೀಷರು ಅಥವಾ ಆಂಗ್ಲೋಇಂಡಿಯನ್ ಆಗಿದ್ದರು. ನಾನು ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದೆ. ನನಗೆ ಡಬಲ್ ಪ್ರಮೋಷನ್‌ಗಳೂ ಸಿಕ್ಕಿದವು. ಆದರೆ, ಶಾಲಾ ದಿನಗಳಲ್ಲಿ ನನಗೆ ಬಂಗಾಳಿಯಲ್ಲಿ ಹೆಚ್ಚಿನ ಔಪಚಾರಿಕ ತರಬೇತಿ ಸಿಗಲಿಲ್ಲ.

ನಮ್ಮದು ತುಂಬಾ ಸಂಪ್ರದಾಯಸ್ಥ ಕುಟುಂಬವಾಗಿತ್ತು. ಸಿನಿಮಾ ಇಲ್ಲ, ಚಾ-ಕಾಫಿ ಇಲ್ಲ, ಧೂಮಪಾನವೂ ಇಲ್ಲ. ನಾನು ಮೊದಲ ಸಲ ಚಹಾದ ರುಚಿ ಕಂಡದ್ದು ಲಂಡನ್‌ನಲ್ಲಿಯೇ. ನಾನು ಕ್ರೀಡೆಗಳಲ್ಲಿ ಆಸಕ್ತನಾಗಿದ್ದೆ. ಮೋಹನ್ ಬಾಗನ್‌ನಂಥ ಭಾರತೀಯ ತಂಡ ಇಂಗ್ಲೀಷ್ ತಂಡವನ್ನು ಸೋಲಿಸಿದಾಗ ತುಂಬಾ ಖುಷಿ ಪಡುತ್ತಿದ್ದೆ. ನನಗೆ ರಾಜಕೀಯದಲ್ಲಿ ಅಷ್ಟೇನೂ ಆಸಕ್ತಿ ಇರಲಿಲ್ಲ. ಏನಿದ್ದರೂ ದೇಶಬಂಧು ಚಿತ್ತರಂಜನ್ ದಾಸ್ ಅವರನ್ನು ನಾವು ತುಂಬಾ ಗೌರವಿಸುತ್ತಿದ್ದೆವು. ಸ್ವಾಮಿ ವಿವೇಕಾನಂದ ಮತ್ತು ಸುಭಾಷ್ ಚಂದ್ರ ಬೋಸ್ ತುಂಬಾ ಸ್ಫೂರ್ತಿದಾಯಕ ವ್ಯಕ್ತಿಗಳಾಗಿ ನನಗೆ ಕಂಡರು.

ಲಾಠಿ ಪೆಟ್ಟಿನ ಮೊದಲ ರುಚಿ

1930 ರಲ್ಲಿ ಗಾಂಧೀಜಿ ಅನಿರ್ದಿಷ್ಟ ಉಪವಾಸ ಮುಷ್ಕರ ಆರಂಭಿಸಿದಾಗ ನಾನು ಶಾಲೆಯಿಂದ ದೂರವುಳಿದೆ. ಅದಕ್ಕೆ ತಂದೆಯ ಅನುಮತಿ ಪಡೆದಿದ್ದೆ ಎನ್ನುವುದು ಬೇರೆ ವಿಚಾರ. ಬಹಳಷ್ಟು ರಾಜಕೀಯ ಸಭೆಗಳು ನಡೆಯುತ್ತಿದ್ದ ಕಲ್ಕತ್ತಾ ಮೈದಾನದ ಬಳಿ ನಮ್ಮ ಮನೆಯಿತ್ತು. ಸುಭಾಷ್ ಚಂದ್ರ ಬೋಸ್ ಭಾಷಣ ಮಾಡಲಿದ್ದ ಸಭೆಯೊಂದಕ್ಕೆ ನನ್ನ ಬಂಧುವೊಬ್ಬರು ನನ್ನನ್ನು ಕರೆದೊಯ್ದರು. ಖಾದಿ ಬಟ್ಟೆ ತೊಟ್ಟು ನಾವು ಅಲ್ಲಿಗೆ ಹೋದೆವು. ಸುಭಾಷರನ್ನು ಪೋಲೀಸರು ಬಂಧಿಸಿದರು. ಕುದುರೆ ಸವಾರ ಪೋಲೀಸರು ನಮ್ಮ ಮೇಲೆ ಲಾಠಿ ಪ್ರಹಾರ ಮಾಡಿದರು. ನನಗೂ ಕೆಲವು ಭಾರಿ ಲಾಠಿ ಏಟು ಬಿದ್ದವು - ಅದೂ ನನ್ನ ಪ್ರಪ್ರಥಮ ರಾಜಕೀಯ ಚಟುವಟಿಕೆ ಸಂದರ್ಭದಲ್ಲಿ ಲಾಠಿ ಏಟಿನ ರುಚಿ ಕಂಡೆ!

ವರ್ಣದ್ವೇಷದ ಅನುಭವ

ಬಿ.ಎ. ಮುಗಿದ ಮೇಲೆ ನಾನು ಇಂಗ್ಲೆಂಡಿಗೆ ಹೋಗಿ ಐಸಿಎಸ್ ಅಥವಾ ಬ್ಯಾರಿಸ್ಟರ್ ಆಗಿ ಮರಳಬೇಕೆಂದು ಕುಟುಂಬ ಸದಸ್ಯರು ನಿರ್ಧರಿಸಿದರು. ಅದಕ್ಕೆ ನಾನೂ ಒಪ್ಪಿದೆ. ಹೀಗೆ 22 ನೇ ವಯಸ್ಸಿನಲ್ಲಿ ಅಂದರೆ 1935 ರಲ್ಲಿ ನಾನು ಇಂಗ್ಲೆಂಡಿಗೆ ಪ್ರಯಾಣಿಸಿದೆ. ಹಡಗಿನಲ್ಲಿಯೇ ವರ್ಣದ್ವೇಷದ ಅನುಭವವಾಯಿತು. ಈಜುಕೊಳವನ್ನು ಯಾವಾಗಲೂ ಬಿಳಿ ಪ್ರಯಾಣಿಕರೇ ಆಕ್ರಮಿಸಿಕೊಂಡಿರುತ್ತಿದ್ದರು. ನಮ್ಮನ್ನು ದುರುಗುಟ್ಟಿ ನೋಡುತ್ತಿದ್ದರು. ಆದ್ದರಿಂದ ಒಂದು ದಿನ ಬಿಳಿ ಪ್ರಯಾಣಿಕರು ಬರುವುದಕ್ಕೆ ಮೊದಲೇ ನಾವು ಭಾರತೀಯ ಪ್ರಯಾಣಿಕರು ಈಜುಕೊಳಕ್ಕೆ ಧುಮುಕಿದೆವು. ಕೊನೆಗೂ ಅವರು ನಮಗೂ ಅವಕಾಶ ನೀಡಬೇಕಾಯಿತು. ನಮಗೆ ಒಂದು ರೀತಿಯ ಜಯದ ಭಾವನೆ ಬಂತು.

ಇಂಗ್ಲೆಂಡಿನಲ್ಲಿನ ಪರಿಸ್ಥಿತಿ ನನಗೆ ದಿಗ್ಭ್ರಮೆ ಹುಟ್ಟಿಸುವಂತಿತ್ತು. ಅಕಾಡೆಮಿಕ್‌ಗಳು ಫ್ಯಾಸಿಸಂ, ಆರ್ಥಿಕ ಮುಗ್ಗಟ್ಟು, ಸ್ಪೇನ್‌ನ ಅಂತಃಕಲಹ, ಸೋವಿಯತ್ ಒಕ್ಕೂಟ ಮತ್ತು ಸಮಾಜವಾದದ ಬಗ್ಗೆ ಚರ್ಚಿಸುವುದನ್ನು ನಾನು ಕೇಳಿದೆ. ಆಗ ನನಗೆ ಈ ಎಲ್ಲ ವಿಷಯಗಳ ಬಗ್ಗೆ ಅಷ್ಟೇನೂ ಗೊತ್ತಿರಲಿಲ್ಲ.

ಗ್ರೇಟ್ ಬ್ರಿಟನ್ ಕಮ್ಯುನಿಸ್ಟ್ ಪಕ್ಷ(ಸಿಪಿಜಿಬಿ) ದತ್ತ ನಾನು ಆಕರ್ಷಿತನಾದೆ. ಅದಕ್ಕೆ ಕಾರಣವೂ ಇತ್ತು. ಸಿಪಿಜಿಬಿ ಯವರು ಬ್ರಿಟಿಷರಾದರೂ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆಂದು ಅವರು ಒತ್ತಾಯಿಸುತ್ತಿದ್ದರು. ಆ ನಂತರ ಅನೇಕ ವಿಚಾರಗಳಲ್ಲಿ ಅವರ ನಿಲುವು ಏನೆಂಬುದು ಗೊತ್ತಾಯಿತು ಹಾಗೂ ನಾನು ಪಕ್ಷವನ್ನು ಸೇರಿದೆ.

ಸಿಪಿಜಿಬಿ ಯನ್ನು ಸೇರುವುದಕ್ಕೆ ಮುಂಚಿ ನಾವು ಇಂಡಿಯಾ ಲೀಗ್ ಮತ್ತು ಲಂಡನ್ ಮಜ್ಲಿಸ್ ಸೇರಿದೆವು. ಇಂಡಿಯಾ ಲೀಗ್ ಅನ್ನು ಕೃಷ್ಣ ಮೆನನ್ ಸ್ಥಾಪಿಸಿದ್ದರು. ಈ ಎರಡೂ ಸಂಸ್ಥೆಗಳು ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದವು. ನಾನು ಮಜ್ಲಿಸ್‌ನ ಕಾರ್ಯದರ್ಶಿಯೂ ಆದೆ. ಇದು ನನ್ನ ಪ್ರಪ್ರಥಮ ಸಂಘಟನಾತ್ಮಕ ಅನುಭವವಾಗಿದೆ. ಇಲ್ಲಿ ನಾನು ಭೂಪೇಶ್ ಗುಪ್ತಾ, ಇಂದ್ರಜಿತ್ ಗುಪ್ತಾ, ಮೋಹನ್ ಕುಮಾರ ಮಂಗಳಂ ಅವರ ಸೋದರಿ ಪಾರ್ವತಿ, ಎನ್.ಕೆ.ಕೃಷ್ಣನ್, ರಜನಿಪಟೇಲ್, ಪಿ.ಎನ್.ಹಕ್ಸರ್ ಅವರನ್ನು ಭೇಟಿ ಮಾಡಿದೆ.

ನಾವೆಲ್ಲರೂ ಕಮ್ಯುನಿಸ್ಟರಾಗಿ ಪರಿವರ್ತಿತರಾದೆವು. ಹಾಗೂ ಇವರಲ್ಲಿ ಅನೇಕರು ಬಹಳ ವರ್ಷಕಾಲ ಪಕ್ಷದಲ್ಲಿ ನನ್ನ ಸಂಗಾತಿಗಳಾಗಿ ಉಳಿದರು. ನಮ್ಮೆಲ್ಲರ ಪೈಕಿ ಭೂಪೇಶ್ ಗುಪ್ತಾ ಮಾತ್ರವೇ ಭಾರತದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿದ್ದರು. ಸೆರೆಮನೆಯನ್ನೂ ಸೇರಿದರು. ಲಂಡನ್ ದಿನಗಳಲ್ಲಿ ಅವರು ನನ್ನ ಮೇಲೆ ಪ್ರಭಾವ ಬೀರಿದರು. ಇಂದಿರಾ ನೆಹರೂ ಮತ್ತು ಫಿರೋಜ್ ಗಾಂಧಿ ಅವರ ಪರಿಚಯವೂ ನನಗಿತ್ತು. ಫಿರೋಜ್ ಆತ್ಮೀಯ ಗೆಳೆಯರಾದರು. ಆದರೆ ಇಂದಿರಾ ನಮ್ಮ ಚಟುವಟಿಕೆಗಳಿಂದ ದೂರ ಉಳಿದರು.

ಕೃಷ್ಣ ಮೆನನ್‌ರಿಗೆ ಕಷ್ಟಪಟ್ಟು ಕೆಲಸ ಮಾಡುವ ಅದ್ಭುತ ಸಾಮರ್ಥ್ಯವಿತ್ತು. ಅವರು ಒಬ್ಬ ಎಡಪಂಥೀಯರಾಗಿದ್ದರು. ಆದರೆ ನಾವು ಸಿಪಿಜಿಬಿ ಸಂಪರ್ಕ ಇಟ್ಟುಕೊಂಡಿದ್ದನ್ನು ಅವರು ಇಷ್ಟಪಡಲಿಲ್ಲ. ಆದರೆ ನಾವ್ಯಾರೂ ಅದನ್ನು ಅಷ್ಟು ದೊಡ್ಡ ವಿಷಯವನ್ನಾಗಿ ಮಾಡಲಿಲ್ಲ. ಇಂಡಿಯಾ ಲೀಗ್‌ನಲ್ಲಿ ನಾವು ಮೆನನ್‌ರಿಗೆ ಅಪಾರ ಬೆಂಬಲ ನೀಡಿದೆವು. ನಮ್ಮ ಪ್ರಾಮಾಣಿಕತೆ ಬಗ್ಗೆ ಅವರಿಗೆ ಅರಿವಿತ್ತು.

ಟೈಪಿಂಗ್, ಸೈಕ್ಲೋ ಸ್ಟೈಲಿಂಗ್....

ಅಲ್ಲಿ ನಾವು ಅನೇಕ 'ಪ್ರತಿಕೂಲ' ದ ಕೆಲಸಗಳನ್ನು ಮಾಡಿದೆವು. ಉದಾಹರಣೆಗೆ ನಾನು ತುಂಬಾ ಟೈಪಿಂಗ್ ಮತ್ತು ಸೈಕ್ಲೋಸ್ಟೈಲಿಂಗ್ ಕೆಲಸ ಮಾಡಿದೆ. ಲಂಡನ್‌ಗೆ ಭೇಟಿನೀಡುವ ಭಾರತೀಯ ಮುಖಂಡರ ಉಪನ್ಯಾಸಗಳನ್ನು ವ್ಯವಸ್ಥೆಗೊಳಿಸುವುದು ಇಂಡಿಯಾ ಲೀಗ್‌ನಲ್ಲಿನ ಒಂದು ಪ್ರಮುಖ ಕೆಲಸವಾಗಿತ್ತು. ಅಂಥ ಪ್ರಮುಖ ನಾಯಕರಲ್ಲಿ ಸುಭಾಷ್ ಚಂದ್ರ ಬೋಸ್ ಅವರೂ ಒಬ್ಬರಾಗಿದ್ದರು. ಸಿಪಿಜಿಬಿ ಪತ್ರಿಕೆ 'ಡೈಲಿ ವರ್ಕರ್' ಗೆ ಅವರು ಒಂದು ಸಂದರ್ಶನ ನೀಡಿದರು.

ನಾವು ರಾಜಕೀಯವನ್ನು ಗಂಭೀರವಾಗಿ ಪರಿಗಣಿಸಿರುವುದಕ್ಕೆ ಬೋಸ್ ಸಂತೋಷ ವ್ಯಕ್ತಪಡಿಸಿದರು. ಆದರೆ ಅದು ಹೂವಿನ ಹಾಸಿಗೆಯಾಗಿರುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದರು. ಬಾಹ್ಯ ಬೆಂಬಲವೇನೋ ಮಹತ್ವದ್ದೇ ಆದರೆ ಭಾರತೀಯ ಜನರು ಭಾರತದ ನೆಲದಲ್ಲಿ ನಿಜವಾದ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಅವರು ಹೇಳಿದರು. ಅವರ ಈ ಕೊನೆಯ ಮಾತು ನನ್ನ ಮೇಲೆ ಗಾಢ ಪ್ರಭಾವ ಬೀರಿತು.

ಸ್ಪೇನ್‌ನ ರಿಪಬ್ಲಿಕನ್‌ರ ಬೆಂಬಲವಾಗಿ ನೆಹರೂ ಇಂಗ್ಲೆಂಡಿಗೆ ಭೇಟಿ ನೀಡಿದರು. ಅವರು ಉಪನ್ಯಾಸಗಳನ್ನು ನೀಡಿದರು. ಭಾರತದಲ್ಲಿ ಸಮಾಜವಾದದ ಕುರಿತು ನಾವು ಅವರನ್ನು ಪ್ರಶ್ನಿಸಿದೆವು. ಸ್ವಾತಂತ್ರ್ಯ ನಮ್ಮ ಮೊದಲ ಗುರಿ, ಸಮಾಜವಾದದ ಪ್ರಶ್ನೆ ಆಮೇಲೆ ಎಂದು ನೆಹರೂ ಹೇಳಿದರು. ನೆಹರೂರ ಸೋದರಿ ವಿಜಯಲಕ್ಷ್ಮಿ ಪಂಡಿತರ ಭೇಟಿಯೂ ನಮಗೆ ಒಂದು ಮಹತ್ತರ ಘಟನೆ ಆಗಿತ್ತು.

ನನ್ನ ಪ್ರಚಾರ ಭಾಷಣದಲ್ಲಿ ನಾನು ಈ ರೀತಿ ಹೇಳುತ್ತಿದ್ದೆ. 'ನೋಡಿ ಹೆಂಗಸರು ಅಡಿಗೆ ಮನೆಗಳಿಗೆ ವಾಪಸಾಗುವಂತೆ ಹಿಟ್ಲರ್ ಹೇಳುತ್ತಿದ್ದಾನೆ. ಆದರೆ ವಿಜಯಲಕ್ಷ್ಮಿ ಪಂಡಿತರಂಥ ಉನ್ನತ ನಾಯಕರನ್ನು ನಮ್ಮ ದೇಶ ಸೃಷ್ಟಿಸಿದೆ'.

ಬ್ರಿಟಿಶರು ಕಳಿಸಿದ ಏಜೆಂಟರು ವಿಜಯಲಕ್ಷ್ಮಿಯವರ ಸಭೆಯನ್ನು ಹಾಳುಮಾಡಲು ಪ್ರಯತ್ನಿಸಿದರು. ಆದರೆ ನಾವು ಅವರನ್ನು ಸಭಾಭವನದಿಂದ ದೈಹಿಕವಾಗಿ ಹೊರದೂಡಿ ಹಾಕಿದೆವು.

ಸಿಪಿಜಿಬಿ ಪರವಾಗಿ ರಜನಿ ಪಾಮೆದತ್ತ ನಮಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಬೋಧಿಸಿದರು. ಬೆನ್ ಬ್ರಾಡ್ಲಿ ಮತ್ತು ಮೈಕಬ್ ಕ್ಯಾರಿಟ್ ನಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನೋಡಿಕೊಂಡರು. ಬ್ರಾಡ್ಲಿ ಮತ್ತು ಕ್ಯಾರಿಟ್ ಇಬ್ಬರೂ ಭಾರತದಲ್ಲಿ ವಾಸಿಸುತ್ತಿದ್ದರು. ಮೀರತ್ ಪಿತೂರಿ ಮೊಕದ್ದಮೆಯಲ್ಲಿ ಬ್ರಾಡ್ಲಿ ಕೂಡ ಒಬ್ಬ ಆಪಾದಿತರಾಗಿದ್ದರು, ಕ್ಯಾರಿಟ್ ಐ.ಸಿ.ಎಸ್. ನಲ್ಲಿದ್ದರು. ಆದರೂ ಅವರು ಗುಪ್ತ ಕಮ್ಯುನಿಸ್ಟ್ ಸದಸ್ಯತ್ವವನ್ನು ಹೊಂದಿದ್ದರು. ಇಂಡಿಯಾ ಲೀಗ್ ಅಥವಾ ಮಜ್ಲಿಸ್‌ನಲ್ಲಿ ನಾವು ಕೆಲಸ ಮಾಡುವುದಕ್ಕೆ ಸಿಪಿಜಿಬಿ ಸಲಹೆ ರೂಪದಲ್ಲಿ ಅಪಾರ ನೆರವು ನೀಡಿತು.

ಅಕ್ಷರ ಕಲಿಕೆ

ಆದರೆ ಸಿಪಿಜಿಬಿ ಇನ್ನೂ ಹೆಚ್ಚಿನದನ್ನು ಕಲಿಸಿತು; ಅದುವೇ ದುಡಿಯುವ ಜನರ ಮಧ್ಯೆ ಕೆಲಸ ಮಾಡುವುದು. ಲಂಡನ್‌ನಲ್ಲಿ ಆಗ ಭಾರತದ ಅನೇಕ ನಾವಿಕರು ವಾಸಿಸುತ್ತಿದ್ದರು. ಅವರು ತೀರಾ ಬಡತನದಲ್ಲಿದ್ದರು. ಹಾಗೂ ಹೆಚ್ಚಿನವರಿಗೆ ಓದಲು ಅಥವಾ ಬರೆಯಲು ಬರುತ್ತಿರಲಿಲ್ಲ. ನಾವು ಅವರಿಗಾಗಿ ಸಂಜೆ ಹೊತ್ತು ಸಾಕ್ಷರತೆ ತರಗತಿಗಳನ್ನು ನಡೆಸಿದೆವು. ಎನ್.ಕೆ.ಕೃಷ್ಣನ್ ಅಂಥ ಮೊದಲ ಶಾಲೆಯನ್ನು ತೆರೆದರು. ಈ ತರಗತಿಗಳಲ್ಲಿ ನಾವು ನಿಯಮಿತವಾಗಿ ಕಲಿಸಿದೆವು. ಇದು ದುಡಿಯುವ ಜನರೊಂದಿಗಿನ ನನ್ನ ಮೊದಲ ಸಂಪರ್ಕವಾಗಿತ್ತು.

ಈ ಎಲ್ಲಾ ಚಟುವಟಿಕೆಗಳ ಪರಿಣಾಮವಾಗಿ ಐಸಿಎಸ್ ಅಥವಾ ಬ್ಯಾರಿಸ್ಟರ್ ಆಗಬೇಕೆಂಬ ಉದ್ದೇಶದಿಂದ ನಾನು ವಿಮುಖನಾದೆ. ಭಾರತಕ್ಕೆ ಮರಳಿ ಕಮ್ಯುನಿಸ್ಟನಾಗಿ ಕೆಲಸ ಮಾಡಬೇಕೆಂಬ ಹಂಬಲ ನನ್ನನ್ನು ಕಾಡಿತು. ಆದರೆ ಬ್ರಾಡ್ಲಿ ಮಧ್ಯ ಪ್ರವೇಶಿಸಿ ಈ ರೀತಿ ಹೇಳಿದರು;'ಒಬ್ಬ ಕಮ್ಯುನಿಸ್ಟ್ ಸಮಾಜವನ್ನು ಅರ್ಥಮಾಡಿಕೊಳ್ಳಬೇಕು.ಬ್ಯಾರಿಸ್ಟರ್ ಪದವಿಯಿಲ್ಲದೆ ನೀನು ಮರಳಿದರೆ ಸಮಾಜ ನಿನ್ನನ್ನು ಅಂಗೀಕರಿಸುವುದಿಲ್ಲ'

ಆ ಪ್ರಕಾರ ನಾನು ಪರೀಕ್ಷೆಗಳಿಗೆ ಹಾಜರಾದೆ, ಆದರೆ ಫಲಿತಾಂಶಕ್ಕೇನೂ ಕಾಯಲಿಲ್ಲ. ನಾನು ಪಾಸ್ ಆದೆ. ಒಂದು ವೇಳೆ ಫೇಲ್ ಆದರೂ ಪರೀಕ್ಷೆ ಬರೆಯಲು ನಾನೇನೂ ಲಂಡನ್‌ಗೆ ಮರಳುತ್ತಿರಲಿಲ್ಲ.

ಯುದ್ಧ ಆರಂಭವಾಗಿತ್ತು. ಪೋಲೆಂಡ್‌ನಲ್ಲಿನ ಯುದ್ಧದ ನಂತರ ಫ್ರಾನ್ಸ್ - ಜರ್ಮನಿ ಗಡಿಯಲ್ಲಿ 'ಸೋಗಿನ' ಯುದ್ಧ ನಡೆಯುತ್ತಿತ್ತು. ಶಸ್ತ್ರ ಸಜ್ಜಿತರಾಗಿ ಎರಡೂ ದೇಶಗಳ ಸೈನಿಕರು ಎದುರು ಬದುರು ಆದರು. ಆದರೆ ಒಂದೇ ಒಂದು ಗುಂಡು ಹಾರಾಟ ನಡೆಯಲಿಲ್ಲ. ಆದರೆ ತುಂಬ ಚಿಕ್ಕ ಪ್ರಚೋದನೆಯಿಂದಲೂ ಯುದ್ಧ

→

ಉದಾರೀಕರಣ ತಂದ ಸೌಭಾಗ್ಯ

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಉದಾರೀಕರಣ ತಂದ ಸೌಭಾಗ್ಯವೇನು? ಇದನ್ನೇ ಒಂದು ಸಮೀಕ್ಷೆ ಕೇಳಲು ಪ್ರಯತ್ನಿಸಿತು. ಈ ಸಮೀಕ್ಷೆಯ ಕೇಂದ್ರ ಬಿಂದು ಔದ್ಯಮೀಕರಣ. ಅಂದರೆ ಉದಾರೀಕರಣದಿಂದಾಗಿ ಔದ್ಯಮೀಕರಣದ ಮೇಲೆ ಎಂತಹ ಒಳ್ಳೆಯ ಪರಿಣಾಮ ಉಂಟಾಗಿದೆ ಎಂದು ತಿಳಿದುಕೊಳ್ಳುವುದೇ ಈ ಸಮೀಕ್ಷೆಯ ಉದ್ದೇಶ. ಅದಕ್ಕೆ ಈ ಸಮೀಕ್ಷೆ ಮೂರು ಮುಖ್ಯ ನಗರಗಳನ್ನು ಆಯ್ಕೆ ಮಾಡಿ ಕೊಂಡಿತು. ಅವುಗಳೆಂದರೆ ಮುಂಬಯಿ, ಅಹ್ಮದಾಬಾದ್ ಮತ್ತು ನಮ್ಮ ಬೆಂಗಳೂರು. ಒಟ್ಟಾರೆಯಾಗಿ ಇವುಗಳಲ್ಲಿ ಮುಂಬಯಿ ಮೂರು ನಗರಗಳಲ್ಲಿ ಉತ್ತಮವಾದದ್ದೆಂದು ಕಂಡು ಬಂದಿತಂತೆ. ಇರಲಿ.

ಈ ಮೂರು ನಗರಗಳ ಅನುಕೂಲ, ಅನಾನುಕೂಲಗಳೇನೆಂದು ಈ ಸಮೀಕ್ಷೆ ತಿಳಿದುಕೊಳ್ಳಲೂ ಬಯಸಿತು. ಯಾಕೆಂದರೆ ಔದ್ಯಮೀಕರಣಕ್ಕೆ ಉತ್ತಮ ಅಂತರ್ರಚನಾ ಸೌಕರ್ಯಗಳಿರಬೇಕು. ಈ ಸಮೀಕ್ಷೆ ಕಂಡುಕೊಂಡಿದ್ದು ಮುಂಬಯಿಯಲ್ಲಿ ವಿದ್ಯುತ್, ಟೆಲಿಸಂಪರ್ಕ, ನೀರು ಸರಬರಾಜು, ಕಸ ತೆಗೆಯುವ ವ್ಯವಸ್ಥೆ, ರಸ್ತೆಗಳು, ರೈಲ್ವೆ, ಆಮದು ಸುಂಕ ಮತ್ತು ರಫ್ತು ನಿರ್ಬಂಧಗಳು ಇವುಗಳೆಲ್ಲ ಉಳಿದೆರಡು ನಗರಗಳಿಗೆ ಹೋಲಿಸಿದರೆ ಉತ್ತಮವಾಗಿದೆ. ಆದರೆ ಏನು ಮಾಡುವುದು ಮುಂಬಯಿಯಲ್ಲಿನ ದೊಡ್ಡ ಕೊರತೆ ಭೂಮಿಯದ್ದು. ಅಲ್ಲಿ ಭೂಮಿಯೇ ಲಭ್ಯವಿಲ್ಲ. ಅದೇ ಇಲ್ಲದಿದ್ದ ಮೇಲೆ ಉಳಿದ ಅಂತರ್ರಚನಾ ಸೌಕರ್ಯಗಳಿದ್ದು ಪ್ರಯೋಜನವೇನು?

ಎರಡನೇಯದು ಅಹ್ಮದಾಬಾದ್. ಇಲ್ಲಿ ವಿದ್ಯುತ್, ಟೆಲಿಸಂಪರ್ಕ, ರಸ್ತೆ, ರೈಲ್ವೆಗಳೆಲ್ಲ ಉತ್ತಮವಾಗೇ ಇವೆ. ಆದರೆ ಭೂಮಿ ಲಭ್ಯವಿಲ್ಲ. ನೀರು ಸರಬರಾಜು ಉತ್ತಮವಾಗಿಲ್ಲ. ಕಸ ತೆಗೆಯುವ ವ್ಯವಸ್ಥೆ ಸಮರ್ಪಕ ವಾಗಿಲ್ಲ. ಆಮದು ಸುಂಕ ಮತ್ತು ರಫ್ತು ನಿರ್ಬಂಧಗಳೂ ಔದ್ಯಮೀಕರಣಕ್ಕೆ ತೊಡಕಾಗೇ ಇವೆ.

ಕೊನೆಯದಾಗಿ ಬೆಂಗಳೂರು. ಇಲ್ಲಿ ಟೆಲಿ ಸಂಪರ್ಕ ವ್ಯವಸ್ಥೆಯೊಂದು ಸಮರ್ಪಕವಾಗಿರುವುದನ್ನು ಬಿಟ್ಟರೆ ಇನ್ನಾವುದೇ ಅನುಕೂಲಗಳಿಲ್ಲ. ಭೂಮಿ ಲಭ್ಯವಿಲ್ಲ, ವಿದ್ಯುತ್, ನೀರು ಕೊರತೆಯಿದೆ. ಕಸ ತೆಗೆಯುವ ವ್ಯವಸ್ಥೆ ಸರಿಯಿಲ್ಲ ಮತ್ತು ರಸ್ತೆಗಳ ಬಗ್ಗೆ ಕೇಳುವಂತೆಯೇ ಇಲ್ಲ. ಗುಂಡಿಗಳ ನಡುವೆ ರಸ್ತೆಯಂತಹ ಪಳೆಯುಳಿಕೆಗಳಿವೆ.

ಈ ಸಮೀಕ್ಷೆ ಒಟ್ಟಾರೆಯಾಗಿ ಉದಾರೀಕರಣದಿಂದಾಗಿ ಔದ್ಯಮೀಕರಣ ತೀವ್ರವಾಗಿ ಆಗುತ್ತಿಲ್ಲ. ಇದರಿಂದಾಗಿ ಬೆಳವಣಿಗೆ ಕುಂಠಿತವಾಗಿದೆ ಎನ್ನುವ ತೀರ್ಮಾನಕ್ಕೆ ಬರುತ್ತದೆ ಇರಲಿ.

ಇಲ್ಲಿ ಹಾಗೆ ನೋಡಿದರೆ ಬರೀ ನಗರ ಪ್ರದೇಶಗಳನ್ನು ಮಾತ್ರ ಆರಿಸಿಕೊಂಡು ಸಮೀಕ್ಷೆ ನಡೆಸಿದ ವಿಧಾನವೇ ಸರಿಯಾದದ್ದಲ್ಲ. ಯಾಕೆಂದರೆ ಬೆಳವಣಿಗೆ ಇಡೀ ದೇಶದಾದ್ಯಂತ ಸಮತೋಲವಾಗಿ ಆಗಬೇಕು. ಆಗಲೇ ಅಭಿವೃದ್ಧಿಯ ಫಲಗಳು ಸಾಮಾನ್ಯ ಜನರಿಗೆ ದೊರೆಯುವುದು.

ಬಂಡವಾಳಶಾಹಿ ದೃಷ್ಟಿಕೋನದಲ್ಲಿ ನಗರಗಳಲ್ಲಷ್ಟೇ ಬೆಳವಣಿಗೆ ಆದರೆ ಸಾಕು. ಆದ್ದರಿಂದಲೇ ಈ ಸಮೀಕ್ಷೆ ಇಂತಹ ಮಾನದಂಡವನ್ನು ಉಪಯೋಗಿಸುವುದು. ಈಗಾಗಲೇ ಬಹುತೇಕ ದೊಡ್ಡ ನಗರಗಳು ಎರ್ರಾಬಿರ್ರಿಯಾಗಿ ಬೆಳೆಯುತ್ತಿರುವುದು, ನಗರ ಮತ್ತು ಗ್ರಾಮೀಣ ಪ್ರದೇಶಗಳ ಅಂತರ ಬೆಳೆಯುತ್ತಿರುವುದು ಇವೆಲ್ಲ ಸಾಮಾನ್ಯವಾಗಿಬಿಟ್ಟಿದೆ.

ಆದ್ದರಿಂದ ಅಭಿವೃದ್ಧಿ ದೇಶದ ಎಲ್ಲೆಡೆ ಆದರೆ ಮಾತ್ರ ಅಸಮತೋಲನ ಹೆಚ್ಚಾಗದೆ ಉಳಿಯುತ್ತದೆ. ಆದರೆ ಉದಾರೀಕರಣದಡಿ ಈ ಅಸಮತೋಲನ ಹೆಚ್ಚಾಗುತ್ತ ನಡೆದಿದೆ ಹೊರತು ಕಡಿಮೆಯಾಗಿಲ್ಲ. ಮುಖ್ಯವಾಗಿ ನಗರ ಪ್ರದೇಶಗಳಲ್ಲಿಯೂ ಔದ್ಯಮಿಕ ಬೆಳವಣಿಗೆ ಆಗುತ್ತಿಲ್ಲ. ಹಲವು ಅಡೆತಡೆಗಳಿವೆ, ಕನಿಷ್ಟ ಸೌಕರ್ಯಗಳ ಸೃಷ್ಟಿಯೂ ಆಗುತ್ತಿಲ್ಲ ಎನ್ನುವುದು ಉದಾರೀಕರಣದ ಸಂಪೂರ್ಣ ವೈಫಲ್ಯವನ್ನು ತೋರುತ್ತದೆ. ಅಲ್ಲವೇ?

ಕರ್ನಾಟಕ ಸರ್ಕಾರದ ಎರಡು ಉದ್ದಿಮೆಗಳು ಖಾಸಗಿಯವರಿಗೆ

ಎರಡೆಂದರೆ ಎರಡೇ ಅಲ್ಲ. ಸದ್ಯಕ್ಕೆ ಎರಡು ಅಷ್ಟೆ. ಕರ್ನಾಟಕ ಸರ್ಕಾರ ತನ್ನ ಸ್ವಾಮ್ಯದ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿ. ಮತ್ತು ಮೈಸೂರು ಎಸಿಟೇಟ್ ಮತ್ತು ಕೆಮಿಕಲ್ಸ್ ಕಂ.ಲಿ. ಗಳನ್ನು ಖಾಸಗಿಯವರಿಗೆ ಮಾರಲು ತೀರ್ಮಾನಿಸಿದೆ.

ಈ ಎರಡೂ ಉದ್ದಿಮೆಗಳು ಹಾನಿ ಮಾಡುತ್ತಿದ್ದು ರೋಗಗ್ರಸ್ತವಾಗಿವೆ. ಪುನರುಜ್ಜೀವನಗೊಳಿಸಲು ಹೆಚ್ಚಿನ ಬಂಡವಾಳದ ಅವಶ್ಯಕತೆಯಿದೆ. ಬಂಡವಾಳ ನೀಡಲು ಸರ್ಕಾರ ತಯಾರಿಲ್ಲದಿರುವುದರಿಂದ ಖಾಸಗಿಯವರಿಗೆ ಮಾರಾಟ ಮಾಡುವ ತೀರ್ಮಾನ.

ಮೈಸೂರು ಎಲೆಕ್ಟ್ರಿಕಲ್ಸ್ ಬಂಡವಾಳದಲ್ಲಿ ಸರ್ಕಾರದ ಪಾಲು ಶೇ 82 ರಷ್ಟು. ಸರ್ಕಾರಿ ಸ್ವಾಮ್ಯದ ಕೆಎಸ್ಐಐಡಿಸಿಯದ್ದು ಶೇ 7.4 ರಷ್ಟಿದೆ. ಹಾಗೆಯೇ ಮೈಸೂರು ಎಸಿಟೇಟ್ ಅಂಡ್ ಕೆಮಿಕಲ್ಸ್ ನಲ್ಲಿ ಸರ್ಕಾರಿ ಪಾಲು ಶೇ 65.43, ಹಣಕಾಸು ಸಂಸ್ಥೆಗಳದ್ದು ಶೇ 9.12 ರಷ್ಟು.

ಉದಾರೀಕರಣದ ಫಲವಾಗಿ ಕೇಂದ್ರ ಸರ್ಕಾರವು ಇಂತಹದ್ದೇ ಸಿಲುಮೆ ತೋರಿದೆ. ರಾಜ್ಯ ಸರ್ಕಾರವೂ ಕೇಂದ್ರದ ದಾರಿಯನ್ನೇ ತುಳಿದಿದೆ. ಲಾಭ ಖಾಸಗಿಯವರಿಗೆ. ಮೂರುಕಾಸಿಗೆ ಕೋಟ್ಯಾಂತರ ರೂಪಾಯಿಗಳ ಬೆಲೆಯ ಆಸ್ತಿಯನ್ನು ಲಪಟಾಯಿಸಬಹುದು-ರೋಗಗ್ರಸ್ತ ಉದ್ದಿಮೆ ಎಂಬ ಹೆಸರಿನಲ್ಲಿ. ಅದೇ ಉದಾರೀಕರಣದ ಉದ್ದೇಶ.

ಎಲ್ಲಾ ಮಾಡುವುದು ಅವರಿಗಾಗಿ

ಯಾರಿಗಾಗಿ ಎಂದರೆ ನಮ್ಮ ದೇಶದ ಬಂಡವಾಳಿಗರಿಗಾಗಿ. ಭಾರತೀಯ ರಿಸರ್ವ್ ಬ್ಯಾಂಕ್ 1997-98ರ ಸಾಲಿನ ಉತ್ತರಾರ್ಧಕ್ಕಾಗಿ ತನ್ನ ಸಾಲ ನೀತಿಯನ್ನು ಪ್ರಕಟಿಸಿದೆ. ಈ ನೀತಿ ಪೂರ್ತಿ ಬಂಡವಾಳಿಗರಿಗಾಗಿಯೇ ರೂಪಿಸಿದ ನೀತಿ ಎಂಬುದು ಬಂಡವಾಳಿಗರು ತೋರಿಸಿರುವ ಖುಷಿಯಿಂದಲೇ ಗೊತ್ತಾಗಿಬಿಡುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ಹಣಕಾಸು ಮತ್ತು ಸಾಲ ನೀತಿಯೆಂದರೆ ದೇಶದ ಆರ್ಥಿಕ ಹೇಗಿರಬೇಕೆಂಬುದನ್ನು ನಿರ್ಧರಿಸುವ ನೀತಿ. ಹಣದುಬ್ಬರ ಎಷ್ಟಿರಬೇಕು, ಔದ್ಯಮಿಕ ಬೆಳವಣಿಗೆ ಎಷ್ಟಿರಬೇಕು, ಯಾರಿಗೆ ಹೆಚ್ಚು ಸಾಲ ದೊರೆಯಬೇಕು, ಬಡ್ಡಿದರ ಎಷ್ಟಿರಬೇಕು ಎಂಬಿತ್ಯಾದಿ ನೂರಾರು ವಿಷಯಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ನೀತಿ ಇದು. ದೇಶದ ಜನತೆ ಹೇಗೆ ಬದುಕಬೇಕೆಂಬುದನ್ನೂ ಇದು ನಿರ್ಧರಿಸುತ್ತದೆ ಎಂದರೂ ತಪ್ಪಾಗಲಾರದು. ಆದ್ದರಿಂದಲೇ ಈ ನೀತಿಗೆ ಅಷ್ಟು ಪ್ರಾಮುಖ್ಯತೆ. ಅರ್ಧ ವರ್ಷಕ್ಕೊಮ್ಮೆ ಮಂಡಿತವಾಗುವ ಈ ನೀತಿ ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ಕಾರ್ಯರೂಪಕ್ಕೆ ತರುವ ನೀತಿಯೂ ಹೌದು.

ಈ ಸಾರಿ ಘೋಷಣೆಯಾಗಿರುವ ನೀತಿ ಏನು ಮಾಡುತ್ತದೆಂದು ಸ್ಥೂಲವಾಗಿ ಹೇಳುವುದಾದರೆ

1. ಬ್ಯಾಂಕುಗಳಿಂದ ಉದ್ದಿಮೆಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ದೊರೆಯಬೇಕು.
2. ರಫ್ತುದಾರರಿಗೂ ಕಡಿಮೆ ಬಡ್ಡಿದರದಲ್ಲಿ ಸಾಲ ದೊರೆಯಬೇಕು.
3. ಒಟ್ಟಾರೆಯಾಗಿ ಬಡ್ಡಿ ದರವೇ ಕಡಿಮೆಯಾಗಬೇಕು.
4. ಬ್ಯಾಂಕುಗಳ ಮೇಲಿನ ಹತೋಟಿ ಕಡಿಮೆಯಾಗಬೇಕು.
5. ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆಗೆ ಕ್ರಮಗಳು ಪ್ರಾರಂಭ ಇತ್ಯಾದಿ.

ಈ ನೀತಿ ಹೀಗಿರುವುದರಿಂದಲೇ ಅದನ್ನು ಬಂಡವಾಳಿಗರು ಪೂರ್ಣವಾಗಿ ಸ್ವಾಗತಿಸಿದ್ದಾರೆ. ಔದ್ಯಮಿಕರಂಗದಲ್ಲಿ ಬೆಳವಣಿಗೆ ತೀವ್ರವಾಗುತ್ತದೆ ಎಂಬ ನಿರೀಕ್ಷೆಯನ್ನು ರಿಸರ್ವ್‌ಬ್ಯಾಂಕ್‌ನ ಗವರ್ನರ್ ಡಾ|| ಸಿ.ರಂಗರಾಜನ್ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಬ್ಯಾಂಕುಗಳು ತಮ್ಮ ಬಡ್ಡಿದರದಲ್ಲಿ ಕಡಿತ ಮಾಡತೊಡಗಿದ್ದಾರೆ. ಈ ಬಡ್ಡಿದರದ ಕಡಿತದಿಂದಾಗಿ ಬ್ಯಾಂಕುಗಳ ಲಾಭದಾಯಕತೆಗೆ ಹೊಡೆತ ಬೀಳುತ್ತದೆ. ಸರ್ಕಾರಿ ಸ್ವಾಮ್ಯದ ದೊಡ್ಡ ಬ್ಯಾಂಕುಗಳು ಈ ಹೊಡೆತವನ್ನು ಸ್ವಲ್ಪ ಮಟ್ಟಿಗೆ ತಡೆದುಕೊಳ್ಳಬಹುದಾದರೂ ಚಿಕ್ಕ ಬ್ಯಾಂಕುಗಳು ತಡೆದುಕೊಳ್ಳಲಾರವು. ಹೀಗೆ ಉದ್ದಿಮೆಗಳ ಲಾಭಕ್ಕಾಗಿ ಬ್ಯಾಂಕುಗಳು ನಷ್ಟ ಅನುಭವಿಸಬೇಕಾಗುತ್ತದೆ.

ಅಲ್ಲದೆ ಒಟ್ಟಾರೆಯಾಗಿ ಔದ್ಯಮಿಕ ರಂಗದಲ್ಲೇ ಸ್ಥಗಿತತೆ ಇರುವುದರಿಂದ ಅವುಗಳೂ ತೀವ್ರವಾಗಿ ಬೆಳವಣಿಗೆ ಹೊಂದುತ್ತವೆ ಎಂದೂ ಹೇಳಲಾಗದು. 1997-98 ರ ಮೊದಲರ್ಧದಲ್ಲಿ ಔದ್ಯಮಿಕ ಬೆಳವಣಿಗೆ, ರಫ್ತು ಬೆಳವಣಿಗೆಗಳಲ್ಲಿ ತೀವ್ರವಾಗಿ ಕುಂಠಿತವಾಗಿತ್ತು. ಬ್ಯಾಂಕುಗಳ ಬಡ್ಡಿದರ ರೂಪಾಯಿ ಶಕ್ತಿಯುತವಾಗಿರುವುದೆಲ್ಲ ಕಾರಣವೆಂದು ಹೇಳಲಾಗುತ್ತಿತ್ತು. ಈಗಂತೂ ಈ ಹಣಕಾಸಿನ ಮತ್ತು ಸಾಲ ನೀತಿ ಬಂದಿರುವುದರಿಂದ ಉದಾರೀಕರಣವಾದಿಗಳು ಸಂತುಷ್ಟರಾಗಿದ್ದಾರೆ.

ದೇಶಕ್ಕೆ ಈ ನೀತಿಯಿಂದ ಎಂತೆಂತಹ ಆಪತ್ತುಗಳು ಬರುತ್ತವೆಂಬುದನ್ನು ಕಾದು ನೋಡಬೇಕು.

1997-98 ರ ಉತ್ತರಾರ್ಧಕ್ಕೆ ಹಣಕಾಸು ಮತ್ತು ಸಾಲ ನೀತಿ

ಮುಖ್ಯಾಂಶಗಳು

- ಬ್ಯಾಂಕ್ ಬಡ್ಡಿದರ ಶೇ 10 ರಿಂದ ಶೇ 9 ಕ್ಕೆ (ರಿಸರ್ವ್ ಬ್ಯಾಂಕ್ ಬೇರೆ ಬ್ಯಾಂಕುಗಳಿಗೆ ನೀಡುವ ಸಾಲದ ಮೇಲಿನ ಬಡ್ಡಿದರ)
- ಬ್ಯಾಂಕುಗಳ ನಗದು ಶಿಲ್ಕು ಮೀಸಲು (ಸಿಆರ್‌ಆರ್) ಶೇ 10 ರಿಂದ ಶೇ 8 ಕ್ಕೆ ಇಳಿತ.
- ಪ್ರೀಶಿಪ್‌ಮೆಂಟ್ ರಫ್ತು ಸಾಲದ ಮೇಲಿನ ಬಡ್ಡಿದರದಲ್ಲಿ ಶೇ 1 ರಷ್ಟು ಕಡಿತ
- ಅನಿವಾಸಿ ಭಾರತೀಯರ ವಿದೇಶಿ ನಾಣ್ಯದ ಠೇವಣಿಯ ಮೇಲಿನ ಬಡ್ಡಿದರಕ್ಕೆ ಲಂಡನ್ ಮಾರುಕಟ್ಟೆ ದರದ ಮಿತಿ.
- ಮನೆ ವಾಹನಗಳಿಗೆ ಸಾಲ ಪ್ರೋತ್ಸಾಹ
- ಬ್ಯಾಂಕುಗಳು ವಿದೇಶಗಳಲ್ಲಿನ ಸಹಯೋಗಗಳಿಗೆ ಸಾಲ ನೀಡಬಹುದು.
- 30 ದಿನಗಳಿಗೂ ಹೆಚ್ಚಿನ ಅವಧಿಯ ಠೇವಣಿಯ ಬಡ್ಡಿದರಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ಬಂಧಗಳಿಂದ ಮುಕ್ತ.
- 28 ದಿನಗಳ ಟ್ರೆಝುರಿ ಬಿಲ್‌ಗಳು ಪ್ರಾರಂಭ.

ಪೂರ್ಣ ಪರಿವರ್ತನೀಯತೆಯ ಜಾಗತಿಕ ತುತ್ತೂರಿ

ಈ ಜಾಗತಿಕ ತುತ್ತೂರಿಯನ್ನು ಐಎಂಎಫ್ ಮತ್ತೆ ಊದಿದೆ. ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ಬಂದರೆ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಅದು ಲೇಖನವೊಂದರಲ್ಲಿ ಹೇಳಿದೆ. ಯಾವುದೇ ದೇಶದ ನಿವಾಸಿಗಳಿಗೆ ಅಭಿವೃದ್ಧಿಯ ಲಾಭಗಳು ಬರಬೇಕಾದರೆ ಪೂರ್ಣ ಪರಿವರ್ತ ನೀಯತೆ ಬರಲೇಬೇಕು. ಆಗ ವಿಶ್ವ ಹಣಕಾಸು ಮಾರುಕಟ್ಟೆಯಲ್ಲಿ ಆ ದೇಶಗಳು ಹಿತಕರವಾದ ಷರತ್ತುಗಳ ಮೇಲೆ ಸಾಲ ಪಡೆಯಬಹುದು ಎಂಬುದು ಈ ಲೇಖನದ ವಾದ.

ಈ ಪೂರ್ಣ ಪರಿವರ್ತನೀಯತೆ ಸಾಧಿಸ ಹೊರಡುವಾಗ ಚಾಲ್ತಿ ಖಾತೆಯ ಕೊರತೆ ಶೇ ಬಹಳ ಕಡಿಮೆ ಇರಬೇಕು ಎಂದಿದೆ ಈ ಲೇಖನ. ಅಂದರೆ ಕಡಿಮೆ ಪ್ರಮಾಣದ ಹಣದುಬ್ಬರ ಕಡಿಮೆ ಪ್ರಮಾಣದ ಬಜೆಟ್ ಕೊರತೆಗಳನ್ನು ಸಾಧಿಸುವ ಅವಶ್ಯಕತೆಯನ್ನು ಅದು ಒತ್ತಿ ಹೇಳಿದೆ. ಹಣಕಾಸು ಸಂಸ್ಥೆಗಳು ದುರ್ಬಲವಾಗಿದ್ದಲ್ಲಿ ಬಂಡವಾಳ ವಿರುದ್ಧ ದಿಕ್ಕಿನಲ್ಲೂ (ದೇಶದಿಂದ ಹೊರಗೆ) ಹರಿಯಬಹುದೆಂದು ಅದು ಒಪ್ಪಿಕೊಂಡಿದೆ.

ಪೂರ್ಣ ಪರಿವರ್ತನೀಯತೆ ತಂದ ಮೆಕ್ಸಿಕೊದಲ್ಲಿ ದೊಡ್ಡ ವಿದೇಶಿ ವಿನಿಮಯ ಬಿಕ್ಕಟ್ಟು ಉಂಟಾಗಿದ್ದು ಇನ್ನೂ ಹಸಿರಾಗೇ ಉಳಿದಿದೆ. ಜಾಗತೀಕರಣ ಎಂತೆಂತಹ ತೊಂದರೆಗಳನ್ನು ದೇಶದ ಜನ ಸಾಮಾನ್ಯರಿಗೆ ತಂದೊಡ್ಡುತ್ತದೆ ಎಂಬುದು ಲ್ಯಾಟಿನ್ ಅಮೆರಿಕದ ದೇಶಗಳ ಅನುಭವದಿಂದ ಗೊತ್ತಾಗುತ್ತದೆ. ಸಾಮ್ರಾಜ್ಯಶಾಹಿ ದೇಶಗಳಿಗೆ ಲಾಭ ಮತ್ತು ಬಡರಾಷ್ಟ್ರಗಳಿಗೆ ಹೆಚ್ಚಿನ ಬಡತನವನ್ನು ಈ ಬಂಡವಾಳ ಖಾತೆಯ ಪರಿವರ್ತನೀಯತೆ ತರುತ್ತದೆ ಎಂಬುದು ಸ್ಪಷ್ಟ. ಆದ್ದರಿಂದಲೇ ಐಎಂ ಎಫ್ ಈ ಬಗ್ಗೆ ಶಿಫಾರಸ್ಸು ಮಾಡುತ್ತಿರುವುದು.

→

ಸ್ಫೋಟಗೊಳ್ಳುತ್ತದೆಂದು ನಮಗೆ ಗೊತ್ತಿತ್ತು. ನಾನು ತರಾತುರಿಯಿಂದ ವಾಪಸಾಗಲು ಮುಂದಾದೆ. ಬಹಳ ಕಷ್ಟದಿಂದ ಫ್ಯಾರಿಸ್ ಮೂಲಕ ವೆನಿಸ್ ತಲುಪಿ ಹಡಗು ಪ್ರಯಾಣ ಮಾಡಿ ಭಾರತಕ್ಕೆ ಮರಳಿ ಬಂದೆ. ಸಮುದ್ರ ಮಾರ್ಗಗಳಲ್ಲಿ ಜರ್ಮನರು ಸ್ಫೋಟಕಗಳನ್ನು ಇಟ್ಟಿದ್ದರು. ಅದರಿಂದ ಅನೇಕ ಹಡಗುಗಳು ನಾಶಗೊಂಡವು. ಹೀಗಾಗಿ ನಮ್ಮ ಹಡಗು ದಕ್ಷಿಣ ಆಫ್ರಿಕದ ಗುಡ್‌ಹೋಪ್ ಭೂಶಿರದ ಮೂಲಕ ಬಂತು. 1940 ರ ಹೊಸವರ್ಷದ ದಿನ ನಾವು ಮುಂಬಯಿ ತಲುಪಿದೆವು.

ಮುಂಬಯಿ ಬಂದರಿನಲ್ಲಿ ನಮ್ಮ ಎಲ್ಲಾ ಸರಂಜಾಮುಗಳನ್ನು ಆಮೂಲಾಗ್ರವಾಗಿ ತಪಾಸಣೆ ಮಾಡಲಾಯಿತು. ನನ್ನ ಬಳಿಯಿದ್ದ ಫ್ರೆಡರಿಕ್ ಎಂಗಲ್ಸ್‌ರ 'ಆಂಟಿ ಡ್ಯುರಿಂಗ್' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ನಾನು ಇದನ್ನು ನಿರೀಕ್ಷಿಸಿದ್ದೆ. ಆದ್ದರಿಂದ ಮುಗ್ಧರಂತೆ ಕಾಣುವ ಕೆಲವು ಬ್ರಿಟಿಶ್ ವೃದ್ಧ ಮಹಿಳೆಯರೊಂದಿಗೆ ಗೆಳೆತನ ಬೆಳೆಸಿದ್ದೆ. ನನ್ನ ಲಗೇಜಿನ ಒಂದು ಭಾಗವನ್ನು ಅವರು ತಂದಿದ್ದರು. ವೃದ್ಧ ಬ್ರಿಟಿಶ್ ಮಹಿಳೆಯರನ್ನು ಸಾಮಾನ್ಯವಾಗಿ ಗಂಭೀರ ತಪಾಸಣೆಗೆ ಒಳಪಡಿಸುವುದಿಲ್ಲ. ಹೀಗಾಗಿ ಸಮಾಜವಾದದ ಕುರಿತಾದ ನನ್ನಲಿದ್ದ ಅನೇಕ ಪುಸ್ತಕಗಳು ಪೋಲೀಸರ ಕಣ್ಣು ತಪ್ಪಿಸಿಕೊಂಡು ಬಚಾವು.

ನಮ್ಮ ಆಗಮನದ ಬಗ್ಗೆ ಮುಂಬಯಲ್ಲಿನ ಪಕ್ಷಕ್ಕೆ ಮೊದಲೇ ತಿಳಿಸಲಾಗಿತ್ತು. ಸ್ವಯಂಸೇವಕರು ಬಂದರಿನಲ್ಲಿ ನನ್ನನ್ನು ಬರಮಾಡಿಕೊಂಡರು. ಮುಂಬಯಿಯಲ್ಲಿ ಪಕ್ಷದ ವಿದ್ಯಾರ್ಥಿ ಸದಸ್ಯರು ಅನೇಕ ಕಡೆ ಸಾರ್ವಜನಿಕ ಸ್ವಾಗತ ಸನ್ಮಾನ ಸಮಾರಂಭಗಳನ್ನು ಏರ್ಪಡಿಸಿದರು. ನನ್ನದೇ ನೆಲದಲ್ಲಿ ಪಡೆದ ಆ ಅಪೂರ್ವ ಸ್ವಾಗತದಿಂದ ನನ್ನ ದನಿ ಗದ್ಗದಿತವಾಯಿತು.

ಅಲ್ಲಿಂದ ನಾನು ಕಲ್ಕತ್ತಕ್ಕೆ ಹೋದೆ. ಇಡೀ ಪಕ್ಷ ಭೂಗತವಾಗಿತ್ತು. ಆ ನಂತರ ನಾನು ಅಡಗುದಾಣಗಳಲ್ಲಿ ಮುಜಾಫರ್ ಅಹಮದ್ ಮತ್ತು ಸೋಮನಾಥ ಲಾಹಿರಿ ಅವರನ್ನು ಸಂಪರ್ಕಿಸಿದೆ. ನನಗೆ ಭಾರತದಲ್ಲಿ ಕೆಲಸ ಮಾಡಿದ ಅನುಭವವೇ ಇರಲಿಲ್ಲ. ಆದ್ದರಿಂದ ಭೂಗತರಾಗಿದ್ದ ಪಕ್ಷದ ಸದಸ್ಯರಿಗೆ ಆಶ್ರಯವನ್ನು ವ್ಯವಸ್ಥೆಗೊಳಿಸುವ ಕೆಲಸದಿಂದ ಪಕ್ಷದ ಚಟುವಟಿಕೆಯನ್ನು ಆರಂಭಿಸಬೇಕು ಎಂದು ನಿರ್ಧರಿಸಲಾಯಿತು. ಅದು ಭಾರತದಲ್ಲಿ ಪಕ್ಷಕ್ಕೆ ಆರಂಭಿಸಿದ ನನ್ನ ಮೊದಲ ಚಟುವಟಿಕೆ ಆಯಿತು.


ಈ ರೀತಿಯಾಗಿ, ಸಾಮ್ರಾಜ್ಯ ವಾದದ ತೊಟ್ಟಿಲಲ್ಲಿದ್ದ ಒಬ್ಬ ಮುಗ್ಧ ಯುವಕನಾಗಿ ನನ್ನ ದೇಶದ ಸ್ವಾತಂತ್ರ್ಯದ ಕನಸು ಕಟ್ಟಿಕೊಂಡು ಒಬ್ಬ ಬದ್ಧ ಕಮ್ಯುನಿಸ್ಟ್ ಆಗಿ ನನ್ನ ನಾಡಿಗೆ ಮರಳಿದೆ.

(ವಿಪ್ಲವ ದಾಸ್ ಗುಪ್ತಾ ಅವರ ಜ್ಯೋತಿಬಾಬುರ್ ಶಾಂಗೆ ಕೃತಿಯಿಂದ)

ಭಾರತೀಯ ವಿಮೋಚನಾ ಸಮರ

ಪುಟ 4 ರಿಂದ

ಮತ್ತು ಅವರ ಸಂಗಾತಿಗಳಿಗೆ ಬಜ್ ಬಜ್ ಸುತ್ತ-ಮುತ್ತಲಿನ ಮನೆಗಳಲ್ಲಿ, ಹಳ್ಳಿಗಳಲ್ಲಿ ಆಶ್ರಯ ದೊರೆಯಿತು. ಪೋಲೀಸರ ಕೈಗೆ ಸಿಕ್ಕಿಬಿದ್ದವರನ್ನು ಪಂಜಾಬಿನ ವಿವಿಧ ಜೈಲುಗಳಿಗೆ ಕಳಿಸಲಾಯಿತು.




ಮೊದಲ ಮಹಾಯುದ್ಧ ಆರಂಭವಾಯಿತು. ಗದರ್ ಪಕ್ಷ ತನ್ನ ಸದಸ್ಯರಿಗೆ ಭಾರತಕ್ಕೆ ಹಿಂದಿರುಗಿ ಕ್ರಾಂತಿಕಾರಿ ಹೋರಾಟವನ್ನು ಸೇರಲು ಕರೆ ಕೊಟ್ಟಿತು. ಸೋಹನ್ ಸಿಂಗ್ ಭಾಕ್ನಾ, ಭಾಯಿ ಜೈಲ್ ಸಿಂಗ್, ಕೇಶಬ್ ಸಿಂಗ್, ಹರ್ನಾಮ್ ಸಿಂಗ್ ಭಾರತದ ಮಣ್ಣಲ್ಲಿ ಕಾಲಿಡುತ್ತಿದ್ದಂತೆ ಬಂಧಿತರಾದರು. ಆದರೆ ಕರ್ತಾರ್ ಸಿಂಗ್ ಸರಭಾ, ಕಾಂಶೀರಾಮ್, ವಿಷ್ಣುಗಣೇಶ್ ಪಿಂಗಳೆ, ಪೃಥ್ವೀಸಿಂಗ್, ರಹಮತ್ ಅಲಿ, ನಿಧೇನ್ ಸಿಂಗ್ ಚುಗಾ ಮತ್ತಿತರು ತಪ್ಪಿಸಿಕೊಂಡು ಕ್ರಾಂತಿಕಾರಿ ಹೋರಾಟವನ್ನು ಮುಂದುವರೆಸಿದರು.




ಹಾರ್ಡಿಂಜ್ ಕೊಲೆಯ ನಂತರ ತಲೆಮರೆಸಿಕೊಂಡಿದ್ದ ರಾಶ್ ಬಿಹಾರಿ ಬೋಸ್ ಫೆಬ್ರುವರಿ 19, 1915ರಂದು ಭಾರತೀಯ ಸೇನೆಯಲ್ಲಿ ಬಂಡಾಯ ನಡೆಸಬೇಕೆಂದು ಯೋಚಿಸಿದರು. ಗದರ್ ಪಾರ್ಟಿಯ ಸದಸ್ಯರೂ ಅವರ ಜೊತೆಗೂಡಿದರು. ಆದರೆ ಕೆಲವು ದೇಶದ್ರೋಹಿಗಳಿಂದ ಇದರ ಸುಳಿವು ಬ್ರಿಟೀಶರಿಗೆ ದೊರೆಯಿತು. ಬಂಡಾಯದ ಯೋಜನೆ ಬುಡಮೇಲಾಯಿತು. ಮೇ 12, 1915 ರಂದು ರಾಶ್ ಬಿಹಾರಿ ಬೋಸ್ ಮಾರು ವೇಷದಲ್ಲಿ ಜಪಾನಿನ ಹಡಗು ಹತ್ತಿದರು. ಸಚಿನ್ ಸನ್ಯಾಲ್, ಶ್ರೀಷ್ ಘೋಷ್, ನಾಗೇಂದ್ರನಾಥ್ ದತ್ತಾ ಬೋಸ್‌ರವರ ನಿಕಟ ಸಹಯೋಗಿಗಳು.

ಅತ್ತ ಬಂಡಾಯದ ಯೋಚನೆ ವಿಫಲವಾದಗ ನಡೆದ ಘರ್ಷಣೆಗಳಲ್ಲಿ ಕಾಂಶೀರಾಮ್, ರಹಮತ್ ಅಲಿ ಮತ್ತಿತರರು ಪೋಲೀಸ್, ಮಿಲಿಟರಿ ಗುಂಡುಗಳಿಗೆ ಬಲಿಯಾದರು. ಹಲವರನ್ನು ಬಂಧಿಸಿ ಮೊದಲ ಲಾಹೋರ್ ಪಿತೂರಿ ಮೊಕದ್ದಮೆಯನ್ನು ಹೂಡಲಾಯಿತು. 24 ಮಂದಿಗೆ ಮರಣದಂಡನೆ, 27 ಮಂದಿಗೆ ಅಂಡಮಾನಿನಲ್ಲಿ ಕರಿನೀರಿನ ಶಿಕ್ಷೆ ವಿಧಿಸಲಾಯಿತು. ಇದರ ವಿರುದ್ಧ ದೇಶಾದ್ಯಂತ ಪ್ರತಿಭಟನೆಗಳು ನಡೆದವು. ಕೊನೆಗೆ 17 ಮಂದಿಯ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗಿಳಿಸಲಾಯಿತು.









1915ರ ನವೆಂಬರ್ 16ರಂದು 21 ವರ್ಷದ ಕರ್ತಾರ್‌ಸಿಂಗ್ ಸರಭಾನನ್ನು ಗಲ್ಲಿಗೇರಿಸಲಾಯಿತು. ಎದರಿನ ವಿಷ್ಣು ಗಣೇಶ್ ಪಿಂಗಳೆಯನ್ನು, ನಂತರ ಜಗತ್ ಸಿಂಗ್, ಹರ್ನಾವನ್ ಸಿಂಗ್, ಭಕ್ಷಿಸಿಂಗ್ ಗಿಲ್ವಾನಿ ಹಾಗೂ ಮರ್ಥೆನ್ ಸಿಂಗ್ ಗಿಲ್ವಾಲಿ ಎಂಬ ಒಂದೇ ಹೆಸರಿನ ಇಬ್ಬರು- ಇವರನ್ನು ಗಲ್ಲಿಗೇರಿಸಲಾಯಿತು. ಒಟ್ಟು 46 ಗದರ್ ಸಂಗಾತಿಗಳು ಹುತಾತ್ಮರಾದರು.

(ಮುಂದುವರಿಯುವುದು)



ಉತ್ತರ ಪ್ರದೇಶದಲ್ಲಿ ಆನೇಗಾತ್ರದ ಸಂಪುಟ; ಪಕ್ಷಾಂತರಿಗಳಿಗೆ ಮಣೆ
ಬಿ.ಜೆ.ಪಿ. ಟೊಳ್ಳುತನ ಮತ್ತೊಮ್ಮೆ ಬಯಲಿಗೆ

ಅಡ್ಡದಾರಿ ಹಿಡಿದು ಕಳೆದ ವಾರವಷ್ಟೇ ಪತನದ ಅಂಚಿನಿಂದ ಪಾರಾಗಿದ್ದ ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ಸಚಿವ ಸಂಪುಟ ವನ್ನು ಅಕ್ಟೋಬರ್ 27 ರಂದು ಗಜಗಾತ್ರಕ್ಕೆ ಏರಿಸಲಾಗಿದೆ. ಇಂದಿನ ವಿಸ್ತರಣೆಯೊಂದಿಗೆ ಕೇವಲ ಒಂದು ತಿಂಗಳ ಹರಯದ ಕಲ್ಯಾಣ್ ಸಿಂಗ್ ಸಂಪುಟದ ಬಲ ದಾಖಲೆಯ 93 ಕ್ಕೇರಿದೆ.

ಅಕ್ಟೋಬರ್ 21 ರಂದು ವಿಶ್ವಾಸಮತ ಗಳಿಸುವಲ್ಲಿ ಯಶಸ್ವಿಯಾಗಿದ್ದ ಕಲ್ಯಾಣ್ ಸೋಮವಾರ 26 ಮಂದಿ ಸಂಪುಟ ಮತ್ತು 44 ಮಂದಿ ರಾಜ್ಯ ಸಚಿವರನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಂಡಿದ್ದಾರೆ.

ಸಮ್ಮಿಶ್ರ ಸರ್ಕಾರಕ್ಕೆ ಅ.19 ರಂದು ಬಿಎಸ್‌ಪಿ ಬೆಂಬಲ ಹಿಂದೆ ಪಡೆದ ನಂತರ ಕಲ್ಯಾಣ್ ಸಂಪುಟದ ಬಲ 23 ಕ್ಕೆ ಇಳಿದಿತ್ತು. ಅವರಿಂದು 70 ಮಂದಿ ಹೊಸಬರನ್ನು ಸಚಿವರನ್ನಾಗಿ ಮಾಡುವ ಮೂಲಕ ರಾಜಕೀಯ ವಲಯದಲ್ಲಿ ಅಚ್ಚರಿ ಹುಟ್ಟಿಸಿದ್ದಾರೆ.

ಕಳೆದ ವಾರ ವಿಶ್ವಾಸಮತ ಯಾಚನೆ ಸಂದರ್ಭದಲ್ಲಿ ಕಲ್ಯಾಣ್‌ಸಿಂಗ್ ಸರ್ಕಾರ ವನ್ನು ರಕ್ಷಿಸಿದ್ದ ಬಿಎಸ್‌ಪಿಯ ಎಲ್ಲ 12 ಮಂದಿ ಮತ್ತು ವಿಭಜಿತ ಕಾಂಗ್ರೆಸ್‌ನ 22 ಮಂದಿ ಸದಸ್ಯರಿಗೆ ಕಲ್ಯಾಣ್ ಇಂದು ಮಂತ್ರಿಪಟ್ಟದ ಕೊಡುಗೆ ಕೊಟ್ಟಿದ್ದಾರೆ.

ಪಕ್ಷದ ಸಚೇತಕಾಜ್ಞೆಯನ್ನು ಉಲ್ಲಂಘಿಸಿ ವಿಶ್ವಾಸಮತ ಪರ ಮತ ಚಲಾಯಿಸಿದ 12 ಮಂದಿ ಶಾಸಕರನ್ನು ಸದಸ್ಯತ್ವದಿಂದ ಅನರ್ಹ ಗೊಳಿಸಬೇಕು ಎಂದು ಬಿಎಸ್‌ಪಿ ಉಪಾಧ್ಯಕ್ಷೆ ಮಾಯಾವತಿ ಅವರು ಒತ್ತಾಯಿಸಿದ್ದರೂ, ಈ 12 ಮಂದಿಯನ್ನು ಕಲ್ಯಾಣ್ ಸಿಂಗ್ ಸಂಪುಟಕ್ಕೆ ಸೇರಿಸಿಕೊಂಡಿದ್ದಾರೆ.

ಇಂದು ಸೇರ್ಪಡೆಯಾಗಿರುವ 44 ರಾಜ್ಯ ಸಚಿವರು ಪೈಕಿ 19 ಮಂದಿ ಬಿಜೆಪಿ, ಲೋಕ ತಾಂತ್ರಿಕ ಕಾಂಗ್ರೆಸ್‌ನ 13 ಮಂದಿ, 9ಜನ ಬಂಡಾಯ ಬಿಎಸ್‌ಪಿ, ಇಬ್ಬರು ಜನತಾ ದಳ ಮತ್ತು ಒಬ್ಬರು ಪಕ್ಷೇತರರು ಸೇರಿದ್ದಾರೆ.

ವಿಶ್ವಾಸಮತ ಗೊತ್ತುವಳಿ ಸಂದರ್ಭದಲ್ಲಿ ಬಣ್ಣ ಬದಲಿಸಿ ಸರಕಾರದ ಕಡೆ ಹಾರಿದ ಪ್ರತಿಪಕ್ಷ ಶಾಸಕರ 'ಖರೀದಿ' ನಡೆದಿತ್ತು ಎನ್ನುವುದನ್ನು ಈ ಪ್ರಕರಣ ಸಾಬೀತು ಪಡಿಸುತ್ತದೆ.

ಪಕ್ಷಾಂತರಕ್ಕೆ ಬಿಜೆಪಿ ಪ್ರತಿಪಕ್ಷಗಳ ಶಾಸಕರಿಗೆ ಆಮಿಷಗಳನ್ನು ಒಡ್ಡಿತ್ತು ಎನ್ನುವ ವಿಚಾರವ್ವಾ ಮಂಗಗಳಂತೆ ಅಲ್ಲಿಂದ ಇಲ್ಲಿಗೆ ಹಾರಿದ ಎಲ್ಲರಿಗೂ ಮಂತ್ರಿಸ್ಥಾನ ಕೊಟ್ಟ ಈ ಘಟನೆಯಿಂದ ರುಜುವಾತು ಆಗಿದೆ.

ಆಡಳಿತ ಪಕ್ಷದ 10ನೇ ಒಂದು ಭಾಗದಷ್ಟು ಶಾಸಕರನ್ನು ಸಚಿವರನ್ನಾಗಿ ಮಾಡಬಹುದು ಎನ್ನುವುದು ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ನಿಯಮ. ಆದರೆ ಪಕ್ಷಾಂತರಿಗಳ ಸಹಾಯ ದಿಂದ 222 ಸದಸ್ಯರನ್ನು ಹೊಂದಿರುವ ಬಿಜೆಪಿ ಹೆಚ್ಚು ಕಡಿಮೆ ಅರ್ಧಕ್ಕೆ ಅರ್ಧದಷ್ಟು ಜನರನ್ನು ಮಂತ್ರಿಗಳನ್ನಾಗಿ ಮಾಡಿ ಅಪಮಾರ್ಗದ ಮೂಲಕ ಅಧಿಕಾರದ ಕುರ್ಚಿಗೆ ಅಂಟಿ ಕೊಳ್ಳಲು ನೆರವಾದವರಿಗೆ ಕೊಡುಗೆಯನ್ನು ನೀಡಿದೆ.

ಕೇಂದ್ರದಲ್ಲಿ ಮುಖ್ಯವಾಗಿ ಎಡಪಕ್ಷಗಳ ತತ್ವಬದ್ಧ ನಿಲುವಿನಿಂದಾಗಿ 13 ದಿನಗಳ ಬಿಜೆಪಿ ಸರಕಾರ ಪತನಗೊಂಡು ರಾಷ್ಟ್ರೀಯ ರಂಗ ಸರಕಾರ ಅಧಿಕಾರಕ್ಕೆ ಬಂದದ್ದರಿಂದ ಹತಾಶಗೊಂಡ ಬಿಜೆಪಿ ಏನಾದರೂ ಮಾಡಿ ಅಧಿಕಾರಕ್ಕೆ ಬರಬೇಕೆಂದು ಹೊಂಚು ಹಾಕುತ್ತಲೇ ಇದೆ. ಕೇಂದ್ರದಲ್ಲಿ ಆಗದಿದ್ದರೂ ಸಾಧ್ಯವಾದಷ್ಟು ಯಾವುದೇ ರಾಜ್ಯದಲ್ಲಾದರೂ ಆಡಳಿತ ಸೂತ್ರ ಹಿಡಿಯ ಬೇಕೆನ್ನುವುದು ಬಿಜೆಪಿ ಹವಣಿಕೆ. ಈ 'ಗುರಿ' ಮುಟ್ಟಲು ಯಾವ ಮಟ್ಟಕ್ಕೆ ಇಳಿಯಲೂ ಹಿಂಜರಿಯದು ಎಂದು ತೋರಿಸಿಕೊಟ್ಟ ಬಿಜೆಪಿ, ಅದಾದ ಕೇವಲ ಒಂದು ವಾರದಲ್ಲಿ ಸಿಕ್ಕಿದ ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳಲು ಕೂಡ ಎಂಥ ಹೇಸಿಗೆ ಕೆಲಸಕ್ಕೂ ಹಿಂದೆ ಮುಂದೆ ನೋಡುವುದಿಲ್ಲ ಎನ್ನುವುದು ಸಾಬೀತು ಪಡಿಸಿದೆ. ಇಷ್ಟೊಂದು ದೊಡ್ಡ ಪ್ರಮಾಣದ ಸಚಿವ ಸಂಪುಟವನ್ನು ರಚಿಸಿರುವುದು ಭಾರತೀಯ ಜನತಾಪಕ್ಷದ ಸೈದ್ಧಾಂತಿಕ ದಿವಾಳಿಕೋರತನವನ್ನು ಸಂಕೇತಿಸುತ್ತದೆ. ಅದರ ತತ್ವಬದ್ಧತೆ ಹಾಗೂ ನೈತಿಕತೆಯ ನಿಜರೂಪ ಬಯಲಿಗೆ ಬಂದಿದೆ.

ಪಕ್ಷಾಂತರಿಗಳಿಗೆ ಮಣೆ ಹಾಕಿ ಸಂಪುಟ ವನ್ನು ಆನೆಗಾತ್ರದಂತೆ ಮಾಡಿರುವುದೇ ಅಲ್ಲದೆ ಸಂಪುಟವನ್ನು ಇನ್ನೂ ವಿಸ್ತರಿಸುವುದಾಗಿ ಕಲ್ಯಾಣ್ ಸಿಂಗ್ ಹೇಳಿದ್ದಾರೆ. ಇದು ಲಜ್ಜೇ ಗೇಡಿತನದ ಪರಮಾವಧಿಯ ಇನ್ನೊಂದು ರೂಪವಾಗಿದೆ.

ಭಯೋತ್ಪಾದಕರಿಗೆ ಸವಾಲೆಸೆದ ರ್‍ಯಾಲಿ

ಅಸ್ಸಾಂ ರಾಜಧಾನಿ ಗುವಾಹಟಿಯಲ್ಲಿ ಅಕ್ಟೋಬರ್ 22 ರಂದು ನಡೆದ ಬೃಹತ್ ರ್‍ಯಾಲಿ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಒಂದು ದೃಢ ಸವಾಲಿನಂತಿತ್ತು.

(ಈ ರ್‍ಯಾಲಿಯ ಬಗ್ಗೆ 'ಐಕ್ಯರಂಗ' ದ ಕಳೆದ ಸಂಚಿಕೆಯಲ್ಲಿ ಸಂಕ್ಷಿಪ್ತ ವರದಿ ಪ್ರಕಟವಾಗಿತ್ತು)

ರ್‍ಯಾಲಿಗೆ ಜನರು ಬರುವುದನ್ನು ತಡೆಯುವ ಉದ್ದೇಶದಿಂದ ಉಲ್ಫಾ(ಅಸ್ಸಾಂ ಸಂಯುಕ್ತ ವಿಮೋಚನಾ ರಂಗ) ರಾಜ್ಯದ ಆರು ಜಿಲ್ಲೆಗಳಲ್ಲಿ ರಸ್ತೆ ತಡೆ ಚಳುವಳಿಗೆ ಕರೆ ಕೊಟ್ಟಿತ್ತು. ಆದರೆ ದೇಶದ ಸಮಗ್ರತೆಗೆ ಧಕ್ಕೆ ತರುವ ಈ ಶಕ್ತಿಗಳಿಗೆ ದೇಶಪ್ರೇಮಿ ಜನರು ಸಮಗ್ರತೆಗೆ ಧಕ್ಕೆ ತರುವ ಈ ಶಕ್ತಿಗಳಿಗೆ ದೇಶಪ್ರೇಮಿ ಜನರು ಬಲವಾದ ಸವಾಲನ್ನೇ ಹಾಕಿದ್ದಾರೆ. ಉಗ್ರಗಾಮಿಗಳ ಬೆದರಿಕೆಗೆ ಜಗ್ಗದ ಜನರು ಸಾವಿರ ಸಾವಿರ ಸಂಖ್ಯೆಯಲ್ಲಿ ಅತ್ಯುತ್ಸಾಹದಿಂದ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಅಸ್ಸಾಂ ಗಣಪರಿಷತ್(ಎಜಿಪಿ), ಸಿಪಿಐ(ಎಂ), ಸಿಪಿಐ ಮತ್ತು ಅಸ್ಸಾಂ ಸಂಯುಕ್ತ ಜನತಾಪಕ್ಷ (ಯುಪಿಪಿಎ) ರ್‍ಯಾಲಿಯನ್ನು ಸಂಘಟಿಸಿದ್ದವು.

ಕಾಂಗ್ರೆಸ್‌ನ ಆಡಳಿತದಿಂದ ಪ್ರತ್ಯೇಕತಾ ಚಳುವಳಿ

ಕೇಂದ್ರದಲ್ಲಿ ಸತತ ಆಡಳಿತ ನಡೆಸಿದ ಕಾಂಗ್ರೆಸ್ ಸರಕಾರಗಳು ... ಮತ್ತು ದೇಶದ ಈಶಾನ್ಯ ಭಾಗದ ಇತರ ರಾಜ್ಯಗಳನ್ನು ನಿರೀಕ್ಷಿಸುತ್ತಾ ಬಂದವು. ಇದರಿಂದಾಗಿ ಇಲ್ಲೆಲ್ಲಾ ಪ್ರತ್ಯೇಕತಾವಾದಿ ಚಳುವಳಿಗಳು ತಲೆಎತ್ತಿದವು ಎಂದು ಬೃಹತ್ ರ್‍ಯಾಲಿಯಲ್ಲಿ ಮಾತನಾಡಿದ ಸಿ.ಪಿ.ಐ.(ಎಂ) ನಾಯಕ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ವಿಶ್ಲೇಷಿಸಿದರು.

ಒಕ್ಕೂಟ ಸ್ವರೂಪದ ತತ್ವವನ್ನು ಕಾಂಗ್ರೆಸ್ ನಾಶಪಡಿಸಿತು ಹಾಗೂ ಎಲ್ಲಾ ಅಧಿಕಾರಗಳನ್ನು ಕೇಂದ್ರದಲ್ಲಿ ಕೇಂದ್ರೀಕರಿಸಿತು ಎಂದು ಅವರು ಆಪಾದಿಸಿದರು. ಬಲಿಷ್ಠ ರಾಜ್ಯಗಳಿದ್ದರೆ ಮಾತ್ರವೇ ಬಲಿಷ್ಠ ಕೇಂದ್ರ ಇರಬಹುದು ಎಂದು ನುಡಿದ ಬಸು, ರಾಜ್ಯಗಳಿಗೆ ಹೆಚ್ಚಿನ ಅಧಿಕಾರಗಳನ್ನು ನೀಡುವಂತೆ ಒತ್ತಾಯಿಸಿದರು.

ಸಂಯುಕ್ತರಂಗದ ಸಂಚಾಲಕ ಹಾಗೂ ಆಂಧ್ರಪ್ರದೇಶದ ಮುಖ್ಯಮಂತ್ರಿ ಎಸ್.ಚಂದ್ರ ಬಾಬು ನಾಯ್ಡು ಅವರೂ ಮಾತಿಗೆ ದನಿಗೂಡಿಸಿದರು. ಬಸು ಮತ್ತು ನಾಯ್ಡು ಭಾರತೀಯ ಜನತಾ ಪಕ್ಷದ (ಬಿ.ಜೆ.ಪಿ) ಕೋಮುವಾದಿ ರಾಜಕೀಯವನ್ನು ಬಲವಾಗಿ ಖಂಡಿಸಿದರು.

ಬಾಬರಿ ಮಸೀದಿ ನಾಶಕ್ಕೆ ಕಾರಣರಾದ ವ್ಯಕ್ತಿ ಈಗ ಉತ್ತರ ಪ್ರದೇಶದ ಮುಖ್ಯಮಂತ್ರಿ ಆಗಿರುವುದು ನಾಚಿಕೆಗೇಡಿನ ಸಂಗತಿ ಎಂದು ಬಸು ಹೇಳಿದರು.

ಜನತೆಯ ಪ್ರಜ್ಞೆಯನ್ನು ಹೆಚ್ಚಿಸುವುದರಿಂದ ಮಾತ್ರವೇ ಕ್ರಿಮಿನಲ್‌ಗಳು ಜನರ ಪ್ರತಿನಿಧಿಗಳಾಗಿ ಆಯ್ಕೆಯಾಗುವುದನ್ನು ತಡೆಯಲು ಸಾಧ್ಯ ಎಂದು ಅವರು ಅಭಿಪ್ರಾಯ ಪಟ್ಟರು.

ಎಜಿಪಿ ಮುಖಂಡ ಹಾಗೂ ಅಸ್ಸಾಂ ಮುಖ್ಯಮಂತ್ರಿ ಪ್ರಫುಲ್ಲ ಕುಮರ್ ಮಹಂತ ರ್‍ಯಾಲಿಯ ಅಧ್ಯಕ್ಷತೆ ವಹಿಸಿದ್ದರು. ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತ ಕೆಲವು ಬುದ್ಧಿಜೀವಿಗಳು ಮತ್ತು ಕೆಲವು ಪತ್ರಕರ್ತರು ಉಲ್ಫಾ, ಎಸ್‌ಜಿಎಫ್‌ಬಿ ಮತ್ತು ಬಿಎಚ್‌ಬಿ ಹೂಡಲಾದ ಉಗ್ರಗಾಮಿ ಸಂಘಟನೆಗಳಿಗೆ ಬೆಂಬಲ ಕೊಡುತ್ತಿರುವುದನ್ನು ಮಹಂತ ಖಂಡಿಸಿದರು.

ಹಿಂಸಾಚಾರ ಮತ್ತು ಮುಗ್ಧಜನರ ಹತ್ಯೆ ಹೊಣೆಯನ್ನು ಈ ಬುದ್ಧಿಜೀವಿಗಳು ವಹಿಸಿಕೊಳ್ಳುತ್ತಾರಾ ಎಂದು ಅವರು ಪ್ರಶ್ನಿಸಿದರು.

ಬಿಜೆಪಿಯ ಚುನಾವಣಾ ಪ್ರಹಸನ

ಭಾರತೀಯ ಜನತಾ ಪಕ್ಷ ದೇಶಾದ್ಯಂತ ಸಾಂಸ್ಥಿಕ 'ಚುನಾವಣೆ'ಗಳನ್ನು ನಡೆಸುತ್ತಿದೆ. ಇದು ಚುನಾವಣೆ ಎನ್ನುವುದಕ್ಕಿಂತ ಚುನಾವಣೆ ಎಂಬ ಪ್ರಹಸನ ಎಂದರೇ ಸರಿಯಾಗುತ್ತದೆ. ರಾಜ್ಯದಿಂದ ಕೇಂದ್ರದವರೆಗೆ ಒಂದೇ ರೀತಿಯ ಪರಿಸ್ಥಿತಿ ಹಲವು ರಾಜ್ಯಗಳಿಂದ ಬರುತ್ತಿರುವ ಸಮಾಚಾರಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಕಲ್ಕತ್ತದಿಂದ ಬಂದಿರುವ ವರದಿ ಇದು. ಬಿಜೆಪಿಯ ಪಶ್ಚಿಮ ಬಂಗಾಳ ಘಟಕದಲ್ಲಿ ಸಾಂಸ್ಥಿಕ ಚುನಾವಣೆಯ ಈ ಕಾಲಘಟ್ಟದಲ್ಲಿ ಅತೃಪ್ತಿಯ ಹೊಗೆಯಾಡುತ್ತಿದೆ.

ಅಕ್ಟೋಬರ್ 16 ರಂದು ಬಿಜೆಪಿಯ ಕೆಲವು ಕಾರ್ಯಕರ್ತರು ಪಕ್ಷದ ರಾಜ್ಯ ಘಟಕದ ಕೇಂದ್ರ ಕಚೇರಿಗೆ ನುಗ್ಗಿ ದಾಂಧಲೆ ನಡೆಸಿದರು. ಚುನಾವಣೆಯಲ್ಲಿ ಪಕ್ಷದ ನಾಯಕರು ಮೋಸ ಮಾಡುತ್ತಿದ್ದಾರೆ ಎಂದು ಅವರು ಆಪಾದಿಸಿದರು. ಕಾರ್ಯಕರ್ತರು ನುಗ್ಗುವುದನ್ನು ಅರಿತ ಮುಖಂಡರು ಬೇಗ ಬೇಗ ಬಾಗಿಲು ಹಾಕಿಕೊಂಡರು. ಆದರೂ ಕೋಪೋದ್ರಿಕ್ತ ಕಾರ್ಯಕರ್ತರು ಬಾಗಿಲುಗಳನ್ನು ಬಡಿಯ ತೊಡಗಿದರು. ನಾಯಕತ್ವ ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ತಾವು ಕಮ್ಯುನಿಸ್ಟರ ಜತೆ ಸಹಕರಿಸುವುದಾಗಿಯೂ ಅವರು ಹೇಳಿದರು. ಕಾರ್ಯಕರ್ತರಲ್ಲಿ ಹೊಗೆಯಾಡುತ್ತಿರುವ ಅತೃಪ್ತಿಯ ಪರಾಕಾಷ್ಠೆಯನ್ನು ತೋರಿಸುತ್ತದೆ.

ಬಿಜೆಪಿ ಕಾರ್ಯಕರ್ತರು ಅಲ್ಲವಂತೆ!

ಇದು ಒಂದು ನಾಚಿಕೆಗೇಡಿನ ಘಟನೆ ಎಂದು ಬಿಜೆಪಿ ರಾಜ್ಯಕಾರ್ಯದರ್ಶಿ ತಪನ್ ಸಿಕ್ದರ್ ಹೇಳಿದ್ದಾರೆ. ಅದೇ ಉಸಿರಿನಲ್ಲಿ 'ಇದರಲ್ಲಿ ಒಳಗೊಂಡವರು ಬಿಜೆಪಿ ಕಾರ್ಯಕರ್ತರಾರು ಅಲ್ಲ' ಎಂದೂ ಅವರು ಹೇಳಿದ್ದಾರೆ. ಪಕ್ಷದಲ್ಲಿ ಭುಗಿಲೆದ್ದಿರುವ ಅತೃಪ್ತಿಯನ್ನು ಮುಚ್ಚಿಹಾಕಲು ಬಿಜೆಪಿ ದೊಡ್ಡ ಸುಳ್ಳು ಹೇಳುತ್ತಿದೆ ಎನ್ನುವುದನ್ನು ಮರೆಮಾಚಲು ಸಾಧ್ಯವಿಲ್ಲ.

ರಾಜ್ಯ ಘಟಕದ ಹಾಲಿ ಅಧ್ಯಕ್ಷ ವಿಷ್ಣುಕಾಂತ ಶಾಸ್ತ್ರಿ ಅವರನ್ನೇ ಇನ್ನೊಂದು ಅವಧಿಗೆ ಆಯ್ಕೆ ಮಾಡಬೇಕೇ ಬೇಡವೇ ಎಂಬ ಬಗ್ಗೆ ಭಾರೀ ವಿವಾದ ಎದ್ದಿದೆ. ಒಂದು ವೇಳೆ ರಾಜ್ಯಘಟಕ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದರೆ ಸಿಕ್ದರ್ ಮತ್ತು ಸುಕುಮಾರ ಬ್ಯಾನರ್ಜಿ ನಡುವೆ ಹಣಾಹಣಿ ನಡೆಯಲಿದೆ.

ನಾಮಪತ್ರ ತಿರಸ್ಕಾರ!

ಇದು ಪಶ್ಚಿಮಬಂಗಾಳದ ಕತೆಯಾದರೆ ಉತ್ತರ ಪ್ರದೇಶದ್ದು ಬೇರೊಂದು ರೀತಿಯದು. ಅಲ್ಲಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ರಾಮ ಪ್ರಕಾಶ್ ತ್ರಿಪಾಠಿ ಎನ್ನುವವರು ಸಲ್ಲಿಸಿದ್ದ ನಾಮಪತ್ರವನ್ನೇ ತಿರಸ್ಕರಿಸಲಾಗಿದೆ. ತ್ರಿಪಾಠಿ ರಾಜ್ಯಘಟಕದ ಮಾಜಿ ಉಪಾಧ್ಯಕ್ಷರಾಗಿದ್ದು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಯಸಿದ್ದರು.

ಅಕ್ಟೋಬರ್ 14 ರ ಮಧ್ಯಾಹ್ನ 12.30 ರಿಂದ 2.30 ರವರೆಗೆ ನಾಮಪತ್ರ ಸಲ್ಲಿಸಲು ಸಮಯ ನಿಗದಿಪಡಿಸಲಾಗಿತ್ತು. ತ್ರಿಪಾಠಿ ಮಧ್ಯಾಹ್ನ ಎರಡು ಗಂಟೆಗೆ ಹೋದಾಗ ಗಡುವು ಮುಗಿದಿದೆ ಎಂದು ಅವರಿಗೆ ತಿಳಿಸಲಾಯಿತು. ತಾವು ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ತಡೆಯಲೆಂದೇ ಸಮಯವನ್ನು ಏಕಪಕ್ಷೀಯವಾಗಿ ಬದಲಾಯಿಸಲಾಗಿದೆ ಎಂದು ತ್ರಿಪಾಠಿ ಆಪಾದಿಸಿದ್ದಾರೆ.

ರಾಜನಾಥ ಸಿಂಗ್ ಅವರನ್ನು ಉತ್ತರ ಪ್ರದೇಶದ ಬಿಜೆಪಿ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಬಿಜೆಪಿಯ ರಾಷ್ಟ್ರೀಯ ಮುಖಂಡರು ಪ್ರಯತ್ನಿಸುತ್ತಿದ್ದಾರೆ. ಅದನ್ನು ವಿಫಲಗೊಳಿಸಲು ತ್ರಿಪಾಠಿ ಉದ್ದೇಶಿಸಿದ್ದರು. ಆದರೆ ಅವರ ನಾಮಪತ್ರವನ್ನೇ ತಿರಸ್ಕರಿಸಲಾಯಿತು.

ಅಧೋಗತಿ

ಪಕ್ಷ ಇಷ್ಟೊಂದು ಅಧೋಗತಿಗೆ ಇಳಿದಿದೆ ಎನ್ನುವುದು ನನಗೆ ಗೊತ್ತಿರಲಿಲ್ಲ ಎಂದು ತ್ರಿಪಾಠಿ ಉದ್ಗರಿಸಿದ್ದಾರೆ. ನಿರ್ದಿಷ್ಟ ಅಭ್ಯರ್ಥಿಯೊಬ್ಬ ಗೆಲ್ಲುವುದನ್ನು ಖಾತರಿಪಡಿಸಲು ಇನ್ನೊಬ್ಬ ಅಭ್ಯರ್ಥಿಯ ನಾಮಪತ್ರವನ್ನು ಅಕ್ರಮವಾಗಿ ತಿರಸ್ಕರಿಸುವ ಮಟ್ಟಕ್ಕೆ ಇಳಿದದ್ದು ದುರದೃಷ್ಟಕರ ಎಂದಿದ್ದಾರೆ. 'ನನ್ನ ನಾಮಪತ್ರವನ್ನು ತಿರಸ್ಕರಿಸಿರುವುದನ್ನು ನಾನು ಖಂಡಿಸುತ್ತೇನೆ. ಇದು ಪಕ್ಷದ ಆಂತರಿಕ ಪ್ರಜಾಪ್ರಭುತ್ವವನ್ನು ದಮನಗೊಳಿಸುವ ಸ್ಪಷ್ಟ ಪ್ರಯತ್ನವಾಗಿದೆ' ಎಂದು ಅವರು ಕೆಂಡಕಾರಿದ್ದಾರೆ.

ಇಲ್ಲೇ ಕರ್ನಾಟಕದಲ್ಲಿಯೂ ಬಿಜೆಪಿ ರಾಜ್ಯ ಅಧ್ಯಕ್ಷರ ಅವಿರೋಧ ಆಯ್ಕೆ ಎಂಬ ನಾಟಕ ನಡೆಯಿತು.

ರಾಜ್ಯ ಅಧ್ಯಕ್ಷ ಗಾದಿಗೆ ಹಲವು ಅಭ್ಯರ್ಥಿಗಳು ಇದ್ದರೂ ಅವ್ಯಾರು ನಾಮಪತ್ರ ಸಲ್ಲಿಸದಂತೆ ತಡೆಯಲಾಯಿತು. ರಾಷ್ಟ್ರೀಯ ನಾಯಕರ ಇಚ್ಛೆಯ ಪ್ರಕಾರ ಬಿ.ಎಸ್. ಯಡಿಯೂರಪ್ಪ ಅವರನ್ನು ಮಾತ್ರ ಕಣದಲ್ಲಿ ಉಳಿಯುವಂತೆ ಮಾಡಿ ಅವರ 'ಅವಿರೋಧ ಆಯ್ಕೆ'ಯನ್ನು ಅಕ್ಟೋಬರ್ 26 ರಂದು ಘೋಷಿಸಲಾಯಿತು.

○

ನಕ್ಸಲೀಯರಿಂದ ಗುಂಡಿನ ದಾಳಿ

ಬಿಹಾರದ ದರ್ಭಾಂಗ್‌ನಲ್ಲಿ ಅಕ್ಟೋಬರ್ 3 ರಂದು ದುಷ್ಕರ್ಮಿಗಳು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ವಿಜಯಕಾಂತ ಠಾಕೂರ್ ಅವರ ಮೇಲೆ ಹಲ್ಲೆ ನಡೆಸಿ ಗುಂಡು ಹಾರಿಸಿದರು.

ಕಾ|| ವಿಜಯ ಕಾಂತ್ ಠಾಕೂರ್ ಅವರ ಮನೆಗೆ ನುಗ್ಗಿದ ಕ್ರಿಮಿನಲ್‌ಗಳ ಒಂದು ಗುಂಪು ಠಾಕೂರ್ ಮತ್ತು ಇತರ ಕೆಲವು ಸಂಗಾತಿಗಳ ಮೇಲೆ ಹಲ್ಲೆ ಮಾಡಿತು. ಅದೃಷ್ಟವಶಾತ್ ಠಾಕೂರ್ ಮತ್ತು ಇತರ ಸಂಗಾತಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ದುಷ್ಕೃತ್ಯವನ್ನು ಪ್ರತಿಭಟಿಸಿ ಹಲವಾರು ರ್‍ಯಾಲಿಗಳು ಮತ್ತು ಸಭೆಗಳನ್ನು ನಡೆಸಲಾಯಿತು.

ಈ ದುಷ್ಕರ್ಮಿಗಳು ಸಿಪಿಐ(ಎಂ-ಎಲ್) ಮುಖವಾಡ ಹಾಕಿಕೊಂಡಿರುವುದು ದುರದೃಷ್ಟಕರ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ. ಸಿಪಿಐ(ಎಂ-ಎಲ್) ಕ್ರಿಮಿನಲ್‌ಗಳು ಈಗಾಗಲೇ ಸಿಪಿಐ(ಎಂ) ದರ್ಭಾಂಗ್ ಜಿಲ್ಲಾ ಸಮಿತಿ ಸದಸ್ಯ ಕಾಂ|| ಮಹೇಶ್ವರ ಸಿಂಗ್‌ರ ಹತ್ಯೆ ನಡೆಸಿದ್ದಾರೆ.

ತಂದೆಯ ದಿಟ್ಟತನವನ್ನೆಂದೂ ಮಣ್ಣು ಮಾಡೆವು.....

ನವದೆಹಲಿ: ನಮ್ಮ ಪ್ರೀತಿಯ ತಂದೆಯ ಅಸ್ಥಿಗಳನ್ನು ಕೆಲವು ದಿನಗಳ ಹಿಂದೆಯಷ್ಟೆ ಮಣ್ಣು ಮಾಡಿದೆವು. ಆದರೆ ಅನ್ಯಾಯದ ವಿರುದ್ಧ ಆತ ಪ್ರದರ್ಶಿಸಿದ ದಿಟ್ಟತನವನ್ನು ಎಂದಿಗೂ ಮಣ್ಣು ಮಾಡೆವು.

ಗಡಿಯ ರೇಖೆಗಳ ಮಿತಿಗಳನ್ನು ಮುರಿದು ಹಲವು ರಾಷ್ಟ್ರಗಳಲ್ಲಿನ ಶೋಷಿತರ ಹೋರಾಟದಲ್ಲಿ ಪಾಲ್ಗೊಂಡು ಪ್ರಾಣ ತೆತ್ತ 'ಅಂತರ್ರಾಷ್ಟ್ರೀಯ' ಕಮ್ಯುನಿಸ್ಟ್ ಕ್ರಾಂತಿಕಾರಿ ಅರ್ನೆಸ್ಟೋ ಚೆಗುವಾರನ ಮಗಳು ಅಲೈಡಾ ಗುವಾರ ಅಕ್ಟೋಬರ್ 26 ರ ಸಂಜೆ ಇಲ್ಲಿ ನಡೆದ ವಿಶಿಷ್ಟ ಸಭೆಯಲ್ಲಿ ಉದ್ಗರಿಸಿದ್ದು ಹೀಗೆ.

ಅಮೆರಿಕೆಯ ಗುಪ್ತಚರ ಸಂಸ್ಥೆ ಸಿಐಎ ನೀಡಿದ್ದ ಸುಳಿವಿನ ಮೇರೆಗೆ ಬೊಲಿವಿಯಾದ ಸೈನಿಕ ಪಡೆಗಳು ಚೆ ಮತ್ತು ಆತನ ಕ್ರಾಂತಿಕಾರಿ ಸಂಗಾತಿಗಳನ್ನು ಬೇಟೆಯಾಡಿ ಹತ್ಯೆ ಮಾಡಿ ಇಂದಿಗೆ ಮೂವತ್ತು ವರ್ಷಗಳು.

ಭಾರತ-ಕ್ಯೂಬಾ ಸೌಹಾರ್ದತಾ ಸಮಿತಿ ದೆಹಲಿಯ ವಿಠ್ಠಲಬಾಯಿ ಪಟೇಲ್ ಸದನದ ಹುಲ್ಲು ಹಾಸಿನ ಮೇಲೆ ಏರ್ಪಡಿಸಿದ್ದ ಈ ಸಭೆಗೆ ಕ್ಯೂಬಾದಲ್ಲಿ ನೆಲೆಸಿರುವ ಚೆಗುವಾರರ ಪುತ್ರಿ ಅಲೈಡಾ ಆಗಮಿಸಿದ್ದರು.

39 ವರ್ಷಗಳ ತಾರುಣ್ಯದಲ್ಲೇ ಚೆ ಹುತಾತ್ಮನಾದಾಗ ಅಲೈಡಾಗೆ ಎಳೆಯ ವಯಸ್ಸು. ತಂದೆಯ ಬಗೆಗೆ ಭಾರತ ನೆಲದಲ್ಲಿ ವ್ಯಕ್ತಗೊಂಡ ಪ್ರೇಮ ಶ್ರದ್ಧೆಗಳನ್ನು ಕಂಡು ಆಕೆಯ ಕೊರಳ ಸೆರ ಉಬ್ಬಿ ಬಂದಿತ್ತು. ಸ್ಪಾನಿಷ್ ಭಾಷೆಯಲ್ಲೇ ಮಾತನಾಡಿದ ಅಲೈಡಾ ಭಾರತೀಯರಿಗೆ ಧನ್ಯವಾದ ಹೇಳಲು ತಮ್ಮ ಬಳಿ ಶಬ್ದಗಳಿಲ್ಲ ಎಂದರು.



ತಂದೆ ಚೆ ಗುವಾರ ಜೀವನವನ್ನು, ಮರ್ಯಾದೆಯುತ ಜೀವನವನ್ನು ಅತ್ಯಧಿಕವಾಗಿ ಪ್ರೀತಿಸಿದ. ಶೋಷಿತರಿಗೆ ಅಂತಹ ಜೀವನವನ್ನು ಗಳಿಸಿಕೊಡಲು ಪ್ರಾಣ ತೆತ್ತ ಆತ ಒಬ್ಬ ವಿಶೇಷ ಮತ್ತು ಸಂಪೂರ್ಣ ವ್ಯಕ್ತಿ ಎಂದು ಆಕೆ ಬಣ್ಣಿಸಿದರು.

ಪಂಜಾಬಿನ ರೈತರಿಬ್ಬರು ನೀಡಿದ, ತಾವು ಬೆಳೆದ ಬಾಸ್‌ಮತಿ ಅಕ್ಕಿಯ ಉಡುಗೊರೆಯನ್ನು ಅಲೈಡಾ ಬಹು ಅಮೂಲ್ಯವಂತೆ ಸ್ವೀಕರಿಸಿ ಜತನ ಮಾಡಿದರು.

ಜ್ವಾಲೆಯಲ್ಲಿ ಬರೆದ ಗೀತೆ

ಅಸ್ವಸ್ಥತೆಯಿಂದ ಬಳಲುತ್ತಿರುವ ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಅವರು ಕುಳಿತೇ ಆಡಿದ ಮಾತುಗಳನ್ನು ಸಭೆ ಎಲ್ಲೆಲ್ಲ ಕಿವಿಯಾಗಿ ಆಲಿಸಿತು. ಚೆಗುವಾರನ ಜೀವನವನ್ನು ಜ್ವಾಲೆಯಲ್ಲಿ ಬರೆದ ಗೀತೆ ಎಂದು ಸಿಂಗ್ ಬಣ್ಣಿಸಿದರು.

ಕಾಲ ನಂದಿಸಲಾಗದ ಜ್ವಾಲೆಯಿದು. ದೀನ ದರಿದ್ರರ, ದಮನಕ್ಕೊಳಗಾದ ಹೃದಯದಲ್ಲಿ ಧಗ ಧಗಿಸುವ ಜ್ವಾಲೆ. ಚೆ ಗುವಾರನ ಬಂದೂಕಿನ ಬೆಂಕಿಯ ಹಿಂದೆ ಶೋಷಿತರ ಬಗೆಗೆ ಕರುಣೆ ಇತ್ತು. ಕರುಣಾಜನಿತ ಹಿಂಸೆಯನ್ನು ಹಿಂಸೆಯೆಂದು ಕರೆಯಲಾಗದು ಎಂದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಹರಿಕಿಶನ್ ಸಿಂಗ್ ಸುರ್ಜಿತ್, ಕಾಂಗ್ರೆಸ್ ಸಂಸದ ದತ್ತಾ, ಸಿಪಿಐನ ಜಲಾಲುದ್ದೀನ್ ಅನ್ಸಾರಿ ಮುಂತಾದವರು ಮಾತನಾಡಿದರು.

ಸೌಜನ್ಯ: ಕನ್ನಡಪ್ರಭ

ಇಂಡೋನೇಶ್ಯಾದ ಕಾಡ್ಗಿಚ್ಚು - ಜಾಗತೀಕರಣದ ಮಬ್ಬು ಮತ್ತು ತಾಪ!!

ಇಂಡೋನೇಶ್ಯಾದಲ್ಲಿ ಕಳೆದ ಹಲವು ವಾರಗಳಿಂದ ಉರಿಯುತ್ತಿರುವ ಕಾಡ್ಗಿಚ್ಚು, ಇಂಡೋನೇಶ್ಯಾದ ಎಲ್ಲಾ ದ್ವೀಪಗಳಲ್ಲಿ ಮಾತ್ರವಲ್ಲ ನೆರೆಯ ಮಲೇಶ್ಯಾ ಹಾಗೂ ಸಿಂಗಾಪೂರ್‌ನಲ್ಲೂ ಭಾರೀ ಹಾನಿ ಉಂಟು ಮಾಡಿದೆ. ಇತ್ತೀಚಿನ ವರ್ಷಗಳಲ್ಲಿ ಇಡೀ ಪ್ರದೇಶದ ಹಲವು ದೇಶಗಳಲ್ಲಿ ಹಾನಿ ಮಾಡಿದ ದೊಡ್ಡ ಪರಿಸರ ದುರಂತ ಇದು. ಮಳೆ ಹಾಗೂ ಗಾಳಿಯು ದಿಕ್ಕಿನ ಬದಲಾವಣೆ ಯಿಂದ ಕಾಡ್ಗಿಚ್ಚಿನ ತಾಪ ಹಾಗೂ ಅದರಿಂದಾಗಿ ಕವಿದ ಮಬ್ಬು ಸ್ವಲ್ಪ ಕಡಿಮೆಯಾಗಿದ್ದರೂ ಇನ್ನೂ ಕಾಡ್ಗಿಚ್ಚಿನ ಪರಿಣಾಮಗಳು ಪೂರ್ಣ ನಿಂತಿಲ್ಲ. ಇಂಡೋನೇಶ್ಯಾ, ಮಲೇಶ್ಯಾ, ಸಿಂಗಾಪುರದ ಹಲವು ಭಾಗಗಳಲ್ಲಿ ವಾಯುಮಾಲಿನ್ಯ ಇನ್ನೂ ಅಪಾಯಕಾರಿ ಮಟ್ಟದಲ್ಲಿದೆ. ವಿಶ್ವಸಂಸ್ಥೆಯ ಪರಿಣತರು ಸೇರಿದಂತೆ ಇಂಡೋನೇಶ್ಯಾ, ಮಲೇಶ್ಯಾ ಮತ್ತು ಸಿಂಗಾಪೂರದ ತಜ್ಞರು ಈ ಪರಿಸರ ದುರಂತದ ಕಾರಣಗಳು, ಪರಿಹಾರ ಕ್ರಮ, ಪರಿಣಾಮಗಳ ಬಗ್ಗೆ ತುರ್ತು ಅಧ್ಯಯನ ನಡೆಸಿ, ಸರಕಾರಗಳಿಗೆ ಸಲಹೆ ನೀಡುತ್ತಿದ್ದಾರೆ.

ಪರಿಣತರ ಅಂದಾಜಿನ ಪ್ರಕಾರ ಈ ವರೆಗೆ 6 ರಿಂದ 8 ಲಕ್ಷ ಹೆಕ್ಟೇರು ಅರಣ್ಯ ಹಾಗೂ ಭೂಮಿ ಈ ಕಾಡ್ಗಿಚ್ಚಿನಿಂದ ನಾಶವಾಗಿದೆ. ಈಗಾಗಲೇ ಕಾಡ್ಗಿಚ್ಚಿನಿಂದ ಕವಿದಿರುವ ಮಬ್ಬಿನಿಂದಾಗಿ ಹಲವಾರು ಹಡಗುಗಳ ಡಿಕ್ಕಿ ಹಾಗೂ ಒಂದು ವಿಮಾನ ಅಪಘಾತ ಸಂಭವಿಸಿದೆ. ಕೆಲವರು ಕಾಡ್ಗಿಚ್ಚಿನ ಪರಿಣಾಮವಾದ ಆರೋಗ್ಯ ಸಮಸ್ಯೆಗಳಿಂದ ಸತ್ತಿದ್ದು, ಸಾವಿರಾರು ಜನ ರೋಗಗ್ರಸ್ತರಾಗಿದ್ದಾರೆ. ಕಾಡಿನ ಮೇಲೆ ಅವ ಲಂಬಿಸಿರುವ ಹಲವಾರು ಆದಿವಾಸಿಗಳು ಆಹಾರವಿಲ್ಲದೆ ಸತ್ತಿದ್ದಾರೆಂದು ವರದಿಯಾಗಿದೆ. 1983 ರಲ್ಲಿ ಇಂಡೋನೇಶ್ಯಾದ ಕಾಳಿಮಂತನ್ ದ್ವೀಪದಲ್ಲಿ ಆರಂಭವಾಗಿ 8 ತಿಂಗಳ ವರೆಗೆ ಉರಿದು, ಇಡೀ ಪ್ರದೇಶಕ್ಕೆ ಪರಿಣಾಮ ಬೀರಿದ ಕಾಡ್ಗಿಚ್ಚಿನ ಜತೆ ಈ ಬಾರಿಯ ದುರಂತವನ್ನು ಹೋಲಿಸಬಹುದು. 1983 ರ ಕಾಡ್ಗಿಚ್ಚಿನಿಂದ 35 ಲಕ್ಷ ಹೆಕ್ಟೇರು ಅರಣ್ಯ ಮತ್ತು ಭೂಮಿ ನಾಶವಾಗಿತ್ತು.

ಅತ್ಯಂತ ದುರಂತದ ಸಂಗತಿ ಎಂದರೆ, ಈ ಕಾಡ್ಗಿಚ್ಚು ಪ್ರಾಕೃತಿಕ ದುರಂತವಲ್ಲ - ಮನುಷ್ಯ ನಿರ್ಮಿತ ದುರಂತ. ಪ್ಲಾಂಟೇಶನ್ ಮತ್ತು ಮರಮಟ್ಟಿನ ವ್ಯಾಪಾರ ಮಾಡುವ ಕಂಪನಿಗಳು ಈ ಕಾಡ್ಗಿಚ್ಚು ಆರಂಭಿಸಿದ್ದು ಎಂದು ತಿಳಿದುಬಂದಿದೆ. ಇಂಡೋನೇಶ್ಯಾದ ಸರ್ಕಾರ ಈ ಬಗ್ಗೆ ನೇರವಾಗಿ ಒಪ್ಪಿಕೊಂಡಿರದಿದ್ದರೂ 29 ಖಾಸಗಿ ಕಂಪನಿಗಳಿಗೆ ಕೊಟ್ಟಿರುವ 150 ಕ್ಕೂ ಹೆಚ್ಚು ಪರ್ಮಿಟ್ಟುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ. ಇದಕ್ಕಿಂತ ಮೊದಲು ಈ ಕಂಪನಿಗಳು ಆರಂಭಿಸಿದ ಕಾಡ್ಗಿಚ್ಚನ್ನು ಅಕ್ಟೋಬರ್ 2ರೊಳಗೆ ಆರಿಸದಿದ್ದರೆ ಪರ್ಮಿಟ್ಟುಗಳನ್ನು ವಾಪಸು ತೆಗೆದುಕೊಳ್ಳುವುದಾಗಿ ಎಚ್ಚರಿಸಿತ್ತು. ಈ ಕಂಪನಿಗಳು ಈ ಅಪಾಯಕಾರಿ ಕೆಲಸಕ್ಕೆ ಇಳಿದಿರುವುದು, ತಾಳೆ ಎಣ್ಣೆ ಪ್ಲಾಂಟೇಶನ್‌ನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಲು ಜಾಗ ಒದಗಿಸುವುದು ಮುಖ್ಯ ಕಾರಣ ಎನ್ನಲಾಗಿದೆ. ಕಾಡ್ಗಿಚ್ಚು ಆರಂಭಿಸಿ, ಕಾಡ್ಗಿಚ್ಚು ಕಾಡುಗಳನ್ನು ಸುಟ್ಟುಹಾಕುವಂತೆ ಮಾಡುವುದು ಭೂಮಿ ಒದಗಿಸುವ ಶೀಘ್ರ ಹಾಗೂ ಕನಿಷ್ಠ ವೆಚ್ಚದ ವಿಧಾನವಂತೆ!

ಇಲ್ಲೆ ಬರುವುದು ಜಾಗತೀಕರಣದ ಛಾಯೆ-ಈ ಪರಿಸರ ದುರಂತದ ಮುಖ್ಯ ಕಾರಣವಾಗಿ, ಜಾಗತೀಕರಣದ ಮಾದರಿಯ ಬೆಳವಣಿಗೆ ಅನುಸರಿಸುತ್ತಿರುವ ಇಂಡೋನೇಶ್ಯಾ 50 ಶತಕೋಟಿ ಡಾಲರುಗಳ ಸಾಲದ ಹೊರೆ ಹೊತ್ತಿದೆ. ಈ ಸಾಲ ಸ್ವಲ್ಪವಾದರೂ ತೀರಿಸಬೇಕಾದರೆ, ಇಂಡೋನೇಶ್ಯಾ ರಫ್ತು ಮಾಡಬೇಕು. ಇಂಡೋನೇಶ್ಯಾ ಕೈಗಾರಿಕೆಯಲ್ಲಿ ಪ್ರಬಲ ವಾಗಿಲ್ಲದಿರುವುದರಿಂದ, ಉಳಿಯುವುದು ಪ್ರಾಕೃತಿಕ, ಸರಕು ಉತ್ಪನ್ನಗಳಷ್ಟೇ. ತಾಳೆಎಣ್ಣೆ ಇಂಡೋನೇಶ್ಯಾದ ಅತಿದೊಡ್ಡ ರಫ್ತು ಸರಕು. ಎರಡನೇ ಅತಿದೊಡ್ಡ ರಫ್ತು ಮರಮಟ್ಟುಗಳು ಜಾಗತೀಕರಣದ ಸ್ವಾಭಾವಿಕ ದುಷ್ಪರಿಣಾಮವಾಗಿ, ಈ ರಫ್ತು ಹೆಚ್ಚಿಸಲು ಭಾರಿ ಒತ್ತು ಕೊಡಲಾಗುತ್ತದೆ. ಸರ್ಕಾರ ತಾಳೆಎಣ್ಣೆ ಉತ್ಪಾದನೆ ಹೆಚ್ಚಿಸಲು 2000 ದ ಹೊತ್ತಿಗೆ ತಾಳೆ ಎಣ್ಣೆ ತಯಾರಿಸುವ ಪ್ಲಾಂಟೇಶನ್‌ನ ವಿಸ್ತಾರವನ್ನು ಎರಡು ಪಟ್ಟುಗೊಳಿಸುವ ಯೋಜನೆ ಹಾಕಿದೆ. ತಾಳೆಎಣ್ಣೆ, ಮರಮಟ್ಟು ಅಲ್ಲದೆ ಇತರ ವಾಣಿಜ್ಯ ಬೆಳೆಗಳಿಗಾಗಿಯೂ ಭೂಮಿ ಒದಗಿಸುವುದು ಸರ್ಕಾರದ ನೀತಿಯೇ.

ಇದಲ್ಲದೆ ಪ್ಲಾಂಟೇಶನ್ ಕಂಪನಿಗಳಲ್ಲಿ, ಮರಮಟ್ಟು ವ್ಯಾಪರದಲ್ಲಿರುವ ಕಂಪನಿಗಳು ಹೆಚ್ಚಾಗಿ ಖಾಸಗಿ ಕಂಪನಿಗಳು. ಇದಲ್ಲದೆ ದೊಡ್ಡ ದೊಡ್ಡ ಕಂಪನಿಗಳು, ಸರ್ಕಾರಕ್ಕೆ ನಿಕಟವಾಗಿರುವ ಪ್ರಬಲ ವ್ಯಕ್ತಿಗಳ ಕೈಯಲ್ಲಿ (ಅಧ್ಯಕ್ಷ ಸುಹಾರ್ತೋರ ಕುಟುಂಬ ಸೇರಿದಂತೆ). ಕಾಡ್ಗಿಚ್ಚು ಆರಂಭವಾದ ಇಂಡೋನೇಶ್ಯಾದ ಕಾಳಿಮಂತನ್ ಎಂಬ ದ್ವೀಪದಲ್ಲಿ ಇರುವ ಆ ದೇಶದ ಅತಿದೊಡ್ಡ ಕಂಪನಿ ITCI(International Timber Corporation) 6 ಲಕ್ಷ ಹೆಕ್ಟೇರುಗಳ ಉತ್ತಮ ಅರಣ್ಯ ಭೂಮಿಯನ್ನು ಹೊಂದಿದೆ. ಈ ಕಂಪನಿ ಅಮೆರಿಕ ಕಂಪನಿ. ಇಂಡೋನೇಶ್ಯಾದ ಸೈನ್ಯದ ಜಂಟಿ ಒಡೆತನದ್ದು. ಅಮೆರಿಕನ್ ಕಂಪನಿಯಲ್ಲಿ ಸುಹಾರ್ತೋನ ಮಕ್ಕಳು ಹಾಗೂ 'ಬೊಾಚ್' ಎಂಬ ಸುಹಾರ್ತೋ ನಿಕಟವರ್ತಿಗಳು ಪ್ರಮುಖ ಪಾಲು ಹೊಂದಿದ್ದಾರೆ.

ಇದಲ್ಲದೆ ಡಚ್ ವಸಾಹತುಶಾಹಿ ಕಾಲದಲ್ಲಿ, ಜನಸಾಂದ್ರತೆ ಇದ್ದು ಜಾವಾ ದ್ವೀಪದಿಂದ ಇತರ ದ್ವೀಪಗಳಿಗೆ ಜನರನ್ನು ಬಲವಂತವಾಗಿ ಸ್ಥಳಾಂತರಿಸುವ ಪದ್ಧತಿ ಇತ್ತು. ಇಂಡೋನೇಶ್ಯಾ ಸ್ವತಂತ್ರವಾದ ನಂತರ, ಅಧ್ಯಕ್ಷ ಸುಕಾರ್ನೋರ ಆಡಳಿತ ಅವಧಿಯಲ್ಲಿ ಈ ಪದ್ಧತಿಯನ್ನು ನಿಲ್ಲಿಸಲಾಗಿತ್ತು. ಅಧ್ಯಕ್ಷ ಸುಹಾರ್ತೋರ ಆಡಳಿತಾವಧಿಯಲ್ಲಿ ಪುನಃ ಆರಂಭಿಸಲಾಯಿತು. 1994-99 ಯೋಜನಾವಧಿಯಲ್ಲಿ ಐದುವರೆ ಲಕ್ಷ ಜನರನ್ನು ಈ ರೀತಿ ಬಲವಂತವಾಗಿ ಸ್ಥಳಾಂತರಿಸುವ ಯೋಜನೆ ಇದೆ. ಈ ರೀತಿ ಸ್ಥಳಾಂತರಿಸುವ ಜನ ಸಹ, ಕಾಡು ಕಡಿದು ಕೃಷಿ ಅಥವಾ ಇತರೆ ಚಟುವಟಿಕೆಗಳಲ್ಲಿ ತೊಡಗುವುದು ಹೆಚ್ಚು. ಇಂತಹ ಸ್ಥಳಾಂತರಿಸುವ ಯೋಜನೆಗಳಲ್ಲಿ, ಕಾಡಿನಲ್ಲಿ ವಾಸಿಸುವ ಹಲವಾರು ಆದಿವಾಸಿಗಳು ತಮ್ಮ ಜೀವನ ಕ್ರಮ ಬದಲಾಯಿಸುವ ಒತ್ತಡವಿರುತ್ತದೆ. ಕಾಡಿನ ಉತ್ಪನ್ನಗಳ ಮೇಲೆ ಜೀವಿಸುವ ಆದಿವಾಸಿಗಳು ಕಾಡಿನ ಸ್ವಾಭಾವಿಕ ರಕ್ಷಕರು. ಇಂತಹ ಸ್ಥಳಾಂತರಿಸುವ ಯೋಜನೆಗಳು ವಿಶ್ವಬ್ಯಾಂಕ್‌ನ ನೆರವಿನಿಂದ ನಡೆಯುವವು.

ಇವೆಲ್ಲ ನೀತಿಗಳ ಫಲವಾಗಿ ಇಂಡೋನೇಶ್ಯಾದ 5.3 ಕೋಟಿ ಹೆಕ್ಟೇರ್ ವಿಸ್ತೀರ್ಣದ (ಏಶ್ಯಾದ ಅತಿದೊಡ್ಡ ಅರಣ್ಯ ಸಂಪತ್ತು) ಅರಣ್ಯದಲ್ಲಿ ಅರ್ಧದಷ್ಟು ಇಂತಹ ಕಂಪನಿಗಳ ನಿಯಂತ್ರಣದಲ್ಲಿದೆ.

ಈಗ ಒಪ್ಪುತ್ತೀರಾ? - ಇಂಡೋನೇಶ್ಯಾದ ಕಾಡ್ಗಿಚ್ಚು ಪ್ರಾಕೃತಿಕ ದುರಂತ ಅಲ್ಲ. ಜಾಗತೀಕರಣದ ನೀತಿಗಳು ಕಾಡ್ಗಿಚ್ಚಿಗೆ ನೇರ ಕಾರಣ. ಕಾಡ್ಗಿಚ್ಚಿನ ಮಬ್ಬು, ತಾಪ- ಜಾಗತೀಕರಣ ತಾಪ, ಮಬ್ಬುಗಳೇ!

ಲೋಕಸಂಚಾರ

ಅಮೆರಿಕದ ದಿಗ್ಬಂಧನ, ಪ್ರತಿಭಟನೆ ತಿರಸ್ಕರಿಸಿ ಮಂಡೇಲಾರ ಲಿಬ್ಯಾ ಭೇಟಿ

ಅಮೆರಿಕದ ದಿಗ್ಬಂಧನ, ಪ್ರತಿಭಟನೆ ತಿರಸ್ಕರಿಸಿ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಮಂಡೇಲಾರವರು, ಲಿಬ್ಯಾದ ರಾಜಧಾನಿ ಟ್ರಿಪೋಲಿಗೆ ಭೇಟಿನೀಡಿ ಆ ದೇಶದ ಅಧ್ಯಕ್ಷ ಮಹಮ್ಮದ್ ಗದ್ದಾಫಿಯವರನ್ನು ಭೇಟಿ ಮಾಡಿದರು. ಲಿಬ್ಯಾದ ವಿರುದ್ಧ ಅಮೆರಿಕದ ಹಠಮಾರಿತನದಿಂದ ವಿಶ್ವಸಂಸ್ಥೆ ಹೇರಿರುವ ವಿಮಾನಯಾನ ದಿಗ್ಬಂಧನವನ್ನು ತಪ್ಪಿಸಲು, ಮಂಡೆಲಾರವರು ಲಿಬ್ಯಾದ ನೆರೆಯ ಟ್ಯೂನಿಸಿಯಾದಿಂದ ಕಾರಿನಲ್ಲಿ ಟ್ರಿಪೋಲಿಗೆ ತೆರಳಿದರು.

ಅಮೆರಿಕ ಮಂಡೇಲಾರ ಲಿಬ್ಯಾ ಭೇಟಿಯನ್ನು ಟೀಕಿಸಿದ್ದನ್ನು, ತಿರಸ್ಕರಿಸಿ ಮಂಡೇಲಾರವರು ಯಾವುದೇ ದೇಶ ಇನ್ನೊಂದು ದೇಶ ಯಾರ ಜೊತೆ ಮಿತ್ರತ್ವ ಸಾಧಿಸಬೇಕೆಂಬುದರ ಬಗ್ಗೆ ಸಲಹೆಗಳನ್ನು ಹೊರಿಸಲಾಗದೆಂದು ಎಚ್ಚರಿಸಿದರು.

ನಾವು ಒಬ್ಬಂಟಿಯಾಗಿ ಹೋರಾಡುತ್ತಿದ್ದಾಗ, ಲಿಬ್ಯಾದ ಗದ್ದಾಫಿ ನಮ್ಮ ನೆರವಿಗೆ ಬಂದಿದ್ದರು. ಈಗ ನಮಗೆ ಸಲಹೆ ಕೊಡುವ ಅಮೆರಿಕ ಸರ್ಕಾರ ನಮ್ಮ ವೈರಿಗಳ (ವರ್ಣಭೇದ ಸರ್ಕಾರ) ಬೆಂಬಲಕ್ಕೆ ನಿಂತಿತ್ತು. ಆದ್ದರಿಂದ ನಮಗೆ ಯಾವುದೇ ಸಲಹೆ ನೀಡುವ ನೈತಿಕ ಹಕ್ಕು ಅವರಿಗಿಲ್ಲ ಎಂದು ಮಂಡೇಲಾ ಖಾರವಾಗಿ ಅಮೆರಿಕದ ಪ್ರತಿಭಟನೆ, ಉದ್ಧಟತನವನ್ನು ಖಂಡಿಸಿದ್ದಾರೆ.

ಲಿಬ್ಯಾದ ದಿಗ್ಬಂಧನ ಕೊನೆಗೊಳಿಸುವ ಮಾರ್ಗ ಕಂಡುಕೊಳ್ಳಬೇಕೆಂದು ಮಂಡೇಲಾರವರು ಹೇಳಿದ್ದಾರೆ. ಲಿಬ್ಯಾದ ದಿಗ್ಬಂಧನಕ್ಕೆ ಕಾರಣವಾದ ವಿಮಾನ ಬಾಂಬಿಂಗ್‌ನಲ್ಲಿ ಆಪಾದಿತರೆನ್ನಲಾದ ಇಬ್ಬರು ಲಿಬ್ಯನ್ನರನ್ನು ಮೂರನೇಯ ತಟಸ್ಥ ದೇಶದಲ್ಲಿ ವಿಚಾರಣೆಗೆ ಒಳಪಡಿಸುವುದು ಸರಿಯಾದ ಪರಿಹಾರ ಎಂದು OAU(ಆಫ್ರಿಕಾ ಐಕ್ಯತಾ ಒಕ್ಕೂಟ) ದ ನಿಲುವನ್ನು ಪುನರುಚ್ಚರಿಸಿದರು.

ಮಂಡೇಲಾರ ಲಿಬ್ಯಾ ಭೇಟಿ ಆಫ್ರಿಕಾದಲ್ಲಿ ವಿದ್ಯುತ್ ಸಂಚಾರ ಗೊಳಿಸಿದೆ. ಇದು ಆಫ್ರಿಕಾದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನಲ್ಲಿ ಸುದ್ದಿ ಮಾಡಿ ಅಮೆರಿಕದ ಮುಖಭಂಗಗೊಳಿಸಿದೆ.

ಮಂಡೇಲಾರವರು ಈಜಿಪ್ಟ್, ಟ್ಯೂನಿಸಿಯಾಗಳಿಗೆ ಲಿಬ್ಯಾದ ಮೊದಲು ಭೇಟಿ ನೀಡಿದ್ದರು. ಆಫ್ರಿಕಾದ ದೇಶಗಳ ನಡುವಿನ, ದೇಶಗಳ ಒಳಗಿನ ಹಲವಾರು ವಿವಾದಗಳಲ್ಲಿ, ರಾಜಿ ಪಂಚಾಯತಿಗೆ ಪ್ರಯತ್ನಿಸುತ್ತಿರುವುದು ಅವರ ಮುತ್ಸದ್ದಿತನದ ಪ್ರಭಾವವನ್ನು ಹೆಚ್ಚಿಸಿದೆ. ಆಫ್ರಿಕಾದ ಸಮಸ್ಯೆಗಳನ್ನು ಆಫ್ರಿಕನ್ನರೇ ಬಗೆಹರಿಸಿದರೆ, ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳು ಮೂಗು ತೂರಿಸುವುದು ಹೇಗೆ?

ಮಂಡೇಲಾರ ಈ ಲಿಬ್ಯಾ ಭೇಟಿ ಅಂತರ್ರಾಷ್ಟ್ರೀಯವಾಗಿ ಬಹಳ ಗಮನಾರ್ಹ ಮಹತ್ವದ ಘಟನೆ.

ಅಮೆರಿಕನ್ ಉಕ್ಕಿನ ಕಾರ್ಮಿಕರ ಹತ್ತು ತಿಂಗಳ ದೀರ್ಘ ಮುಷ್ಕರಕ್ಕೆ ಜಯ

ಅಮೆರಿಕದಲ್ಲಿ ಯುನೈಟೆಡ್ ಪಾರ್ಸೆಲ್ ಸರ್ವಿಸ್‌ನ ಕಾರ್ಮಿಕರ ಮುಷ್ಕರದ ಚಾರಿತ್ರಿಕ ವಿಜಯದ ನಂತರ, 'ವೀಲಿಂಗ್-ಪಿಟ್ಸ್‌ಬರ್ಗ್ ಸ್ಟೀಲ್ ಕಾರ್ಪೊರೇಶನ್' ನ ಕಾರ್ಮಿಕರ ಹತ್ತು ತಿಂಗಳ ದೀರ್ಘ ಮುಷ್ಕರಕ್ಕೆ ಸಿಕ್ಕಿದ ಜಯ ಕಾರ್ಮಿಕ ವರ್ಗದ ಹೊಸ ಆಕ್ರಾಮಕ ಧೋರಣೆಯನ್ನು ಸ್ಥಿರಪಡಿಸಿದೆ.

ಈ ಮುಷ್ಕರದಲ್ಲೂ ಸ್ಟೀಲ್ ಕಾರ್ಮಿಕರು ತಮ್ಮ ಎಲ್ಲಾ ಮುಖ್ಯ ಬೇಡಿಕೆಗಳನ್ನು ಗೆದ್ದುಕೊಂಡಿದ್ದಾರೆ. ಉಕ್ಕಿನ ಉದ್ಯಮದಲ್ಲಿ ಇತರ ಕಾರ್ಖಾನೆಗಳಲ್ಲಿರುವಂತೆ ಪೆನ್ಶನ್, ಎರಡು ಉಕ್ಕಿನ ಕಾರ್ಖಾನೆಗಳ ಮುಚ್ಚುವಿಕೆಗೆ ತಡೆ, ಮುಷ್ಕರದ ಅವಧಿಗೆ ಸಂಬಳ, ಕಾರ್ಮಿಕರ ಐಕ್ಯತೆ ಸಮರಶೀಲತೆ ಒಡೆಯುತ್ತಿದ್ದ ಕಂಪನಿಯ ಲೇಬರ್ ಮ್ಯಾನೇಜ್‌ಮೆಂಟ್ ಸ್ಕೀಮ್ ಮತ್ತು 'ಕೋ-ಆಪರೇಟಿವ್ ಪಾರ್ಟ್‌ನರ್‌ಶಿಪ್ ಅಗ್ರಿಮೆಂಟ್'ಗಳ ವಜಾ - ಇವು ಕಾರ್ಮಿಕರು ಗೆದ್ದಿರುವ ಪ್ರಮುಖ ಬೇಡಿಕೆಗಳು.

ಈ ಮುಷ್ಕರ ಯುಪಿಎಸ್ ಮುಷ್ಕರದಂತೆ ಬದಲಾಗುತ್ತಿರುವ ಕಾರ್ಮಿಕ ಚಳುವಳಿಯಲ್ಲಿ ಇನ್ನೊಂದು ಮೈಲಿಗಲ್ಲು. ಈ ಮುಷ್ಕರದಲ್ಲಿ ಕಾರ್ಮಿಕರ ಐಕ್ಯತೆ ಹೇಗಿತ್ತೆಂದರೆ ಒಬ್ಬ ಮುಷ್ಕರದ ಪಿಕೆಟ್‌ಲೈನ್ ದಾಟಿ ಮುಷ್ಕರ ಮುರಿಯುವ ಮ್ಯಾನೇಜ್‌ಮೆಂಟ್ ಯತ್ನದಲ್ಲಿ ಸಹಕರಿಸಲಿಲ್ಲ ಎಂಬುದು ಗಮನಾರ್ಹ. ಪತ್ರಿಕೆ, ಟಿ.ವಿ.,ಚರ್ಚು, ಜಾಹೀರಾತು, ಬೆದರಿಕೆಗಳ ಮೂಲಕ ಮುಷ್ಕರ ಮುರಿಯುವ ಕಂಪನಿಯ ಪ್ರಯತ್ನ ಯಾವ ಫಲವೂ ಕೊಡಲಿಲ್ಲ. ಅದರ ಬದಲಾಗಿ ಕಾರ್ಮಿಕರು ತಮ್ಮ ರಾಷ್ಟ್ರವ್ಯಾಪಿ ಯೂನಿಯನ್ ಜಾಲದ ಬೆಂಬಲದಿಂದ ಕಂಪನಿ ಮೇಲೆ ಒತ್ತಡ ಹೇರಿದರು. ರೇಡಿಯೋ, ಟಿ.ವಿ., ಪತ್ರಿಕೆಗಳಲ್ಲಿ ಪತ್ರಗಳ ಸುರಿಮಳೆಗೈದರು. ಭಾರೀ ಸೌಹಾರ್ದ ರ‍್ಯಾಲಿಗಳನ್ನು ಸಂಘಟಿಸಿದರು. W-P ಸ್ಟೀಲ್ ಕಾರ್ಪೊರೇಷನ್‌ನಲ್ಲಿ ಬಂಡವಾಳ ಹೂಡಿರುವ ಮೆಲೊನ್ ಬ್ಯಾಂಕ್‌ನ ಮೇಲೆ ಒತ್ತಡ ಹೇರಲು, ಪೆನ್‌ಸಿಲ್ವೇನಿಯಾ ರಾಜ್ಯದ ಪ್ರಸ್ತುತ ಹಾಗೂ ನಿವೃತ್ತ 1.8 ಲಕ್ಷ ಕಾರ್ಮಿಕರು ತಮ್ಮ ಅಕೌಂಟ್ ವಾಪಸು ತೆಗೆದುಕೊಳ್ಳುವ ಬೆದರಿಕೆ ಹಾಕಿದರು. ಅಲ್ಲದೆ ತಮಗೆ ಪ್ರಭಾವ ಇರುವ ಚರ್ಚು ಇತರೆ ಸಮೂಹ ಸಂಸ್ಥೆಗಳು ಮೆಲೊನ್ ಬ್ಯಾಂಕ್‌ನ ಮೇಲೆ ಇಂತಹುದೇ ಕ್ರಮ ಕೈಗೊಳ್ಳುವಂತೆ ಮಾಡುವುದಾಗಿ ಬೆದರಿಸಿದರು. ಇದೇ ರೀತಿ ಕಂಪನಿಯ ಬಂಡವಾಳ ಹೂಡಿರುವ ಮೆರಿಟ್-ಲಿಂಚ್ ಎಂಬ ಹಣಕಾಸು ಕಂಪನಿಯನ್ನು ಬೆದರಿಸಲಾಯಿತು.

ಈ ಮುಷ್ಕರದ ನಂತರ ಅಮೆರಿಕದ ಕಾರ್ಮಿಕ ವರ್ಗ ಟ್ರೇಡ್‌ಯೂನಿಯನ್‌ಗಳು ದೈತ್ಯ ಕಂಪನಿಗಳ ಜತೆ ಸಮಸಮವಾಗಿ ಹೋರಾಡಲು ಆರಂಭಿಸಿದ್ದಾರೆ. ಈವರೆಗಿದ್ದ ವಿಷಯ ಸೆಣಸಾಟ, ಸಮಬಲ ಹೋರಾಟಕ್ಕೆ ದಾರಿ ಮಾಡಿಕೊಟ್ಟಿದೆ. ಕಾರ್ಮಿಕ ವರ್ಗ ಈಗ ತನ್ನ ಉಳಿವಿನ ಹೋರಾಟದಿಂದ ಹೊರಬಂದು, ತನ್ನ ಬಾಳಿನ ಮಟ್ಟ ಉತ್ತಮಗೊಳಿಸುವ ಹೋರಾಟಕ್ಕೆ ಆತ್ಮವಿಶ್ವಾಸದಿಂದ ಇಳಿದಿದೆ.

..............ಕಾರ್ಮಿಕ ಚಳುವಳಿಯ ಮೇಲೆ ಏಕೆ ಹರಿಹಾಯ್ದಿದ್ದಾರೆ?

ಪುಟ 1 ರಿಂದ

ಯನ್ನು ಒಡೆಯುವ ಉದ್ದೇಶದಿಂದ ಎಐಟಿಯುಸಿಯನ್ನು ಒಡೆದು ಐಎನ್‌ಟಿಯುಸಿ ಯನ್ನು ಸ್ಥಾಪಿಸಿತು. ಕಾರ್ಮಿಕ ವರ್ಗದ ಐಕ್ಯತೆಯನ್ನು ಒಡೆಯುವ ಆ ಸಮಾರಂಭದಲ್ಲಿ ಜವಹರಲಾಲ್ ನೆಹರು, ಸರ್ದಾರ್ ವಲ್ಲಭ ಬಾಯಿ ಪಟೇಲರೇ ಮೊದಲಾದ ಕಾಂಗ್ರೆಸ್ ಮುಖಂಡರಲ್ಲದೇ ಜೆ.ಎಚ್.ಪಟೇಲರ ಗುರು ರಾಮ ಮನೋಹರ ಲೋಹಿಯರವರೂ ಇದ್ದರು ಎಂಬುದು ಪಟೇಲರಿಗೂ ಗೊತ್ತಿರಬೇಕು.

ಕಾರ್ಮಿಕ ವರ್ಗದ ಐಕ್ಯತೆಯನ್ನು ಮತ್ತೂ ಒಡೆಯುವ ನಿಟ್ಟಿನಲ್ಲಿ ಜನತಾದಳದ ಕಾರ್ಮಿಕ ವಿಭಾಗವನ್ನು ಸಂಘಟಿಸುವುದು ಇನ್ನೊಂದು ಹೆಜ್ಜೆಯೇ? ಹಿಂದ್ ಮಜ್ದೂರ್ ಸಭಾ(ಎಚ್‌ಎಂಎಸ್) ದ ಮುಖಂಡರು ಜನತಾದಳದ ಕಾರ್ಯಕರ್ತರು ಆಗಿರಲಿಲ್ಲವೇ? ಅವರೆಲ್ಲಾ ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ, ಜಾರ್ಜ್ ಫರ್ನಾಂಡೀಸ್‌ರ ಸಮತಾ ಪಕ್ಷದ ಜತೆ ಹೋಗಿ ಬಿಟ್ಟರೇ? ಅದಕ್ಕೆಂದು ಈ ಪ್ರಯತ್ನವೇ?

ಜನತಾದಳದವರು ಕಾರ್ಮಿಕರನ್ನು ಸಂಘಟಿಸುವುದರಲ್ಲಿ ಯಾರ ಆಕ್ಷೇಪವೂ ಇರಲಾರದು. ಆದರೆ ಐ.ಎನ್.ಟಿ.ಯು.ಸಿ ಯನ್ನು ಸ್ಥಾಪಿಸುವಾಗ ಆಳುವ ವರ್ಗಗಳ ರಾಜಕೀಯ ಪಕ್ಷದ - ಎಂದರೆ ಆಗ ಕಾಂಗ್ರೆಸ್ಸಿನ ಸರ್ಕಾರದ ಕಾರ್ಮಿಕ ನೀತಿಯನ್ನು ಒಪ್ಪುವ ಒಂದು ಕಾರ್ಮಿಕ ಸಂಘಟನೆ ಬೇಕೆಂದು ಹೇಳಲಾಗಿದ್ದಿತು.

ಈಗ ಕರ್ನಾಟಕದಲ್ಲಿ ಜನತಾದಳವನ್ನು, ಅದರ ಸರ್ಕಾರವನ್ನು ಬೆಂಬಲಿಸುವ ಒಂದು ಕಾರ್ಮಿಕ ಸಂಘಟನೆ ಬೇಕೆಂದು ಈ ಪ್ರಯತ್ನವೇ? ರಾಜ್ಯ ಸರ್ಕಾರದ ಕೈಯಲ್ಲಿ ಪೋಲೀಸಿದೆ, ಅಧಿಕಾರವಿದೆ, ಅದನ್ನು ಉಪಯೋಗಿಸಿ ಮುಷ್ಕರ ಮಾಡುವ, ತಮ್ಮ ನ್ಯಾಯಯುತವಾದ ಬೇಡಿಕೆಗಳಿಗಾಗಿ ಹೋರಾಡುವ ಕಾರ್ಮಿಕರನ್ನು ಸದೆಬಡಿಯಲು ಅದಕ್ಕೆಂದೇ ಇರುವ ರೌಡಿಗಳನ್ನು, ಪೋಲೀಸರನ್ನು ಉಪಯೋಗಿಸಿ ಕಾರ್ಮಿಕರನ್ನು ಗುಂಡಿಟ್ಟು ಸಾಯಿಸುವ, ಬಂಡವಾಳಗಾರರ ಸೇವೆ ಮಾಡುವ ಹುನ್ನಾರವೇ? ಹಾಗೆ ಮಾಡಿದರೆ ಜನತಾದಳದ ಕಾರ್ಮಿಕ ವಿಭಾಗ ಬೆಳೆಯುವುದೇ?

ಜನತಾದಳದ ಈಗಿನ ಆಡಳಿತದ ವೈಖರಿಯನ್ನು ಮೆಚ್ಚಿ ಯಾವುದಾದರೂ ಕಾರ್ಮಿಕ ಸಂಘಟನೆ ಅದನ್ನು ಬೆಂಬಲಿಸುವುದೇ? ಖಂಡಿತ ಬೆಂಬಲಿಸಲಾರದು.

ಜನತಾದಳವು 1989 ರ ಚುನಾವಣೆಯಲ್ಲಿ ಆರು ವರ್ಷಗಳ ಆಡಳಿತದ ನಂತರ ಸೋತು ಹೋಗಲಿಲ್ಲವೇ?

1991 ರ ಜೂನ್ ನಂತರ ಪಿ.ವಿ.ನರಸಿಂಹರಾಯರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಅನುಸರಿಸುತ್ತಾ ಬಂದ ಜನ ವಿರೋಧಿ, ದೇಶದ್ರೋಹಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳ ವಿರುದ್ಧವಾಗಿ, ಜನರ ಐಕ್ಯತೆಯನ್ನು ಒಡೆಯುವ ಕೋಮುವಾದದ ವಿರುದ್ಧವಾಗಿ ನಾಲ್ಕು ಅಖಿಲ ಭಾರತ ಮುಷ್ಕರಗಳನ್ನು, ವಿವಿಧ ಸ್ವರೂಪದ ಹೋರಾಟಗಳನ್ನು ಭಾರತದ ಕಾರ್ಮಿಕ ವರ್ಗವು ನಡೆಸಿದುದು 1994 ರ ನವೆಂಬರ್‌ನಲ್ಲಿ ಕರ್ನಾಟಕ ವಿಧಾನ ಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ ಜನತಾದಳವು ಅಧಿಕಾರಕ್ಕೆ ಬರಲು ಸಹಾಯ ಮಾಡಿತು. ಅಂತೆಯೇ 1996 ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರದಿಂದ ಕೆಳಗಿಳಿಸಿ ಸಂಯುಕ್ತ ರಂಗ ಅಧಿಕಾರಕ್ಕೆ ಬರಲು ಸಹಾಯ ಮಾಡಿತು.

1999 ರಲ್ಲಿ ಕರ್ನಾಟಕ ವಿಧಾನ ಸಭೆಗೆ ಚುನಾವಣೆ ನಡೆಯಬೇಕು. ಅದಕ್ಕಿಂತಲೂ ಮುನ್ನ ಲೋಕಸಭಾ ಚುನಾವಣೆಯು ನಡೆಯಬಹುದು. ಆ ಚುನಾವಣೆಗಳಲ್ಲಿ ಎಡ ಮತ್ತು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ವಿಜಯವನ್ನು ಸಾಧಿಸಿ ಅಧಿಕಾರಕ್ಕೆ ಬರಬೇಕು.

ಜನತಾದಳವು ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಒಂದು ಭಾಗ. ಆದರೆ ಇಂದು ಜನತಾದಳದ ಪರಿಸ್ಥಿತಿ ಹೇಗಿದೆ? 1996 ರ ಜೂನ್ ನಂತರದ ರಾಮಕೃಷ್ಣ ಹೆಗಡೆಯವರ ಉಚ್ಚಾಟನೆಯಾಗಿ ಕೆಲವರು ಅವರೊಂದಿಗೆ ಹೋಗಿ ಈಗ ಅದು 'ಲೋಕಶಕ್ತಿ' ಎಂಬ ರಾಜಕೀಯ ಪಕ್ಷವಾಗಿ ಅಷ್ಟರ ಮಟ್ಟಿಗೆ ಜನತಾದಳವು ದುರ್ಬಲವಾಯಿತು. ಮೇವಿನ ಹಗರಣದಲ್ಲಿ ಸಿಲುಕಿರುವ ಬಿಹಾರದ ಲಾಲೂ ಪ್ರಸಾದ್ ಯಾದವ್ ಜನತಾದಳದಿಂದ ಸಿಡಿದು ಹೋಗಿ ರಾಷ್ಟ್ರೀಯ ಜನತಾದಳದ ರಚನೆಯಾಯಿತು. ಜನತಾದಳವು ಮತ್ತೂ ದುರ್ಬಲವಾಯಿತು. ಒರಿಸ್ಸಾದಲ್ಲಿ ಜನತಾದಳವು ಮೂರು ಹೋಳಾಗಿದೆ. ಜನತಾದಳದ ಈ ದುರ್ಬಲ ಪರಿಸ್ಥಿತಿಯು ತಲೆ ಹೊಕ್ಕು ಜೆ.ಎಚ್.ಪಟೇಲರು ಕಾರ್ಮಿಕ ಸಂಘಗಳಲ್ಲಿರುವ ಕಮ್ಯುನಿಸ್ಟರ ಮೇಲೆ ಹರಿಹಾಯ್ದಿದ್ದಾರೆಯೇ?

ಕೃಷಿ ಕೂಲಿಕಾರರೂ ಸೇರಿದಂತೆ ಕೂಲಿ ಮಾಡಿ ನೌಕರಿ ಮಾಡಿ ಬದುಕುವ ದುಡಿಮೆಗಾರರ ಮತಗಳು ಕರ್ನಾಟಕದಲ್ಲಿ ಶೇ 35 ಕ್ಕಿಂತಲೂ ಹೆಚ್ಚಿದೆ. ಮುಖ್ಯಮಂತ್ರಿ ಜೆ.ಎಚ್.ಪಟೇಲರು ಮುಂದಿನ ಚುನಾವಣೆಯನ್ನು ಗಮನದಲ್ಲಿಟ್ಟು ಕಾರ್ಮಿಕ ವಿಭಾಗದ ವಿಚಾರ ಮಾಡುವುದಾದರೆ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಆಡಳಿತ ಯಂತ್ರ ಕ್ರಿಯಾಶೀಲವಾಗಬೇಕು, ಚುರುಕಾಗಬೇಕು. ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ, ಕಾರ್ಮಿಕ ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಶರವೇಗದಲ್ಲಿ ಭರ್ತಿ ಮಾಡಬೇಕು. ಕಾರ್ಮಿಕ ವಿವಾದಗಳನ್ನು ಮುತುವರ್ಜಿಯಿಂದ ಇತ್ಯರ್ಥಪಡಿಸಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.

ಕಾರ್ಮಿಕ ವರ್ಗಕ್ಕೆ ಶಾಂತಿ ಬೇಕು, ಅವರನ್ನು ಶೋಷಿಸುವವರು, ಸುಲಿಗೆ ಮಾಡುವವರು ಹಿಂಸಾಚಾರವನ್ನು ಎಸಗುವವರು ಹಾಗೂ ಎಸಗಿಸುವವರು ಬಂಡವಾಳಗಾರರು. ಇದನ್ನರಿತು ಪೋಲೀಸು ಇಲಾಖೆ ಗಮನ ಹರಿಸಬೇಕು. ಕೈಗಾರಿಕಾ ವಿವಾದಗಳಲ್ಲಿ ಪೋಲೀಸರು ಬಂಡವಾಳಗಾರರ ಪರವಾಗಿ ಮಧ್ಯಪ್ರವೇಶಿಸುವುದು ನಿಲ್ಲಬೇಕು. ಕರ್ನಾಟಕದಲ್ಲಿ ಜನತಾದಳದ ಭವಿಷ್ಯದ ಹಿತದೃಷ್ಟಿಯಿಂದ ಜೆ.ಎಚ್. ಪಟೇಲರು ಮೇಲಿನ ಸೂಚನೆ ಗಳನ್ನು ಕಾರ್ಯಗತಗೊಳಿಸುವುದು ಅತ್ಯಗತ್ಯ. ○

ಅಂದು ರಕ್ತತರ್ಪಣ..... ಇಂದು ಸ್ಮಾರಕದ ತೋರಣ...

ದಕ್ಷಿಣ ತ್ರಿಪುರಾದ ವೀರಚಂದ್ರಮಾನು ಎಂಬಲ್ಲಿ 56 ಅಡಿ ಎತ್ತರದ ಹುತಾತ್ಮರ ಸ್ಮಾರಕವೊಂದು ತಲೆಎತ್ತಿದೆ. ಅಕ್ಟೋಬರ್ 12 ರಂದು ಉದ್ಘಾಟನೆಯಾಯಿತು. ಸರಿಯಾಗಿ ಒಂಭತ್ತು ವರ್ಷಗಳ ಹಿಂದೆ ಕಾಂಗ್ರೆಸ್(ಐ) ನಾಯಕರು ಮತ್ತು ಕಾರ್ಯಕರ್ತರ ಭಯಾನಕ ಕೃತ್ಯಗಳಿಗೆ ಬಲಿಯಾದ ಸಿಪಿಐ(ಎಂ) ನ 11 ಸಂಗಾತಿಗಳ ಸ್ಮರಣಾರ್ಥ ಈ ಸ್ಮಾರಕವನ್ನು ನಿರ್ಮಿಸಲಾಗಿದೆ.

ಕಾಂಗ್ರೆಸ್(ಐ) ಸೃಷ್ಟಿಸಿದ್ದ ಭಯಾನಕ ವಾತಾವರಣದ ಮಧ್ಯೆ ಮುಚ್ಚಲಾಗಿದ್ದ ಪಕ್ಷದ ಸ್ಥಳೀಯ ಕಚೇರಿಯನ್ನು ಪುನಃ ತೆರೆಯುವ ಸಂಕೇತವಾಗಿ ಪಕ್ಷದ ಧ್ವಜವನ್ನು ಹಾರಿಸಲು ಧೈರ್ಯದಿಂದ ಮುನ್ನುಗ್ಗಿದ 11 ಸಂಗಾತಿಗಳನ್ನು ದುಷ್ಕರ್ಮಿಗಳು ಅಮಾನುಷವಾಗಿ ಕೊಂದು ಹಾಕಿದ್ದರು. ಆ ಧೀರ ಸಂಗಾತಿಗಳ ನೆನಪಿಗಾಗಿ, ಅವರು ಮಡಿದ ಸ್ಥಳದಲ್ಲೇ ಈ ಸ್ಮಾರಕ ನಿರ್ಮಾಣಗೊಂಡಿದೆ. 1988 ರ ಅಕ್ಟೋಬರ್ 12 ರಂದು 12 ಸಂಗಾತಿಗಳು ಹುತಾತ್ಮರಾಗಿದ್ದರು. ಇಬ್ಬರು ಭದ್ರತಾ ಸಿಬ್ಬಂದಿಗಳೂ ಬಲಿಯಾಗಿದ್ದರು.

ಸ್ಮಾರಕದ ಉದ್ಘಾಟನೆ ಅಂಗವಾಗಿ ನಡೆದ ಬೃಹತ್ ರ್‍ಯಾಲಿಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ಇದು ಅಭೂತಪೂರ್ವ ರ್‍ಯಾಲಿ ಆಗಿತ್ತು. ಸಿಪಿಐ(ಎಂ) ಸಭೆಗೆ ಈ ರೀತಿ ಜನರು ಉತ್ಸಾಹದಿಂದ ಬರುವುದು ಹೊಸದೇನೂ ಅಲ್ಲ. ಆದರೆ ಸ್ಮಾರಕದ ಉದ್ಘಾಟನೆ ಪ್ರಯುಕ್ತವೇ ಏರ್ಪಡಿಸಿದ ಕಾರ್ಯಕ್ರಮದಲ್ಲಿ ಇಷ್ಟೊಂದು ಹುರುಪಿನಿಂದ ಜನರು ಭಾಗವಹಿಸಿದ್ದು ತ್ರಿಪುರಾ ಮಾತ್ರವೇ ಅಲ್ಲ ಇಡೀ ಈಶಾನ್ಯ ಭಾರತದಲ್ಲೇ ಒಂದು ಅಪೂರ್ವ ದಾಖಲೆಯಾಗಿದೆ.

ಈ ರೀತಿಯ ಸ್ಮಾರಕ ಕೂಡ ಇಡೀ ಈಶಾನ್ಯ ಭಾರತದಲ್ಲೇ ಇದೇ ಪ್ರಥಮವಾದುದು. ಇದರ ನಿರ್ಮಾಣವೇ ಒಂದು ವೀರಗಾಥೆ ಆಗಿದೆ. ಇಡೀ ರಾಜ್ಯದ ಜನರು ಇದಕ್ಕಾಗಿ ತಮ್ಮ ದೇಣಿಗೆ ನೀಡಿದ್ದು ರಾಜ್ಯದ ಜನತೆಯ ನಾಡಿಮಿಡಿತದ ಸಾಕ್ಷಿಯಾಗಿ ಹುತಾತ್ಮ ಸ್ಮಾರಕ ನಿರ್ಮಾಣಗೊಂಡಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ॥ ಹರಿಕಿಷನ್ ಸಿಂಗ್ ಸುರ್ಜಿತ್ ಸ್ಮಾರಕವನ್ನು ಉದ್ಘಾಟಿಸಿದರು. ಗೌರವಾಂಜಲಿ ಅರ್ಪಿಸಿದ ಪಕ್ಷದ ಸಾವಿರಾರು ಕಾರ್ಯಕರ್ತರು ಮತ್ತು ಜನಸಾಮಾನ್ಯರು ಕೆಂಬಾವುಟದ ಮುನ್ನಡೆಯನ್ನು ಖಾತರಿಪಡಿಸುವ ಪ್ರತಿಜ್ಞೆ ತೊಟ್ಟರು. ಕೆಲವರ ಕಣ್ಣುಗಳು ನೀರಿನಿಂದ ಒದ್ದೆಯಾಗಿದ್ದವು.

ಕಾಂ॥ ಸುರ್ಜಿತ್ ಅವರನ್ನು ದಕ್ಷಿಣ ತ್ರಿಪುರಾದ ಉದಯಪುರದಿಂದ 200 ಕ್ಕೂ ಹೆಚ್ಚು ಕೆಂಬಾವುಟಧಾರಿ ಸ್ಕೂಟರ್ ಸವಾರರ ಬೆಂಗಾವಲಿನಲ್ಲಿ ಕರೆದುಕೊಂಡು ಬರಲಾಯಿತು. ಸುರ್ಜಿತ್ ಉಪಮುಖ್ಯಮಂತ್ರಿ ಬೈದ್ಯನಾಥ ಮುಜುಂದಾರ್ ಮೊದಲಾದ ಸಿಪಿಐ(ಎಂ) ಮುಖಂಡರುಳ್ಳ ತಂಡವನ್ನು ಸಾಪ್ಷಿದಾರು ಬುಡಕಟ್ಟು ಹಾಗೂ ಬುಡಕಟ್ಟೇತರ ಜನರು ಸ್ಫೂರ್ತಿಯ ಘೋಷಣೆಗಳನ್ನು ಕೂಗಿ ಬರಮಾಡಿಕೊಂಡರು. ಸ್ಮಾರಕದ ನಾಮಫಲಕವನ್ನು ಅನಾವರಣಗೊಳಿಸುವ ಮೂಲಕ ಕಾಂ॥ ಸುರ್ಜಿತ್ ಅದನ್ನು ಉದ್ಘಾಟಿಸಿದರು ಹಾಗೂ ಕೆಂಬಾವುಟವನ್ನು ಹಾರಿಸಿದರು.

ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯ ಕಾಂ॥ ಪ್ರಕಾಶ್ ಕಾರಟ್ 1994 ಅಕ್ಟೋಬರ್ 12 ರಂದು ಸ್ಮಾರಕಕ್ಕೆ ಶಿಲಾನ್ಯಾಸ ಮಾಡಿದ್ದರು. ಭವಿಷ್ಯದಲ್ಲಿ ಈ ಸ್ಮಾರಕದ ಸುತ್ತ ಮಕ್ಕಳ ಉದ್ಯಾನವನ, ಗ್ರಂಥಾಲಯ ಹಾಗೂ ಸಭಾಂಗಣಗಳನ್ನು ನಿರ್ಮಿಸಿ ಇದನ್ನು ಒಂದು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಆಲೋಚನೆಯಿದೆ.

ಮಕ್ಕಳಿಗೆ ಅರ್ಪಣೆ

ಹೊಸ ಜಗತ್ತಿನ ನಿರ್ಮಾಣಕ್ಕಾಗಿ ಮಕ್ಕಳಿಗೆ ಈ ಸ್ಮಾರಕವನ್ನು ಸಮರ್ಪಿಸಲಾಗಿದೆ.

ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಸುರ್ಜಿತ್, ಕೆಂಬಾವುಟದ ಮುನ್ನಡೆಯನ್ನು ತಡೆಯಲು ಇಳೆಯ ಮೇಲಿನ ಯಾವುದೇ ಶಕ್ತಿಗೆ ಸಾಧ್ಯವಿಲ್ಲ ಎಂದು ಘೋಷಿಸಿದರು. ಅದು ದುಡಿಯುವ ಜನಗಳ ಒಗ್ಗಟ್ಟಿನ ಧ್ವಜವಾಗಿದೆ ಎಂದವರು ಹೇಳಿದರು. ಕಾಂಗ್ರೆಸ್(ಐ) ಗೂಂಡಾಗಳು ನಿಶ್ಯಸ್ತ್ರ ಸಂಗಾತಿಗಳ ಕ್ರೂರ ಹತ್ಯೆ ಮಾಡಿದ್ದರಿಂದ ಸಿಪಿಐ(ಎಂ) ಜನತೆಯಿಂದ ಪ್ರತ್ಯೇಕವಾಗುವ ಬದಲು ಕಾಂಗ್ರೆಸ್ಸೇ ಜನರಿಂದ ಪ್ರತ್ಯೇಕಗೊಂಡಿದೆ. ಎಂದು ಸುರ್ಜಿತ್ ನುಡಿದರು.

ರಕ್ತತರ್ಪಣದಿಂದ ಬಲಗೊಂಡ ಒಗ್ಗಟ್ಟು

ವೀರಚಂದ್ರಮಾನುನಲ್ಲಿ ಬುಡಕಟ್ಟು ಹಾಗೂ ಬುಡಕಟ್ಟೇತರ ಸಂಗಾತಿಗಳ ರಕ್ತತರ್ಪಣದಿಂದ ತ್ರಿಪುರಾದಲ್ಲಿ ಜನಾಂಗೀಯ ಒಗ್ಗಟ್ಟು ಬಲಗೊಂಡಿದೆ ಎಂದು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಉಪಮುಖ್ಯಮಂತ್ರಿ ವೈದ್ಯನಾತ ಮಜುಂದಾರ್ ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಾಣಿಕ್ ಸರ್ಕಾರ್ ಕಾಂಗ್ರೆಸ್-ಟಿಯುಜೆಎಸ್ ಮೈತ್ರಿಕೂಟ ಸರಕಾರದ ಆಡಳಿತದ ಕರಾಳ ದಿನವನ್ನು ನೆನಪಿಸಿಕೊಂಡರು.

ರಾಜಕೀಯದಲ್ಲಿ ಶೋಷಿತರ ಅನುಭವ ಅಂತಿಮವೇ ಹೊರತು ಶೋಷಕರದ್ದಲ್ಲ ಎನ್ನುವುದಕ್ಕೆ ತ್ರಿಪುರಾದಲ್ಲಿ ಮೂರನೇ ಎಡರಂಗ ಸರಕಾರ ಸ್ಥಾಪನೆಯಾಗಿರುವುದು ಸಾಕ್ಷಿ ಎಂದು ಕಾಂ॥ ಸರ್ಕಾರ್ ಹೇಳಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಾದಲ್ ಚೌಧರಿ ಮತ್ತು 1988 ರ ಅಕ್ಟೋಬರ್ 12 ರ ಹತ್ಯಾಕಾಂಡದಲ್ಲಿ ಬದುಕುಳಿದ ಬೃಜಾಮೋಹನ್ ಜಮಾತಿಯಾ ಅವರೂ ಭಾಷಣ ಮಾಡಿದರು.



ಕಾಂಗ್ರೆಸ್(ಐ) ನಾಯಕರು ಮತ್ತು ಕಾರ್ಯಕರ್ತರ ಭಯಾನಕ ಕೃತ್ಯಗಳಿಗೆ ಬಲಿಯಾದ 11 ಸಂಗಾತಿಗಳ ಸ್ಮರಣಾರ್ಥದ ಹುತಾತ್ಮರ ಸ್ಮಾರಕ

ಅಣಕ — ಶರತ್ ಚಂದ್ರ

"ಹಗಲಲ್ಲಿ...................... ಮಾಡಿ ರಾತ್ರೀಲಿ ಗರತಿ ಥರ ಮಾತಾಡ್ತೀರಲ್ರಿ"

ಆವಾಗ ಆವಾಗ ಆಗುವಂತೆ ಚಿತ್ರಗುಪ್ತ ನನ್ನು ಕರೆದು ರೆಗ್ಯುಲರಾಗಿ ವರದಿ ಮಾಡದಿದ್ದರೆ, ವರದಿಗಾರ ಇದ್ದು ಏನು ಪ್ರಯೋಜನ ಎಂದು ಖಾರವಾಗಿ ಹೇಳಿದ್ದಕ್ಕೆ, ಚಿತ್ರಗುಪ್ತ ಬೊಂಬಾಟ್ ವರದಿ ಕಳಿಸಿದ್ದಾನೆ. ಭಾರಿ 'ಸ್ಕೋಪ್' ಬೇರೆ! ಈ ಬಾರಿ ಹೊಸ 'ಟೆಕ್ನಿಕ್' ಬೇರೆ ಬಳಸಿದ್ದಾನೆ. ಹಿಂದೆ ಟೇಬಲ್ ಕೆಳಗೆ, ಮರೆಯಲ್ಲಿ ನಿಂತು ಕೇಳುತ್ತಿದ್ದ ಚಿತ್ರಗುಪ್ತ 'ಟೆಲಿಫೋನ್ ಟ್ಯಾಪಿಂಗ್'ಗೆ ಇಳಿದಿದ್ದಾನೆ. ಲಕ್ನೋದಿಂದ ದಿಲ್ಲಿಗೆ ಮಾಡಿದ ಟೆಲಿಫೋನ್‌ನ ಟಾಪಿಂಗ್ ಇದು

"ಏನ್ರೀ! ಮಧ್ಯರಾತ್ರೀಲಿ ಏನ್ರಿ ನಿಮ್ಮ ಗೋಳು? ಕೊನೆಗೂ ಎಲ್ಲಾ ಸೆಟಲ್ ಆಯಿತಲ್ಲಾ ಅಂತ ಸುಖವಾಗಿ ನಿದ್ದೆ ಹೊಡಿತಿದೆ ಎಬ್ಬಿಸಿದ್ರಲ್ಲಾ"

"ಇನ್ನೂ ಏಳು ಜನ ಬಂದಿದ್ದಾರೆ ಸಾರ್, ಸೇರಾಕೆ"

ತಗೊಳ್ಳಿ! ಅದ್ಕೆ ನನ್ನನ್ನು ಯಾಕೆ ಮಧ್ಯರಾತ್ರೀಲಿ ಎಬ್ಬಿಸ್ಬೇಕು?"

"ಅದಕ್ಕಲ್ಲ ಸಾರ್ ನಾನು ಫೋನ್ ಮಾಡಿದ್ದು"

"ಮತ್ತೇನು? ಹೆಚ್ಚು ಕೇಳ್ತಾ ಇದ್ದಾರಾ. 50 ಸಾಲಲ್ಲ ಅಂದ್ರ ನೂರು ಕೊಡ್ರಿ"

"ಅದೂ ಮಾತಾಡಿ ವ್ಯವಸ್ಥೆ ಮಾಡಿದ್ದೀನಿ"

"ಮತ್ತೇನು? ಎಲ್ಲಾರೂ ಮಿನಿಸ್ಟ್ರು ಆಗ್ಬೇಕು ಅಂತಾರಾ? ಮಾಡ್ಬಿಡಿ"

"ಅದೂ ಪ್ರಾಮಿಸ್ ಮಾಡಿದ್ದೀನಿ, ಅದೂ ಅಲ್ಲ ಪ್ರಾಬ್ಲಮ್"

"ಮತ್ತೇನು? ಕ್ರಿಮಿನಲ್ ಕೇಸ್ ಇರೋವ್ರು ಅಂತಲಾ. ನಾವಾಗ್ಲೆ ಹೇಳ್ಲಿಲ್ವಾ, ನಾವೇನು ಟಿಕೆಟ್ ಕೊಡ್ಲಿಲ್ಲ, ನಮ್ಮದೇನು ತಪ್ಪು ಅಂತ"

"ಅದೂ ಸರಿ ಸಾರ್, ಆದ್ರೆ ಎಲ್ಲರೂ ಮರ್ಡರ್, ದರೋಡೆ, 420 ಕೇಸ್ ಇರ್‍ರೋವ್ರೆ ಪರ್ವಾಗಿಲ್ಲ"

"ಅಯ್ಯೋ! ಒಳ್ಳೆ ನೀವು 'ಹಗಲಲ್ಲಿ ಹಾದರ ಮಾಡಿ ರಾತ್ರೀಲಿ ಗರತಿ' ಥರಾ ಆಡ್ತೀರಲ್ಲ ನಿಮ್ಮ ಮೇಲೆ ಕ್ರಿಮಿನಲ್ ಕೇಸ್‌ಇಲ್ವಾ; ನೀವು ಮಸೀದಿ ಒಡೆದಿದ್ದಿರಾ, ಅವರು ಇನ್ನೇನೋ ಒಡೆದಿದ್ದಾರೆ ಅಷ್ಟೆ"

"ಬರೆ ಅಷ್ಟೇ ಆದ್ರೆ, ನಾನೇ ಡಿಸೈಡ್ ಮಾಡ್ಬಿಡ್ತಿದ್ದೆ, ನಿಮ್ಮನ್ನ ಎಬ್ಬಿಸ್ತಿರಲಿಲ್ಲ"

"ಇನ್ನೇನು ಬೇಗ ಒದರ್‍ರ್ಬಾರ್ದಾ?"

"93 ಖಾತೆ ಡಿಸೈಡ್ ಮಾಡೋದ್ರಲ್ಲೇ ಸುಸ್ತಾಗಿದ್ದೀನಿ. ಐಡಿಯಾನೇ ಬರ್‍ರ್ತಾ ಇಲ್ಲ. ನಾವು ನಾಲ್ಕೈದು ಜನ ತಲೆ ಕೆಡಿಸಿಕೊಂಡು ನಾಲ್ಕು ಖಾತೆ ಹುಡುಕಿದ್ದೀವಿ ಇನ್ನು ಮೂರು ತಲೆಕೆಳಗಾದ್ರು ಹೋಳೀತಿಲ್ಲ"

"ಹಂಗಾ...........?"

"ನಿಮ್ಮಂಥ ಧೀಮಂತ ನಾಯಕ್ರಿಗೆ ಏನಾದ್ರೂ ಹೊಳಿಬಹುದಾ ಅಂತ"

"ಊಂ...... ಕಾಶೀ ಮಸೀದಿ ನೋಡ್ಕೋಳಕ್ಕೆ ಯಾರಿಗಾದ್ರೂ ಖಾತೆ ಕೊಟ್ಟಿದ್ದೀರಾ"

"ಇಲ್ಲಾ ಸಾರ್, ಅಷ್ಟು ಹೇಗೆ ಓಪನ್ ಆಗಿ...."

"ಪುನಃ ಗರತಿ ಥರಾ ಮಾತಾಡ್ತೀರಲ್ಲ. ಸರಿ ಕಾಶೀ ಮಸೀದಿಗೊಬ್ಬ, ಮಥುರಾ ಮಸೀದಿಗೊಬ್ಬ ಹಾಕ್ಕೊಳ್ಳಿ, ಇನ್ನೊಂದು ತಾನೇ...ಊಂ...."

"ಅಂ...... ನಂಗೊಂದು ಐಡಿಯಾ ಹೊಳಿತು ಸಾರ್!! .. ಹೆಂಗಿದ್ರು ನಮ್ಮ ಮಿನಿಸ್ಟ್ರಿ ಸೈಜು ಗಿನ್ನಿಸ್ ದಾಖಲೆಯಲ್ಲಿ ಬರುತ್ತೆ ಅಂತ ಎಲ್ಲರೂ ರೇಗಿಸ್ತಾ ಇದ್ದಾರೆ. ನಮ್ಮ ಸಾಧನೆಯನ್ನು ಗಿನ್ನಿಸ್ ದಾಖಲೆಯಲ್ಲಿ ಬರೋ ಹಾಗೆ ನೋಡ್ಕೊಳಾಕೆ ಒಬ್ಬ ಮಿನಿಸ್ಟ್ರು ಮಾಡಿದ್ರಾಯ್ತು"

"ಸರಿ, ಆದರೆ ನಂಗೇನೋ ನಿದ್ದೆಗಣ್ಣಲ್ಲಿ ಗೊತ್ತಾಗ್ಲಿಲ್ಲ. ಇವೆಲ್ಲಾ ಫೋನ್‌ನಲ್ಲಿ ಮಾತಾಡೋದಾ, ಸಿಐಡಿಗಳು 'ಟ್ಯಾಪ್' ಮಾಡಿ ಕೇಳ್ತಾ ಇರ್‍ತಾರೆ. ನಾಳೆ ಪೇಪರಲ್ಲಿ ಹಾಕಿ ಬಿಟ್ರೆ....."

"ಅಯ್ಯೋ! ಕೇಳ್ಕೊಳ್ಲಿ ಬಿಡಿ!! ನೀವೂ ಹಗಲಲ್ಲಿ ..... ಮಾಡಿ ರಾತ್ರಿ ಗರತಿ ಥರಾ ಮಾತಾಡ್ತೀರಲ್ಲಾ!!!"

ಬೂರ್ಝ್ವಾ ಪಕ್ಷಗಳ ಅವನತಿ

ಉತ್ತರ ಪ್ರದೇಶ ಮತ್ತು ಗುಜರಾತ್‌ಗಳಲ್ಲಿ ಇತ್ತೀಚಿನ ಬೆಳವಣಿಗೆಗಳು ಬೂರ್ಝ್ವಾ ಪಕ್ಷಗಳು ಎಂತಹ ಅವನತಿಯ ಸ್ಥಿತಿಯನ್ನು ತಲುಪಿವೆ ಎಂಬುದನ್ನು ತೋರುತ್ತದೆ. ಪಕ್ಷಾಂತರ, ಪಕ್ಷಾಂತರಕ್ಕಾಗಿ ಪಿತೂರಿ, ಎಂಎಲ್‌ಎಗಳ ವ್ಯಾಪಾರ, ಇದಕ್ಕೆ ಹೇಯವಾಗಿ ಸಂಪಾದಿಸಿದ ಹಣದ ಬಳಕೆ, ಕ್ರೌರ್ಯ ಇವೆಲ್ಲ ಈ ಪಕ್ಷಗಳು ತಲುಪಿದ ಮಟ್ಟವನ್ನು ತೋರಿಸುತ್ತದೆ. ಉತ್ತರ ಪ್ರದೇಶದಲ್ಲಿ ಭಾಜಪ ಸಮಾಜವಾದಿ ಪಕ್ಷವೊಂದನ್ನು ಹೊರತುಪಡಿಸಿ (ಎಡಪಕ್ಷಗಳೂ ಇದರಿಂದ ಹೊರತೆಂಬುದನ್ನು ಬೇರೆ ಹೇಳಬೇಕಾಗಿಲ್ಲ) ಎಲ್ಲ ಪಕ್ಷಗಳಿಂದ ಪಕ್ಷಾಂತರ ಮಾಡಿಸಿದ್ದು ಆ ಪಕ್ಷಗಳ ತತ್ವ ಮತ್ತು ಸೈದ್ಧಾಂತಿಕ ದಿವಾಳಿತೋರತನವನ್ನು ತೋರಿಸುತ್ತದೆ. ಇವುಗಳೆಲ್ಲದರಲ್ಲಿ ಮುಖ್ಯವಾಗಿ ಎದ್ದು ಕಾಣುವುದು ಕಾಂಗ್ರೆಸ್ಸಿನ ಸೈದ್ಧಾಂತಿಕ ದಿವಾಳಿಖೋರತನ. ಕಾಂಗ್ರೆಸ್ಸಿನ ಕಾರ್ಯಕರ್ತರ ಅರಾಜಕೀಯಕರಣ ಎಂತಹ ಹಂತ ತಲುಪಿದೆಯೆಂದರೆ ಉತ್ತರ ಪ್ರದೇಶದ ಅದರ ಎಂಎಲ್‌ಎಗಳು ಮೂರನೇ ಎರಡರಷ್ಟು ಭಾಗ ಕಣ್ಣವೆ ಮುಚ್ಚಿ ತೆರೆಯುವುದರೊಳಗೆ ಭಾಜಪ ಸೇರಿದ್ದರು. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿನ ಕಾರ್ಯಕರ್ತರಾಗಲಿ, ನಾಯಕರಾಗಲಿ ಯಾವುದೇ ಒಂದು ತತ್ವಕ್ಕಾಗಿಯಾಗಲಿ, ಸಿದ್ಧಾಂತಕ್ಕಾಗಲಿ ಬದ್ಧರಾಗುವ ಲಕ್ಷಣವೇ ಇಲ್ಲವಾಗಿದೆ. ಕೋಮುವಾದ ಮತ್ತು ಜಾತ್ಯಾತೀತತೆಯ ನಡುವಿನ ವ್ಯತ್ಯಾಸವೇ ಕಾಣಿಸದಿರುವ ಆ ಪಕ್ಷದವರ ಸ್ಥಿತಿಯನ್ನು ಇನ್ನು ಹೇಗೆ ವರ್ಣಿಸಲಾದೀತು? ಅಂತಃಕಲಹ ಮತ್ತು ಗುಂಪುಗಾರಿಕೆ ಕಾಂಗ್ರೆಸ್ ಪಕ್ಷವನ್ನು ಯಾವುದೇ ಅರ್ಥಪೂರ್ಣ ರಾಜಕೀಯ ಮಧ್ಯಪ್ರವೇಶಕ್ಕೆ ಅರ್ಹವಲ್ಲದಷ್ಟು ನಿಶ್ಚಲಗೊಳಿಸಿರುವಂತಿದೆ.

ಇಂತಹ ಹಿನ್ನಲೆಯಲ್ಲಿ ಗುಜರಾತಿನಲ್ಲಿ ವಘೇಲಾ ಸರಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಳ್ಳುವ ಅದರ ನಿರ್ಧಾರ ಭಾಜಪಕ್ಕೆ ನೆರವಾಗುವಂತಹದ್ದು. ವಘೇಲರ ಒಪ್ಪುತಪ್ಪುಗಳನ್ನು ಮರೆಯಬೇಕೆಂದೇನಿಲ್ಲ. ಆದರೆ ಕೋಮುವಾದಿ ಶಕ್ತಿಗಳನ್ನು ಹಿಡಿತದಲ್ಲಿಡಬೇಕಾದ ಘನ ಉದ್ದೇಶವನ್ನು ಮರೆಯಬಾರದು.

ಉತ್ತರ ಪ್ರದೇಶದ ದುರಂತದ ನಂತರ ಕೋಮುವಾದಿ ಪಕ್ಷಗಳಿಗೆ ನೆರವಾಗುವ ದಿವಾಳಿಕೋರತನವನ್ನು ಕಾಂಗ್ರೆಸ್ ತಪ್ಪಿಸಿಕೊಳ್ಳಬೇಕು.

ಇಂದು ನಾವು ಕಾಣುತ್ತಿರುವುದು ಬೂರ್ಝ್ವಾ ಪಕ್ಷಗಳ ಅವನತಿಯನ್ನು. ಯಾವುದೇ ತತ್ವ, ಸಿದ್ಧಾಂತಗಳಿಗೆ ಬದ್ಧತೆಯಿಲ್ಲದ ರಾಜಕೀಯ ಇದು. ಇವುಗಳಿಗೆ ಇರುವ ಒಂದೇ ಒಂದು ಹೇತುವೆಂದರೆ ಹೇಗಾದರೂ ಮಾಡಿ ಅಧಿಕಾರ ಹಿಡಿಯುವುದು. ಹಿಡಿದ ಮೇಲೆ ಅಂಟಿಕೊಳ್ಳುವುದು. ಕಾಂಗ್ರೆಸ್ ಹಿಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾರತದ ಜನತೆ ನೀಡಿದ ತೀರ್ಪಿನಿಂದ ಪಾಠ ಕಲಿಯುವುದು ಒಳ್ಳೆಯದು.

– 'ಪೀಪಲ್ಸ್‌ಡೆಮಾಕ್ರಸಿ'ಯಲ್ಲಿನ ಸಂಪಾದಕೀಯ

ಪುಸ್ತಕ ಪರಿಚಯ

"ವಿಯೆಟ್ನಾಮ್-ಆನೆಯನ್ನು ಮಣಿಸಿದ ಮಿಡತೆಗಳು"

ಅನು: ಮೋಹನ್ ಕುಂಟಾರಿ, ಬೆಳ್ಳಿ ಚುಕ್ಕಿ ಪ್ರಕಾಶನ. 1997. ಬೆಲೆ ರೂ. 19/-

ವಿಯೆಟ್ನಾಮ್ ಒಂದು ಪುಟ್ಟದೇಶ. ಆದರೂ ಹೇರಳವಾದ ಖನಿಜ ಸಂಪತ್ತಿನಿಂದಲೂ, ಪ್ರಾಕೃತಿಕವಾದ ಇತರ ಸಂಪತ್ತಿನಿಂದಲೂ ತುಂಬಿದ ದೇಶ. ಆ ಕಾರಣದಿಂದಲೇ ಸಾವಿರ ವರ್ಷಗಳ ಹಿಂದೆಯೇ ಚೀನ ಆಕ್ರಮಿಸಬಯಸಿತ್ತು. ಆದರೆ ವಿಯಟ್ನಾಮ್ ಅವಿರತ ಹೋರಾಟಕ್ಕೆ ಸಿದ್ಧವಾಯಿತು. "ನಾವು ಎಲ್ಲವನ್ನೂ ತ್ಯಾಗ ಮಾಡಲು ಸಿದ್ಧರಿದ್ದೇವೆಯೇ ಹೊರತು ದೇಶವನ್ನು ಕಳೆದುಕೊಳ್ಳಲಾರೆವು. ಗುಲಾಮರಾಗ ಬಾರದೆಂದು ನಾವು ನಿರ್ಧರಿಸಿದ್ದೇವೆ" ಎಂಬುದು ವಿಯಟ್ನಾಮಿನ ಸ್ವಾತಂತ್ರ್ಯ ಶಿಲ್ಪಿ ಹೊಚಿಮಿನ್‌ನ ಮಾತು ಒಂದು ಆಕಸ್ಮಾತ್ ಆಗಿರದೆ ವಿಯಟ್ನಾಮಿನ ಚರಿತ್ರೆಯ ಅವಿಭಾಜ್ಯ ಧ್ವನಿಯಾಗಿತ್ತೆಂದು ತೋರುತ್ತದೆ.

ವಿಯಟ್ನಾಮ್ ಹಿಂದೆ ಹೊರ ಆಕ್ರಮಣದ ವಿರುದ್ಧ ಹೋರಾಟವನ್ನು ನಡೆಸುತ್ತಲೇ ಬಂದಂತೆ ಆಧುನಿಕ ಬಂಡವಾಳಶಾಹಿ ಕಾಲದಲ್ಲೂ ಅದು ನಿರಂತರ ಹೋರಾಟ ನಡೆಸಬೇಕಾಯಿತು. ಅಂತಿಮವಾಗಿ ಅದು ಫ್ರೆಂಚ್, ಅಮೇರಿಕಾದ ವಿರುದ್ಧ ಹೋರಾಡಲೇ ಬೇಕಾಯಿತು. ಜಗತ್ತಿನ ಅತ್ಯಂತ ಶ್ರೀಮಂತ ರಾಷ್ಟ್ರ, ವಿನಾಶಕವಾದ-ಶಸ್ತ್ರಾಸ್ತ್ರಗಳ ಗೋಡಾನಿನಂತಿರುವ ದೇಶ. ಅದರ ವಿರುದ್ಧ ತನ್ನ ಸ್ವಾತಂತ್ರ್ಯಕ್ಕಾಗಿ, ಜನ ಮುಕ್ತತೆಗಾಗಿ ಹೋರಾಡಬೇಕಾದ ಪುಟ್ಟ ದೇಶ ವಿಯೆಟ್ನಾಮ್. ಅಂತೆಯೇ ಈ ಯುದ್ಧದಲ್ಲಿಯ ಗೆಲುವನ್ನು "ಆನೆಯನ್ನು ಮಣಿಸಿದ ಮಿಡತೆಗಳು" ಎಂದು ಕರೆದದ್ದು ಸಾರ್ಥಕವಾಗಿದೆ.

ವಿಯೆಟ್ನಾಮ್‌ಗೆ ಹೊರಗಿನ ಶತ್ರು ಮಾತ್ರ ಇರಲಿಲ್ಲ. ಒಳಗಡೆಯೂ ಶತ್ರು ಇದ್ದರು. ಅವರೇ ರೈತ ಮತ್ತು ಕೂಲಿಗಳ ಸುಲಿಗೆ ಕೋರರಾದ ಜಮೀನ್ದಾರರು ಮತ್ತು ಬಂಡವಾಳಶಾಹಿಗಳು. ಸ್ವಾತಂತ್ರ್ಯವೆಂದರೆ ಕೇವಲ ಶ್ರೀಮಂತರ ಐಷಾರಾಮವಲ್ಲ. ಅದು ಬಡವರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಮೋಚನೆಯನ್ನು ಒದಗಿಸಿಕೊಡಬೇಕು.

ಅಂಥ ಒಂದು ಐತಿಹಾಸಿಕ ಹೋರಾಟಕ್ಕೆ ಜನರ ಮನಸ್ಸನ್ನು ಉಕ್ಕಾಗಿ ತಯಾರಿಸಿದವರು ವಿಯೆಟ್ನಾಮ್ ನ ಸಾಮಾನ್ಯ ಜನತೆಯ 'ಚಿಕ್ಕಪ್ಪ' ಎಂದೇ ಹೆಸರಾದ ಹೊಚಿಮಿನ್.

"ಒಬ್ಬ ವ್ಯಕ್ತಿಯಿಂದ ಎಂದೂ ಕ್ರಾಂತಿ ಸಾಧ್ಯವಿಲ್ಲ; ಅದಕ್ಕೆ ಬೃಹತ್ ಶಕ್ತಿ ಬೇಕು. ಎಲ್ಲಾ ಜನರೂ ಅದರಲ್ಲಿ ಭಾಗವಹಿಸಬೇಕು. ನಮ್ಮ ಸದಸ್ಯರು ಮೃದು ಹೃದಯದವರಾಗಬೇಕು. ತೆರೆದ ಮನಸ್ಸಿನ ಪ್ರಾಮಾಣಿಕರಾಗಬೇಕು. ಜನರ ಮುಂದೆ ಯಾವುದೇ ದರ್ಪದ ಅಹಂಕಾರದ ಪ್ರವೃತ್ತಿಯನ್ನು ಮೆರೆಯಲು ಅಧಿಕಾರವಿಲ್ಲ". ಹೋಚಿಮಿನ್ ವಿಯೆಟ್ನಾಮ್ ಹೋರಾಟಗಾರರಿಗೆ ಇತ್ತ ನೀತಿ ಸೂತ್ರ. ಈ ಮುಂದಾಳುವಿನ ಇವನ ಸಂಗಡಿಗರ ಮುಂದಾಳತ್ವದಲ್ಲಿ ವಿಶ್ವಾಸವಿಟ್ಟು ಹೋರಾಡಿದ ಕೆಚ್ಚು, ತನ್ಮಯತೆಯಾದರೂ ಎಂತಹದು!

"ಸಮೀಪವೇ ಗುಡುಗಿನಂತೆ ಬಾಂಬು ಸಿಡಿಯುವ ಸದ್ದು ಕೇಳಿಸುತ್ತಿತ್ತು. ಜನರಾರೂ ಇದನ್ನು ಗಮನಿಸಿದಂತೆ ಕಾಣಲಿಲ್ಲ. ಹೆಂಗಸು ಮತ್ತು ಹುಡಿಗಿಯೊಬ್ಬಳು ಹೂವನ್ನು ಹೆಕ್ಕುವ ಕೆಲಸದಲ್ಲಿ ಎಷ್ಟು ಮಗ್ನರಾಗಿದ್ದಾರೆಂದರೆ ಅಮೇರಿಕದ ಮೂರು ಜೆಟ್ ವಿಮಾನಗಳು ಕೆಲವೇ ಅಡಿಗಳ ಅಂತರದಲ್ಲಿ ಮರಳ ಮೇಲೆ ಕಿರುಚುತ್ತಾ ಹಾದು ಹೋದರೂ ಅವರು ಕತ್ತೆತ್ತಿ ನೋಡಲೂ ಇಲ್ಲ.

"ಮಧ್ಯರಾತ್ರಿಯ ಬಳಿಕ ಬೀದಿಗಳು ಜೀವ ಕಳೆಯುತ್ತಿದ್ದವು. ಕಾರಖಾನೆಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ಥಳಾಂತರಗೊಳ್ಳುತ್ತಿದ್ದವು. ಸಂಚಾರಿ ಆಸ್ಪತ್ರೆಗಳು ಸಾಕಷ್ಟು ಇದ್ದವು"

"ತಮ್ಮದೂ ಕಮ್ಯುನಿಸಂ ನ ವಿರೋಧಿ ಯುದ್ಧವೆಂದು ಅಮೇರಿಕಾದವರು ಪ್ರಚಾರ ಮಾಡುತ್ತಿದ್ದರು. ಆದರೆ ಅಲ್ಲಿ ಗಂಡಸರು, ಹೆಂಗಸರು, ವೃದ್ಧರು, ಮಕ್ಕಳು ಮತ್ತು ಎಲ್ಲರೂ ಸೇರಿ ಹೋರಾಟದಲ್ಲಿ ತೊಡಗಿದ್ದರು" ಅದೊಂದು ರಾಷ್ಟ್ರೀಯ ಯುದ್ಧವಾಗಿತ್ತು. ಅವರಿಗೆ ನಿಶ್ಚಿತ ಗುರಿಯಿತ್ತು, ಅದು ಸ್ವಾತಂತ್ರ್ಯ ಮತ್ತು ಸಮಾನತೆಯ ಸಾಧನೆಯಾಗಿತ್ತು.

ಹೀಗೆ ವಿಯೆಟ್ನಾಮ್ ಸ್ವಾತಂತ್ರ್ಯ ಹೋರಾಟ ರೋಮಾಂಚನಕಾರಿಯಾದುದು. ಇಂಥ ಒಂದು ಚಿತ್ರಣವನ್ನು ವಿಯೆಟ್ನಾಮ್ ಕೊಡುತ್ತದೆ. ಅದರ ಮೂಲ ಲೇಖಕ ಟೆರ್‍ರಿಕೆ ನ್ನಾನ್ ಮತ್ತು ಪೀಪಲ್ಸ್ ಪ್ರೆಸ್ಸಿನ ಸದಸ್ಯರು.

– ಡಾ॥ ಆರ್.ವಿ.ಬಂಡಾರಿ

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ ಎಸ್.ಆರ್.ನಗರ, ಬೆಂ.27